22 February 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಮನಸ್ಸು ನಮ್ಮ ಮಾತನ್ನು ಸರಿಯಾಗಿ ಕೇಳಿದರೆ ಮಾತ್ರ ಜೀವನದಲ್ಲಿ ಗೆಲ್ಲಲು ಸಾಧ್ಯ!

-ಸ್ನೇಹಾ ಆನಂದ್

info.varthaman@gmail.com



ದೂರು ಕೊಟ್ಟವನನ್ನೇ ಬಂಧಿಸಿದ ಸರ್ಕಾರ: ಎಂ.ಮೋಹನ್ ಆರೋಪ — ಪುಟ ಸಂ. 2


ಅನ್ನ, ಬೆಲ್ಲದದೋಣಿ, ಕಬ್ಬಿಣದ ಕುದುರೆಗಳು ಕೃತಿ ಅದ್ಭುತವಾದವು — ಪುಟ ಸಂ. 3


ಮಾ.1ಕ್ಕೆ 'ಸೇಫ್ ಮೈಸೂರು ಮ್ಯಾರಥಾನ್–2026' — ಪುಟ ಸಂ. 4


9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 104 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಶಾಸಕ ಲಮಾಣಿ 'ಲೋಕಾ' ಬಲೆಗೆ

## 5 ಲಕ್ಷ ಲಂಚ ಪಡೆಯುವಾಗ ಇಬ್ಬರು ಪಿಎ ಸೇರಿ ಮೂವರ ಬಂಧನ

**ಗದಗ:** ಸಣ್ಣನೀರಾವರಿ ಇಲಾಖೆ ಕಾಮಗಾರಿ ಗುತ್ತಿಗೆ ನೀಡಲು 5 ಲಕ್ಷ ರೂ. ಲಂಚ ಪಡೆಯುವಾಗ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಇಬ್ಬರು ಪಿಎಗಳು ಸೇರಿದಂತೆ ಮೂವರು ಶನಿವಾರ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿದ್ದಾರೆ.

ಲಕ್ಷ್ಮೇಶ್ವರ ಪಟ್ಟಣದಲ್ಲಿರುವ ಶಾಸಕ ಚಂದ್ರು ಲಮಾಣಿಗೆ ಸೇರಿದ ಬಾಲಾಜಿ ಆಸ್ಪತ್ರೆ ಮೇಲೆ ಧಾರವಾಡ ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ನೇತೃತ್ವದ ತಂಡ ದಾಳಿ ನಡೆಸಿದೆ. ಈ ವೇಳೆ ಶಾಸಕ ಚಂದ್ರು ಲಮಾಣಿ ಮತ್ತು ಇಬ್ಬರು ಪಿಎಗಳೂ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಕಂತೆ ಕಂತೆ ಹಣದ ಸಮೇತ ಶಾಸಕ ಚಂದ್ರು ಲಮಾಣಿ, ಅವರ ಸರ್ಕಾರಿ ಪಿಎ ಮಂಜುನಾಥ ವಾಲ್ಮೀಕಿ ಹಾಗೂ ಖಾಸಗಿ ಪಿಎ ಗುರುನಾಯ್ಕ್ ಮೂವರನ್ನೂ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ರಸ್ತೆ ಬದಿ ತಡೆಗೋಡೆ ನಿರ್ಮಾಣ ಸಂಬಂಧ 1 ಕೋಟಿ ಮೊತ್ತದ ಕಾಮಗಾರಿಗೆ ಶಾಸಕರು ಕ್ಲಾಸ್–1 ಗುತ್ತಿಗೆದಾರ ವಿಜಯ ಪೂಜಾರ ಎನ್ನುವವರ ಬಳಿ 11 ಲಕ್ಷ ರೂ.ಗೆ ಬೇಡಿಕೆಯಿಟ್ಟಿದ್ದರು. ಇದರ ಮೊದಲ ಹಂತದ ಹಣವಾಗಿ 5 ಲಕ್ಷ ರೂ. ಪಡೆಯುವಾಗಲೇ ಧಾರವಾಡ ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ನೇತೃತ್ವದ ತಂಡ ದಾಳಿ ನಡೆಸಿದೆ. ಈ ವೇಳೆ ಶಾಸಕರು ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾರೆ. ಶಾಸಕ ಚಂದ್ರು ಲಮಾಣಿ ಸೇರಿ ಮೂವರನ್ನ ಬಂಧಿಸಿರುವ ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ವಿಚಾರಣೆಗೆ ತಯಾರಿ ನಡೆಸಿದ್ದಾರೆ.



ಆಸ್ಪತ್ರೆ ಹಿಂಭಾಗದ ಖಾಸಗಿ ಶಾಲೆಯ ಕಂಪೌಂಡ್ ಒಳಗೆ ಒಗೆದಿದ್ದ ಒಂದು ಲಕ್ಷ ರೂಪಾಯಿ ಕಟ್ಟು ಸಹ ಲೋಕಾಯುಕ್ತರಿಗೆ ಸಿಕ್ಕಿವೆ. ಶಾಸಕ ಚಂದ್ರು ಲಮಾಣಿ ಅವರಿಗೆ ಸೇರಿದ ಬಾಲಾಜಿ ಆಸ್ಪತ್ರೆ ಮೇಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದ್ದಾರೆ. ಶಾಸಕರ ಬಾಲಾಜಿ ಆಸ್ಪತ್ರೆಯಲ್ಲಿ 4.50 ಲಕ್ಷ ಪುಟ 2ಕ್ಕೆ

### ಸ್ಪೀಕರ್ ಖಾದರ್‌ಗೆ ಮಾಹಿತಿ

ಬಿಜೆಪಿ ಶಾಸಕ ಚಂದ್ರ ಲಮಾಣಿ ಬಂಧನದ ಬೆನ್ನಲ್ಲೇ ಸ್ಫೋಟಕ ಮಾಹಿತಿಗಳು ಬಯಲಾಗಿವೆ. ಬಂಧನದ ನಂತರ ಸ್ಪೀಕರ್ ಯು.ಟಿ ಖಾದರ್ ಅವರಿಗೆ ಚಂದ್ರು ಲಮಾಣಿ ಬಂಧನದ ಮಾಹಿತಿಯನ್ನು ಲೋಕಾಯುಕ್ತ ಅಧಿಕಾರಿಗಳೇ ರವಾನೆ ಮಾಡಿದ್ದಾರೆ. ಲೋಕಾಯುಕ್ತ ಅಧಿಕಾರಿಗಳ ಮಾಹಿತಿ ಪ್ರಕಾರ, ಹಣಕ್ಕೆ ಬೇಡಿಕೆಯಿಟ್ಟಿದ್ದ ಆಡಿಯೋ 2 ದಿನಗಳ ಹಿಂದೆಯೇ ಪುಟ 2ಕ್ಕೆ

# ಸ್ನೇಹಮಯಿ ಕೃಷ್ಣ ಬಿಡುಗಡೆ

## ಮುಡಾ ಪ್ರಕರಣ: ನಕಲಿ ಆಡಿಯೋ ವೈರಲ್ ಪ್ರಕರಣ

**ಬೆಂಗಳೂರು:** ಮುಡಾ ಪ್ರಕರಣದ ಆಡಿಯೋ ವೈರಲ್ ಆರೋಪದಲ್ಲಿ ಬಂಧಿತರಾಗಿದ್ದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ತೀವ್ರ ವಿಚಾರಣೆ ಬಳಿಕ ಸೈಬರ್ ಕ್ರೈಂ ಪೊಲೀಸರು ಶನಿವಾರ ಬಿಡುಗಡೆ ಮಾಡಿದ್ದಾರೆ.



ಮುಡಾ ಮಾಜಿ ಆಯುಕ್ತ ನಟೇಶ್ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಲಂಚ ಕೊಟ್ಟು ಮುಂಬಡ್ತಿ ಪಡೆದುಕೊಂಡಿದ್ದಾರೆಂಬ ಆಡಿಯೋವನ್ನು ಸೋಶಿಯಲ್ ಮೀಡಿಯಾದಲ್ಲಿ ಸ್ನೇಹಮಯಿ ಕೃಷ್ಣ ವೈರಲ್ ಮಾಡಿದ್ದರು. ನಕಲಿ ವಿಡಿಯೋ ವೈರಲ್ ಮಾಡಿ ಅಪಪ್ರಚಾರ ಮಾಡಲಾಗಿದೆ ಎಂದು ಸೈಬರ್ ಕ್ರೈಂ ಪೊಲೀಸರಿಗೆ ಮಾಜಿ ಮುಡಾ ಆಯುಕ್ತ ಡಿ.ಬಿ. ನಟೇಶ್ ದೂರು ನೀಡಿದ್ದರು.

ನೀವು ವೈರಲ್ ಮಾಡಿರುವುದು ಅಸಲಿ ಆಡಿಯೋ ಆದರೆ, ಅದನ್ನ ನಿಮಗೆ ಕೊಟ್ಟವರು ಯಾರು? ಎಂದು ಪೊಲೀಸರು ಪ್ರಶ್ನಿಸಿದ್ದಾರೆ. ಸ್ನೇಹಮಯಿ ಕೃಷ್ಣ ಅವರಿಗೆ ಹೀಗೆ ಸಾಲು ಸಾಲು ಪ್ರಶ್ನೆಗಳನ್ನ ಮಾಡಿ ಉತ್ತರ ಪಡೆದುಕೊಳ್ಳುವ ಕೆಲಸವನ್ನು ಪೊಲೀಸರು ಮಾಡಿದ್ದಾರೆ. ಸುದೀರ್ಘ ವಿಚಾರಣೆ ಮಾಡಿದ ಸೈಬರ್ ಕ್ರೈಂ ಪೊಲೀಸರು ಆರ್‌ಟಿಐ ಕಾರ್ಯಕರ್ತನನ್ನು ಬಿಟ್ಟು ಕಳುಹಿಸಿದ್ದಾರೆ.

### ವಿನೋದ್ ಬಂಧನ

ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಕೊಟ್ಟ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಿದ್ದ ಸಿಸಿಬಿ ಪೊಲೀಸರು ಆಡಿಯೋ ಸೃಷ್ಟಿ ಮಾಡಿದ್ದ ಆರೋಪದಲ್ಲಿ ಮೈಸೂರು ಮೂಲದ ವಿನೋದ್ ಎಂಬಾತನನ್ನು ಶನಿವಾರ ಬಂಧಿಸಿದ್ದಾರೆ. ಅದೇ ಪ್ರಕರಣದ ಆರೋಪಿಯಾಗಿರುವ ಸ್ನೇಹಮಯಿ ಕೃಷ್ಣ ಅವರನ್ನ ನೋಟಿಸ್ ಕೊಟ್ಟು ವಿಚಾರಣೆಗೆ ಕರೆದು ಸೈಬರ್ ಕ್ರೈಂ ಪೊಲೀಸರು ಪುಟ 2ಕ್ಕೆ

### ಸಿಎಸ್ ಕ್ಷಮೆ ಕೇಳಿದ ಕೃಷ್ಣ

ಪೊಲೀಸರ ವಿಚಾರಣೆ ಮುಗಿಸಿ ಹೊರಬಂದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಸ್ನೇಹಮಯಿ ಕೃಷ್ಣ ಅವರು, ಕೆಎಎಸ್ ಅಧಿಕಾರಿ ನಟೇಶ್ ಅವರು ನನ್ನ ವಿರುದ್ಧ ಸುಳ್ಳು ದೂರು ನೀಡಿದ್ದಾರೆ. ಈ ಸಂಬಂಧ ಸಿಸಿಬಿ ಪೊಲೀಸರು ನನ್ನನ್ನು ವಿಚಾರಣೆ ನಡೆಸಿ ಬಿಡುಗಡೆ ಮಾಡಿದ್ದಾರೆ ಎಂದು ತಿಳಿಸಿದರು. ನನಗೆ ದೊರೆತ ಆಡಿಯೋದಲ್ಲಿ ನಟೇಶ್ ಮಾತನಾಡಿದ್ದಾರೆ. ಆದರೆ ಮುಂಬಡ್ತಿ ಪುಟ 2ಕ್ಕೆ

# ಡಿಕೆಶಿಗೆ ಹೈಕಮಾಂಡ್ ಬುಲಾವ್

## ಫೆ.26ಕ್ಕೆ ನಮ್ಮ ನಾಯಕನಿಗೆ ಸಿಹಿ ಸುದ್ದಿ: ಶಾಸಕ ಇಕ್ಬಾಲ್



**ರಾಮನಗರ:** ಮುಖ್ಯಮಂತ್ರಿ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕಾಂಗ್ರೆಸ್ ಹೈಕಮಾಂಡ್ ಫೆ.26ರಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಬರಲು ಸೂಚನೆ ನೀಡಿದೆ. ಅಂದು ನಮ್ಮ ನಾಯಕನಿಗೆ ಸಿಹಿ ಸುದ್ದಿ ಸಿಗಲಿದೆ ಎಂದು ಡಿಸಿಎಂ ಆಪ್ತ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ತಿಳಿಸಿದ್ದಾರೆ.

ನಗರದಲ್ಲಿ ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಎರಡೂವರೆ ವರ್ಷ ಅಧಿಕಾರ ಪೂರ್ಣಗೊಳಿಸಿದ್ದಾರೆ. ಉಳಿದ ಎರಡೂವರೆ ವರ್ಷದ ಅವಧಿಗೆ ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕು ಎಂಬುದು ಪಕ್ಷದ ಎಲ್ಲಾ ಸಚಿವರು ಹಾಗೂ ಶಾಸಕರ ಬಯಕೆಯಾಗಿದೆ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವ ಹಿರಿಯ ಸಚಿವ ಸತೀಶ ಜಾರಕಿಹೊಳಿ ಅವರು ಸಹ ನಾಯಕತ್ವ ಗೊಂದಲವನ್ನು ಪರಿಹರಿಸುವಂತೆ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತರಲು ಶಿವಕುಮಾರ್ ತುಂಬಾ ಶ್ರಮಿಸಿದ್ದಾರೆ. ಮುಂದೆ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಪುಟ 2ಕ್ಕೆ

# ಮೋಸ್ಟ್ ವಾಂಟೆಡ್ ಶಂಕಿತ ಉಗ್ರ ಅರ್ಷದ್ ಖಾನ್ ಬಂಧನ

**ಬೆಂಗಳೂರು:** ಬೆಂಗಳೂರಿನಲ್ಲಿ 2023ರ ಗ್ರೆನೇಡ್ ಪತ್ತೆ ಕೇಸ್‌ನಲ್ಲಿ ಮೋಸ್ಟ್ ವಾಂಟೆಡ್ ಶಂಕಿತ ಉಗ್ರನನ್ನು ಎನ್‌ಐಎ ಪೊಲೀಸರು ಬಂಧಿಸಿದ್ದಾರೆ. ಶಂಕಿತ ಉಗ್ರ ಅರ್ಷದ್ ಖಾನ್ ಬಂಧಿತ ಆರೋಪಿ.



ಮೋಸ್ಟ್ ವಾಂಟೆಡ್ ಶಂಕಿತ ಉಗ್ರನ ಖಾಸ ದೋಸ್ತ್ ಈತ. ಬೇಲ್ ಪಡೆದು ತಲೆಮರೆಸಿಕೊಂಡಿದ್ದ. ಈಗ ಆರ್.ಟಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಂಧನಕ್ಕೆ ಒಳಗಾಗಿದ್ದಾನೆ. ಸಿಸಿಬಿ ಅಧಿಕಾರಿಗಳು ನಡೆಸಿದ್ದ ಕಾರ್ಯಾಚರಣೆಯಲ್ಲಿ ಈ ಹಿಂದೆ ಅರ್ಷದ್ ಖಾನ್ ಅರೆಸ್ಟ್ ಆಗಿದ್ದ. ಉಗ್ರ ಚಟುವಟಿಕೆ ಶಂಕೆ ಮೇರೆಗೆ ಸಿಸಿಬಿ ಬಂಧಿಸಿತ್ತು. ನಂತರ ಜಾಮೀನಿನ ಮೇಲೆ ಹೊರಗಿದ್ದ. ಬಳಿಕ ಪ್ರಕರಣ ಎನ್‌ಐಎಗೆ ವರ್ಗಾವಣೆಯಾಗಿತ್ತು. ಜಾಮೀನು ಸಿಕ್ಕಿದ ಮೇಲೆ ಕೋರ್ಟ್ಗೆ ಹಾಜರಾಗಿರಲಿಲ್ಲ. ಶಂಕಿತನ ಮೇಲೆ ಪ್ರೊಕ್ಲೋಮೇಷನ್ ಜಾರಿಯಾಗಿತ್ತು.

ಶಂಕಿತ ಉಗ್ರ ಕುಕ್ಕರ್ ಬಾಂಬ್ ಸ್ಫೋಟದ ರೂವಾರಿ ಜುನೈದ್ ಅಹ್ಮದ್ ಖಾಸಾ ಸ್ನೇಹಿತ. ಜುನೈದ್ ವಿದೇಶಗಳಲ್ಲಿ ತಲೆಮರೆಸಿಕೊಂಡಿದ್ದಾನೆ. ಪುಟ 2ಕ್ಕೆ


# ಗ್ಯಾರಂಟಿಯಿಂದ ಆರ್ಥಿಕ ಶಿಸ್ತು ಕುಸಿತ

## ಸಮೀಕ್ಷೆಗೆ ಸಮಿತಿ ರಚಿಸಲು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಗ್ರಹ

**ಮೈಸೂರು:** ರಾಜ್ಯದಲ್ಲಿ ಪಂಚ ಗ್ಯಾರಂಟಿ ಜಾರಿ ಮಾಡಿದ ನಂತರ ರಾಜ್ಯದಲ್ಲಿ ಅಭಿವೃದ್ಧಿ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ಸಮೀಕ್ಷೆ ನಡೆಸಲು ತಜ್ಞರ ಸಮಿತಿ ರಚಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿಗಳಿಂದ ಏನೇನು ಅಭಿವೃದ್ಧಿಯಾಗಿದೆ ಎಂಬುದನ್ನು ಸರ್ಕಾರ ಹೇಳಲಿ. ಅಭಿವೃದ್ಧಿ ಆಗಿದ್ದರೆ ಯಾವ ರೀತಿಯಲ್ಲಿ ಆಗಿದೆ ಎಂಬುದನ್ನು ಬಹಿರಂಗಪಡಿಸಬೇಕು. ಜೊತೆಗೆ ಅದೇ ಸಂದರ್ಭದಲ್ಲಿ ತೆರಿಗೆ, ಬೆಲೆ ಹೆಚ್ಚಳದಿಂದ ಆಗಿರುವ ಸಮಸ್ಯೆಗಳ ಬಗ್ಗೆಯೂ ಸಮೀಕ್ಷೆ ನಡೆಯಬೇಕು ಎಂದು ಆಗ್ರಹಿಸಿದರು.

ಸರ್ಕಾರ ನಿರ್ದಿಷ್ಟ ಮಾನದಂಡವನ್ನೇ ಇಟ್ಟುಕೊಳ್ಳದೇ ಎಲ್ಲರಿಗೂ ಗ್ಯಾರಂಟಿಗಳನ್ನು ನೀಡಿರುವುದರಿಂದಾಗಿ ಆರ್ಥಿಕ ಶಿಸ್ತೇ ಇಲ್ಲದಂತಾಗಿದೆ. ಜನರ ತೆರಿಗೆ ಹಣವನ್ನೆಲ್ಲಾ ಉಚಿತ ಕೊಡುಗೆಗಳಿಗೆ ಬಳಸುತ್ತಿರುವುದರಿಂದ ಅಭಿವೃದ್ಧಿಯೇ ಇಲ್ಲದಂತಾಗಿದೆ. ಸಮರ್ಪಕ ಆಡಳಿತವೇ ಇಲ್ಲದೇ ರಾಜ್ಯದ ಆರ್ಥಿಕ ಸ್ಥಿತಿ ಹಾಳಾಗಿದೆ. ಈ ಅನಾಹುತಕ್ಕೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರಣ ಎಂದು ದೂರಿದರು.



ಉಚಿತ ಕೊಡುಗೆಗಳನ್ನು ಸರ್ಕಾರದ ಹಣದಲ್ಲಿ ಕೊಡುತ್ತಿರುವುದು ಸರಿಯಲ್ಲ. ಅದರ ಬದಲಿಗೆ ಜನರನ್ನು ಸಬಲೀಕರಣ ಮಾಡಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ವೃದ್ಧಾಪ್ಯ ವೇತನ, ಅಂಗವಿಕಲರ ಪುಟ 2ಕ್ಕೆ

### ಸಿದ್ದು ಮಾತು ತಪ್ಪಿದ ಮಗ!

ಸಿದ್ದರಾಮಯ್ಯನವರೇ, ಮಾತು ತಪ್ಪಿದ ಮಗ ನೀವು. ಡಿ.ಕೆ. ಶಿವಕುಮಾರ್ ಅವರಿಗೆ ಹೊಡೆತ ಕೊಟ್ಟಿದ್ದೀರಿ. ಈ ಸರ್ಕಾರ ಬರಲು ಶಿವಕುಮಾರ್ ಅವರ ಕೊಡುಗೆ ಏನೂ ಇಲ್ಲವೇ? ಅವರಿಗೆ ಅಧಿಕಾರ ಕೊಡಬೇಕಲ್ಲವೇ? ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರಶ್ನಿಸಿದರು.

ನಾನೇ ಮಹಾಮೇಧಾವಿ, ಮಹಾ ಆರ್ಥಿಕ ತಜ್ಞ ಹಾಗೂ ಮಹಾಬುದ್ಧಿವಂತ ಎಂಬ ಅಹಂ ಬಿಟ್ಟು, ಅರ್ಹರಿಗೆ ಮಾತ್ರವೇ ಗ್ಯಾರಂಟಿ ಯೋಜನೆಗಳನ್ನು ಕೊಡಿ. ಇದರ ಬದಲಿಗೆ ಶಿಕ್ಷಣ ಹಾಗೂ ಆರೋಗ್ಯವನ್ನು ಉಚಿತವಾಗಿ ಕೊಡಿ ಎಂದು ಆಗ್ರಹಿಸಿದರು. ಸಿದ್ದರಾಮಯ್ಯನವರೇ, ರಾಜ್ಯದ ಚರಿತ್ರೆ ಓದಿಕೊಳ್ಳಿ. ನಾನೇ ನಾನೇ ಪುಟ 2ಕ್ಕೆ

# ಮಹದೇಶ್ವರ ಬೆಟ್ಟ: ಮತ್ತೆ ಚಿರತೆ ಪ್ರತ್ಯಕ್ಷ

**ಚಾಮರಾಜನಗರ:** ಜಿಲ್ಲೆಯ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವ ರಸ್ತೆಯಲ್ಲಿ ಮತ್ತೆ ಚಿರತೆ ಕಾಣಿಸಿಕೊಂಡಿದೆ. ಇದು ಪಾದಯಾತ್ರೆ ಮತ್ತು ದ್ವಿಚಕ್ರ ವಾಹದಲ್ಲಿ ತೆರಳುವ ಭಕ್ತರ ಆತಂಕಕ್ಕೆ ಕಾರಣವಾಗಿದೆ.

ತಾಳುಬೆಟ್ಟದಿಂದ ಮಹದೇಶ್ವರ ಬೆಟ್ಟ ಮಾರ್ಗದ 5ನೇ ತಿರುವಿನಲ್ಲಿ ಚಿರತೆ ಕಾಣಿಸಿಕೊಂಡಿದೆ. ದ್ವಿಚಕ್ರ ವಾಹನ ಸವಾರರು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಚಿರತೆಯ ಚಿತ್ರ ಸೆರೆ ಹಿಡಿದಿರುವುದು ವೈರಲ್ ಆಗಿದೆ. ರಾತ್ರಿ ವೇಳೆ ಯಾರೂ ಕೂಡ ದ್ವಿಚಕ್ರ ವಾಹನದಲ್ಲಿ ತೆರಳದಂತೆ ಮನವಿ ಮಾಡಿದ್ದಾರೆ.

ಚಿರತೆ ಸೆರೆಗೆ ಬೋನುಗಳನ್ನು ಕೂಡ ಅರಣ್ಯ ಇಲಾಖೆ ಅಳವಡಿಸಿತ್ತು. ಇದೀಗ ಶಿವರಾತ್ರಿ ಜಾತ್ರೆ ಕೂಡ ಮುಕ್ತಾಯವಾದ ಹಿನ್ನೆಲೆ ಪಾದಯಾತ್ರೆ ಮೂಲಕ ಹೋಗುವವರಿಗೆ ಜಾಗೃತಿ ಮೂಡಿಸಬೇಕಿದೆ. ಅಲ್ಲದೇ ಅವರ ರಕ್ಷಣೆಗೂ ಕೂಡ ಆದ್ಯತೆ ಕೊಡಬೇಕಿದೆ.




# ಕಾವೇರಿ ನರ್ಸಿಂಗ್ ಕಾಲೇಜಿನಲ್ಲಿ ಬೆಂಕಿ

**ಮೈಸೂರು:** ನಗರದ ದೇವೇಗೌಡ ಸರ್ಕಲ್ ನಲ್ಲಿರುವ ಕಾವೇರಿ ನರ್ಸಿಂಗ್ ಕಾಲೇಜಿನಲ್ಲಿ ಶನಿವಾರ ಅಗ್ನಿ ಅವಘಡ ಸಂಭವಿಸಿದೆ. ಕಾಲೇಜು ಕಟ್ಟಡದ ಮೇಲ್ಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕಟ್ಟಡ ಧಗಧಗನೆ ಹೊತ್ತಿ ಉರಿದಿದೆ. ಶಾರ್ಟ್ ಸರ್ಕೀಟ್ ನಿಂದ ಈ ಅವಘಡ ಸಂಭವಿಸಿದೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿಯನ್ನು ನಂದಿಸಿದ್ದಾರೆ.



# ಟ್ರ್ಯಾಕ್ಟರ್ ಪಲ್ಟಿ: ನಾಲ್ವರು ಸಾವು

**ಬಾಗಲಕೋಟೆ:** ಕಬ್ಬು ಕಟಾವು ಮಾಡುವ ಕೂಲಿ ಕಾರ್ಮಿಕರು ತೆರಳುತ್ತಿದ್ದ ಟ್ರ್ಯಾಕ್ಟರ್‌ನ ಟ್ರಾಲಿ ಕಟ್ ಆಗಿ ಪಲ್ಟಿಯಾಗಿ 2 ವರ್ಷದ ಮಗು ಸೇರಿದಂತೆ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಜಮಖಂಡಿ ಕಟ್ಟೆ ಕೆರೆ ಬಳಿ ಮಧ್ಯರಾತ್ರಿ ನಡೆದಿದೆ.



ಮಹಾರಾಷ್ಟ್ರದ ಬೂಸಾ ತಾಲೂಕಿನ ಗುಪವಾಡಿ ನಿವಾಸಿಗಳು ಮೃತಪಟ್ಟವರು ಎಂದು ಗುರುತಿಸಲಾಗಿದೆ. ಕೂಲಿ ಕಾರ್ಮಿಕರಾದ ಮನೀಷ್ ಪಾಂಡೆ (23), ಮಗು ಹಲಕಿ ಪಾಂಡೆ (2), ಲಕ್ಷ್ಮಿ ಚಿರಮಡಿ (27) ಮತ್ತು ರೇಖಾ ಭೂಕೆ (28) ಮೃತರು. ಶುಕ್ರವಾರ ಮಧ್ಯರಾತ್ರಿ 2 ಗಂಟೆ ವೇಳೆ ದುರ್ಘಟನೆ ನಡೆದಿದೆ. ಮಹಾರಾಷ್ಟ್ರದಿಂದ ಕಬ್ಬು ಕಟಾವು ಮಾಡಲು ಬಂದಿದ್ದ ಕೂಲಿ ಕಾರ್ಮಿಕರು ಪ್ರಯಾಣ ಮಾಡುತ್ತಿದ್ದ ವಾಹನದ ಟ್ರಾಲಿಗಳು ಕಟ್ ಆಗಿ ಪಲ್ಟಿಯಾಗಿ ಅವಘಢ ಸಂಭವಿಸಿದೆ. ಒಂದು ಟ್ರಾಲಿ ಮೇಲೆ ಮತ್ತೊಂದು ಟ್ರಾಲಿ ಮಗುಚಿ ಬಿದ್ದಿದೆ.

# ಮಾಜಿ ಸಿಎಂ ಬೊಮ್ಮಾಯಿ ಪಿಎ ಪುತ್ರ ಆತ್ಮಹತ್ಯೆ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪರ್ಸನಲ್ ಸೆಕ್ರೆಟರಿ ಚಂದ್ರು ಅವರ ಪುತ್ರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೇಮಂತ್ (20) ಆತ್ಮಹತ್ಯೆ ಮಾಡಿಕೊಂಡ ಯುವಕ.



ಬೆಂಗಳೂರಿನ ಸಂಜಯ ನಗರ ನಿವಾಸದಲ್ಲಿ ಬೊಮ್ಮಾಯಿ ಅವರ ಪಿಎಸ್ ಚಂದ್ರು ಅವರು ವಾಸಿಸುತ್ತಿದ್ದರು. ಶನಿವಾರ ಬೆಳಗ್ಗೆ ಕೋಣೆಯ ಬಾಗಿಲು ತೆಗೆದಾಗ ಹೇಮಂತ್ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಚಂದ್ರ ಕುಟುಂಬಸ್ಥರೆಲ್ಲರೂ ತಿರುಪತಿಗೆ ತೆರಳಲು ಸಿದ್ಧತೆ ಮಾಡಿಕೊಂಡಿದ್ದರು. ಶುಕ್ರವಾರ ಹೇಮಂತ್‌ನ ತಂಗಿಗೆ ಆಭರಣ ಕೊಡಿಸಲಾಗಿತ್ತು. ಈ ಸಂಬಂಧ ತಾಯಿ ಜೊತೆ ಹೇಮಂತ್ ಜಗಳ ಮಾಡಿಕೊಂಡಿದ್ದನು. ತಂಗಿಗೆ ಕೇಳಿದ್ದೆಲ್ಲಾ ಕೊಡಿಸ್ತೀರಾ, ನನಗೇನೂ ಕೊಡಿಸಲ್ಲ ಎಂದು ಕೋಪದಲ್ಲಿ ಕೋಣೆಗೆ ಹೋಗಿದ್ದ ಹೇಮಂತ್ ಬಾಗಿಲು ಹಾಕಿಕೊಂಡಿದ್ದನು. ರಾತ್ರಿ ಊಟಕ್ಕೆ ಕರೆದರೂ ಹೇಮಂತ್ ಕೋಣೆಯಿಂದ ಹೊರಗೆ ಬಂದಿರಲಿಲ್ಲ. ನಿನ್ನೆ ರಾತ್ರಿ ಸುಮಾರು 8 ಗಂಟೆವರೆಗೂ ಸ್ನೇಹಿತರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದಾನೆ. ನಂತರ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದಾನೆ. ರಾತ್ರಿ ಸುಮಾರು 12 ಗಂಟೆಗೆ ಹೇಮಂತ್ ನೇಣು ಬಿಗಿದುಕೊಂಡಿರುವ ಸಾಧ್ಯತೆಗಳಿವೆ ಎಂದು ಪೋಷಕರು ಸಂಜಯನಗರ ಠಾಣೆಗೆ ದೂರು ನೀಡಿದ್ದಾರೆ. ತನಿಖೆ ನಡೆಯುತ್ತಿದೆ.

# ಪರಪ್ಪನ ಅಗ್ರಹಾರ ಜೈಲಿಗೆ ಶಾಸಕ ಬೈರತಿ ಬಸವರಾಜ್

**ಬೆಂಗಳೂರು:** ಬಿಕ್ಲು ಶಿವ ಕೊಲೆ ಪ್ರಕರಣದ ಆರೋಪಿ, ಶಾಸಕ ಬೈರತಿ ಬಸವರಾಜ್ ಅವರನ್ನು ಫೆ.26ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿ ಜನಪ್ರತಿನಿಧಿಗಳ ಕೋರ್ಟ್ ಶನಿವಾರ ಆದೇಶ ಹೊರಡಿಸಿದೆ.



ಬೈರತಿ ಬಸವರಾಜ್ ಅವರನ್ನು ಬಂಧಿಸಿ ಏಳು ದಿನಗಳ ಕಾಲ ಕಸ್ಟಡಿಗೆ ಪಡೆದಿದ್ದ ಸಿಐಡಿ ಪೊಲೀಸರು 42ನೇ ಎಸಿಜೆಎಂ ಕೋರ್ಟ್ ಮುಂದೆ ಶನಿವಾರ ಹಾಜರುಪಡಿಸಿದರು. ವಿಚಾರಣೆ ವೇಳೆ ಬೈರತಿ ಬಸವರಾಜ್‌ಗೆ ಹೃದಯ ಸಂಬಂಧಿ ಕಾಯಿಲೆ ಇದೆ. ಹಾಗಾಗಿ ಸೋಮವಾರ ಜಾಮೀನು ಅರ್ಜಿ ವಿಚಾರಣೆ ಇದೆ. ಅಲ್ಲಿ ತನಕ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಎಂದು ಬೈರತಿ ಬಸವರಾಜ್ ಪರ ವಕೀಲರು ಮನವಿ ಮಾಡಿದರು. ಆದರೆ ಸಿಐಡಿ ಪರ ವಕೀಲ ಅಶೋಕ್ ನಾಯಕ್ ವಾದ ಮಂಡಿಸಿ ಜಯದೇವ ಆಸ್ಪತ್ರೆ ಯಲ್ಲಿ ರಿಪೋರ್ಟ್ ನಲ್ಲಿ ಪುಟ 2ಕ್ಕೆ

# ತುರಗನೂರು ನಾಲೆ ಆಧುನೀಕರಣ

## 1800 ಎಕರೆಗೆ ನೀರು: ಸಚಿವ ಮಹದೇವಪ್ಪ ಭರವಸೆ



**ಮೈಸೂರು:** ವಿಶ್ವೇಶ್ವರಯ್ಯ ಶಾಖಾ ನಾಲೆಯಾದ ತುರಗನೂರು ನಾಲೆ ಆಧುನೀಕರಣದಿಂದ ಸುಮಾರು 1800 ಎಕರೆ ಪ್ರದೇಶಕ್ಕೆ ನೀರು ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ತಿ.ನರಸಿಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿದರವಳ್ಳಿಯಲ್ಲಿ ಶನಿವಾರ 91.33 ಕೋಟಿ ರೂ. ವೆಚ್ಚದ ತುರಗನೂರು ವಿಸ್ತರಣೆ, ಉಕ್ಕಲಗೆರೆ ಹಾಗೂ ಹಲವಾರ ಶಾಖಾ ನಾಲೆಗಳ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತುರಗನೂರು ನಾಲೆ ಅಭಿವೃದ್ಧಿಯ

# ಮೈಸೂರು ನಗರದಿಂದ ಸ್ಪರ್ಧಿಸುವರೇ ಸಿದ್ದು?

## ಯತೀಂದ್ರ ಸಿದ್ದರಾಮಯ್ಯ ಪ್ರಶ್ನೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಸವಾಲು

**ಮೈಸೂರು:** ನಿಮ್ಮಪ್ಪ ಸಿದ್ದರಾಮಯ್ಯ ಅವರಿಗೆ ತಾಕತ್ತಿದ್ದರೆ ಮೈಸೂರು ನಗರದ ಕ್ಷೇತ್ರದಲ್ಲಿ ಸ್ಪರ್ಧಿಸಲು ಹೇಳಿ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ ನಡೆಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಾಪ ವರುಣದಿಂದ ಸ್ಪರ್ಧಿಸಲಿ ಎಂದು ಕೆಲವರಿಂದ ಹೇಳಿಸುತ್ತಿದ್ದೀರಲ್ಲಾ, ನಿಮ್ಮಪ್ಪ ಬೆಂಗಳೂರಿನಿಂದ ಮೈಸೂರಿಗೆ ಆರಾಮವಾಗಿ ಓಡಾಡುತ್ತಿರುವ ಹೆದ್ದಾರಿ ಮಾಡಿಸಿದ್ದು ಪ್ರತಾಪ ಸಿಂಹ ಎನ್ನುವುದು ನೆನಪಿರಲಿ. ಅಂತಹ ಒಂದು ರಸ್ತೆಯನ್ನಾದರೂ ನಿಮ್ಮಪ್ಪ ಮೈಸೂರಿನಲ್ಲಿ ಮಾಡಿಸಿದ್ದಾರಾ? ಎಂದು ಪ್ರಶ್ನಿಸಿದರು.

ಕೆಲಸ ಇಲ್ಲದವರ ಆರೋಪಕ್ಕೆ ಉತ್ತರ ಕೊಡುವುದಿಲ್ಲ ಎಂಬ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕೆಲಸವೆಂದರೆ ಬರೀ ವರ್ಗಾವಣೆ ಮಾಡಿಸೋದಾ? ವರ್ಗಾವಣೆ ಪಟ್ಟಿ ಕೊಟ್ಟು ಅಪ್ಪ.. ಅಪ್ಪ.. ನಾ ಕೊಟ್ಟಿರುವುದನ್ನಷ್ಟೆ ಮಾಡಿ ಎನ್ನುವುದು ಮಾತ್ರವೇ ಕೆಲಸವೇ? ಅಪ್ಪನ ಅಧಿಕಾರ ದುರುಪಯೋಗ ಮಾಡಿಕೊಂಡು ಲ್ಯಾಬ್ ಹೆಸರಲ್ಲಿ ಹಣ ಮಾಡುವುದೇ ಕೆಲಸವೇ? ಎಂದು ಪ್ರಶ್ನಿಸಿದರು.



ಯತೀಂದ್ರ ನೀವು ಎಂಎಲ್‌ಸಿಯಷ್ಟೆ. ಯಾವ ಅಧಿಕಾರದ ಮೇಲೆ ನೀವು ವರ್ಗಾವಣೆ ಮಾಡಿಸುತ್ತೀರಾ?

ಯತೀಂದ್ರ ಅವರೇ ನಿಮ್ಮಂಥ ಕೆಲಸವನ್ನು ನಾನು ಯಾವತ್ತೂ ಮಾಡಲ್ಲ. ವರ್ಗಾವಣೆ ದಂಧೆ ನಿಮಗೇ ಇರಲಿ. ನಿಮ್ಮಪ್ಪನೂ ಚುನಾವಣೆಯಲ್ಲಿ ಸೋತಿದ್ದರು. ಆಗ

### ಒಂದು ಸಮುದಾಯಕ್ಕೆ ನೆಮ್ಮದಿ

**ಮೈಸೂರು:** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಿಂದ ರಾಜ್ಯದಲ್ಲಿ ಒಂದು ಸಮುದಾಯಕ್ಕೆ ಮಾತ್ರ ನೆಮ್ಮದಿ ಸಿಕ್ಕಿದೆ. ಮುಸ್ಲಿಮರ ಓಲೈಕೆ ಮಾಡುವುದೇ ಆಡಳಿತ ಎಂದು ಸಿಎಂ ಅಂದುಕೊಂಡಿದ್ದಾರೆಂದು ಮಾಜಿ ಸಂಸದ ಪ್ರತಾಪ ಸಿಂಹ ಟೀಕಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶ ಮೂರ್ತಿ ವಿಸರ್ಜನೆ ಹಾಗೂ ಶಿವಾಜಿ ಜಯಂತಿ ಮೆರವಣಿಗೆ ಮೇಲೆ ಮಸೀದಿಯಿಂದ ಕಲ್ಲು ತೂರುವವರಿಗೆ ಮಾತ್ರವೇ ನೆಮ್ಮದಿ ಸಿಕ್ಕಿದೆ ಎಂದು ದೂರಿದರು.

ಹಿಂದೂಗಳು ಎಚ್ಚೆತ್ತುಕೊಳ್ಳದಿದ್ದರೆ ಮದುವೆ ಮಂಟಪ, ಶವಯಾತ್ರೆ ಮೇಲೂ ಕಲ್ಲು ಬೀಳುತ್ತದೆ. ಸಿದ್ದರಾಮಯ್ಯ ಅವರು

# ಕಾಂಗ್ರೆಸ್ ಕಚೇರಿಗೆ ಬಿಜೆಪಿ ಯುವಮೋರ್ಚಾ ಮುತ್ತಿಗೆ ಯತ್ನ, ಬಿಡುಗಡೆ






ಮೈಸೂರು: ದೆಹಲಿಯಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಡೆಯನ್ನು ಖಂಡಿಸಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆಗೆ ಯತ್ನಿಸಿದ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದ ಘಟನೆ ನಡೆಯಿತು.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಜಮಾವಣೆಗೊಂಡ ನಗರ ಹಾಗೂ ಗ್ರಾಮಾಂತರ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರು ಕಾಂಗ್ರೆಸ್ ಹಾಗೂ ರಾಹುಲ್ ಗಾಂಧಿ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಯುವಮೋರ್ಚಾ ನಗರಾಧ್ಯಕ್ಷ ರಾಕೇಶ್ ಗೌಡ ಮಾತನಾಡಿ, ವಿಶ್ವಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಇದಾಗಿದೆ. ಅದರಲ್ಲೂ ಎಐ ಶೃಂಗಸಭೆಯಂತಹ ದೊಡ್ಡ, ಜಾಗತಿಕ ವೇದಿಕೆಯಲ್ಲಿ ಪ್ರತಿಭಟನೆ ಸೋಗಿನಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷ ತನ್ನ ಹತಾಶೆ, ಅಸಹನೆಯನ್ನು ಕೆಟ್ಟ ರೀತಿಯಲ್ಲಿ ಬೀದಿಗೆ ತಂದಿದೆ. ಅಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ಜಾಗತಿಕವಾಗಿ ದೇಶದ ಹಿರಿಮೆಗೆ ಮಸಿ ಬಳಿಯುವ ನೀಚ ಮಟ್ಟಕ್ಕೆ ಇಳಿದಿದೆ ಎಂದು ಕಿಡಿಕಾರಿದರು. ವಿದೇಶಿ ಗಣ್ಯರ ಮುಂದೆ ಅಸಭ್ಯ ಪ್ರದರ್ಶನದ ಮೂಲಕ ದೇಶದ ಘನತೆಗೆ ಕುಂದುಂಟು ಮಾಡುವ ಯೂತ್ ಕಾಂಗ್ರೆಸ್ಸಿನ ಅಸಭ್ಯ ನಡೆ ಅತ್ಯಂತ ಖಂಡನೀಯ. ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತೆ, ಎಲ್ಲ ಕಡೆ ಕುಸಿಯುತ್ತಿರುವ ತನ್ನ ನೆಲೆಯಿಂದ ತಲೆ ಕೆಟ್ಟು, "ದೇಶಕ್ಕಿಂತ ಸ್ವಾರ್ಥವೇ ಲೇಸು" ಎನ್ನುವ ದುಸ್ಥಿತಿ ಕಾಂಗ್ರೆಸ್ಸಿಗೆ ಬಂದಿದೆ. ದೇಶದ ಜನತೆ ಕಾಂಗ್ರೆಸ್ ಪಕ್ಷದ ಈ ಅಸಹ್ಯ ವರ್ತನೆಯನ್ನು ಎಂದಿಗೂ ಕ್ಷಮಿಸರು.ಅಧಿಕಾರ ಲಾಲಸೆ, ಅಸಹನೆಗಳಿಂದ ದೇಶದ ಘನತೆಗೆ ಮಸಿ ಬಳಿಯುವ ಕಾಂಗ್ರೆಸ್ಸಿನ ಇಂತಹ ಅಸಭ್ಯ ಕುತಂತ್ರಗಳಿಗೆ ಧಿಕ್ಕಾರ. ಇಡೀ ದೇಶ ಕಾಂಗ್ರೆಸ್ ವರ್ತನೆಯನ್ನು ಖಂಡಿಸುತ್ತಿದ್ದು, ರಾಷ್ಟ್ರವಿರೋಧಿ ಕಾಂಗ್ರೆಸ್ ಪಕ್ಷದ ವಿರುದ್ಧ ಬೆಂಗಳೂರಿನಲ್ಲಿ ಇಂದು ನಮ್ಮ ಯುವ ಮೋರ್ಚಾ ವತಿಯಿಂದ ಬೃಹತ್ ಪ್ರತಿಭಟನೆಯನ್ನು ನಡೆಸಲಾಯಿತು ಎಂದು ತಿಳಿಸಿದರು.

ನಗರ ಉಪಾಧ್ಯಕ್ಷ ಅರುಣ್ ಕುಮಾರ್ ಗೌಡ ಮಾತನಾಡಿ, ಎಐನಲ್ಲಿ ಹೊಸ ಮೈಲಿಗಲ್ಲನ್ನು ಕೇಂದ್ರ ಬಿಜೆಪಿ ಬರೆಯಲು ಹೊರಟಿರುವುದನ್ನು ಸಹಿಸದ ಕಾಂಗ್ರೆಸ್ ಇಂತಹ ಹೀನಾಯ ಸ್ಥಿತಿಯಲ್ಲಿ ಪ್ರತಿಭಟಿಸುವುದು ಖಂಡನೀಯ. ಇಂತಹ ನಡೆಯನ್ನು ಹೀಗೆ ಮುಂದುವರೆಸಿದರೆ ಮತ್ತಷ್ಟು ಉಗ್ರ ರೂಪದಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು. ಗ್ರಾಮಾಂತರ ಅಧ್ಯಕ್ಷ ಅರ್ಜುನ್ ಪಾರ್ಥ, ನಗರ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಡಿ.ಲೋಹಿತ್, ಆರ್.ಸಚಿನ್ ಮತ್ತು ನಗರ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಸೋಮಸುಂದರ್, ರುದ್ರಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸದಾನಂದ, ರಾಜ್ಯ ಕಾರ್ಯಕಾರಣಿ ಸದಸ್ಯ ಗಿರಿಧರ್, ನಗರ ಉಪಾಧ್ಯಕ್ಷ ಅರುಣ್ ಕುಮಾರ್ ಗೌಡ, ಶ್ರೀಕಂಠಮೂರ್ತಿ, ಮಂಡಲ ಅಧ್ಯಕ್ಷರಾದ ಫೈಟಿ ರವಿ, ಸ್ಮಾರ್ಟ್ ಮಂಜು, ವೇಲು, ಸಂತೋಷ್, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಪರೀಕ್ಷಿತ ರಾಜೇ ಅರಸ್, ಜೋಗಿ ಮಂಜು, ಕೃಷ್ಣಮೂರ್ತಿ ರಾವತ್ ಡಾನ್, ಬದ್ರಿಶ್, ಯುವ ಮೋರ್ಚಾ ಪದಾಧಿಕಾರಿಗಳಾದ ಉಮೇಶ್, ಪುನೀತ್, ಮನು, ಚೇತನ್, ಕಿರಣ್ ನಾಯ್ಡು, ನವೀನ್ ಶೆಟ್ಟಿ, ಧನರಾಜ್, ನಿಶಾಂತ್, ಅರ್ಜುನ್, ಮೋಹನ್, ನವೀನ್ ರಾಜ್, ಕಾರ್ತಿಕ್ ಪರಿಯಪ್ಪ, ನಾಣಿಗೌಡ ಮುಂತಾದವರು ಇದ್ದರು.

### ಪೊಲೀಸರೊಂದಿಗೆ ವಾಗ್ವಾದ

**ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಕಾಂಗ್ರೆಸ್ ಕಚೇರಿ ಮುತ್ತಿಗೆಗೆ ತೆರಳಿದ ಕಾರ್ಯಕರ್ತರನ್ನು ರಸ್ತೆ ಮಧ್ಯೆದಲ್ಲೇ ಪೊಲೀಸರು ತಡೆದರು. ಈ ವೇಳೆ ಪೊಲೀಸರೊಂದಿಗೆ ವಾಗ್ವಾದ ನಡೆದು ಬಳಿಕ ಒತ್ತಾಯದಿಂದ ಎಲ್ಲರನ್ನೂ ವಶಕ್ಕೆ ಪಡೆದು ಅನಂತರ ಸಿಎಸ್ ಆರ್ ಮೈದಾನಕ್ಕೆ ಕರೆದೊಯ್ದು ಬಿಡುಗಡೆ ಮಾಡಿದರು.**

**ಮೊದಲ ಪುಟದಿಂದ**

### ಡಿಕೆಶಿಗೆ ಹೈಕಮಾಂಡ್ ಬುಲಾವ್

ಸಂಘಟಿಸಬೇಕಾದರೆ ಅವರಿಗೂ ಅಧಿಕಾರ ನೀಡಬೇಕು ಎಂದು ಒತ್ತಾಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡಿರುವ ಪೋಸ್ಟ್ ಕುರಿತು ಪ್ರತಿಕ್ರಿಯಿಸಿದ ಹುಸೇನ್, ನಾನೂ ಸೇರಿದಂತೆ ಪಕ್ಷದ 140 ಶಾಸಕರೂ ನಾಯಕತ್ವ ಬದಲಾವಣೆ ಬೇಕು ಎಂದು ಕೇಳುದ್ದೇವೆ. ಇದರಲ್ಲಿ ಪಟ್ಟಭದ್ರ ಹಿತಾಸಕ್ತಿಯಾಗಲಿ, ಗುಂಪುಗಾರಿಕೆಯಾಗಲಿ ಇಲ್ಲ ಎಂದು ತಿರುಗೇಟು ನೀಡಿದರು.

### ತುರಗನೂರು ನಾಲೆ ಆಧುನೀಕರಣ

ಬಗ್ಗೆ ಸಮೀಕ್ಷೆ ಅಧ್ಯಯನ ನಡೆಸಲಾಗಿದೆ. ನಂಜಾಪುರ ಏತ ನೀರಾವರಿ ಯೋಜನೆ ಪ್ರಾರಂಭವಾದ ದಿನದಿಂದಲೂ ಇದ್ದ ತೊಡಕನ್ನು ಪ್ರಸಕ್ತ ಸಾಲಿನಲ್ಲಿ ಅಭಿವೃದ್ಧಿಪಡಿಸಲು ಹಾಗೂ ಎಲ್ಲಾ ಮೋಟಾರ್‌ಗಳನ್ನು ಹೊಸದಾಗಿ ಅಳವಡಿಸಿ ದುರಸ್ಥಿಪಡಿಸಲು ಸುಮಾರು ರೂ.20.00 ಕೋಟಿ ಅನುದಾನ ಒದಗಿಸಲಾಗುವುದು ಎಂದು ಹೇಳಿದರು.

ತುರಗನೂರು ಅಭಿವೃದ್ಧಿ ಕಾಮಗಾರಿಯಿಂದ ಸುಮಾರು 100 ಕ್ಯೂಸೆಕ್ ಗಿಂತ ಅಧಿಕ ಪ್ರಮಾಣದ ನೀರು ಸೋಸಲೆ ಹೋಬಳಿಯ ಗ್ರಾಮಗಳಿಗೆ ಲಭಿಸುವುದರಿಂದ ಈ ಪ್ರದೇಶವು ಹಚ್ಚ ಹಸಿರಿನಿಂದ ಕಂಗೊಳಿಸುವ ದಿನಗಳು ದೂರವಿಲ್ಲ ಎಂದರು

ನಂಜಾಪುರ, ಸಿ.ವಿ.ಕೊಪ್ಪಲು, ಹೊಸಕೊಪ್ಪಲು, ಚಿಮಿಲಿ, ಚಿಕ್ಕಕಲ್ಲಣಿ, ಬೊಮ್ಮನಹಳ್ಳಿ, ಎಸ್. ದೊಡ್ಡಪುರ, ಕೆಂಪನಪುರ, ಸೀಗೋಡಿಪುರ, ಬೋಳೇಗೌಡನಹುಂಡಿ, ರಾಮೇಗೌಡನಪುರ, ವಡ್ಡರಕೊಪ್ಪಲು, ಮರಿಯೂರು, ಬಿ.ಬೆಟ್ಟಹಳ್ಳಿ, ಮೇಗಲಕೊಪ್ಪಲು, ಕುಂತನಹಳ್ಳಿ, ದೇವಿನಹಳ್ಳಿ, ಎಂ.ಎಲ್.ಹುಂಡಿ, ಕಳ್ಳಪುರ, ಬೂದಹಳ್ಳಿ, ಉತ್ತಲಗೆರೆ, ಕನ್ನಾಯಕನಹಳ್ಳಿ, ತಮ್ಮಡಿಪುರ, ನಾಗಲಿಗೆರೆ, ಕೋಣಗಹಳ್ಳಿ, ಚಿಟ್ಟಗಯ್ಯನಕೊಪ್ಪಲು, ನೆರೆಗ್ಯಾತನಹಳ್ಳಿ, ಹೊರಳಹಳ್ಳಿ, ಚಿದರವಳ್ಳಿ, ಮುಡುಕನಪುರ. ಹಲವಾರ, ದೊಡ್ಡಬಾಗಿಲು, ಕೊಳತ್ತೂರು ಗ್ರಾಮಗಳಿಗೆ ಈ ಕಾಮಗಾರಿಯಿಂದ ಉಪಯುಕ್ತವಾಗಲಿದೆ ಎಂದು ಅವರು ಹೇಳಿದರು. ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಇತರರು ಇದ್ದರು.

### ಸಿದ್ದು ಮಾತು ತಪ್ಪಿದ ಮಗ!

ಎಂಬ ದುರಹಂಕಾರ ಬಿಡಿ. ಕಾಂಗ್ರೆಸ್ ಸರ್ಕಾರ ಹಿಂದೆಂದೂ ಈ ರೀತಿ ಮಾಡಿರಲಿಲ್ಲ. ಜನರ ಸಬಲೀಕರಣಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಕೊಡುತ್ತಿತ್ತು. ನಿಮ್ಮನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಬಂದಿದ್ದಕ್ಕೆ ಪಶ್ಚಾತ್ತಾಪ ಆಗುತ್ತಿದೆ. ಹೀಗಾಗಿ, ಗಾಂಧೀಜಿ ಪ್ರತಿಮೆಯ ಬಳಿ ಪಶ್ಚಾತ್ತಾಪ ಸಭೆ ಮಾಡೋಣ ಎಂದುಕೊಂಡಿದ್ದೇನೆ ಎಂದು ತಿಳಿಸಿದರು. ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಬಂಧಿಸಿರುವುದು ಖಂಡನೀಯ. ಅವರು ಈ ನೆಲದ ಕಾನೂನಿನ ಮೂಲಕ ಹೋರಾಟ ಮಾಡುತ್ತಿದ್ದಾರೆ. ರಾಜ್ಯದಲ್ಲೇನು ತುರ್ತು ಪರಿಸ್ಥಿತಿ ಇದೆಯೇ? ಸರ್ಕಾರದ ತಪ್ಪು ಹುಡುಕಿದವರನ್ನು ಜೈಲಿಗೆ ಹಾಕುತ್ತೀರಾ? ಎಂದು ಕೇಳಿದರು. ನರೇಗಾ ಮುಗಿದ ಅಧ್ಯಾಯ. ಕೇಂದ್ರ ಸರ್ಕಾರ ಈಗಾಗಲೇ ವಿಬಿ ಜಿರಾಮ್ ಜಿ ಕಾಯ್ದೆಯನ್ನು ಮಾಡಿದೆ. ಅಲ್ಲಿಗೆ ಮುಗಿಯಿತು. ಬದಲಾವಣೆಗೆ ಒಗ್ಗಿಕೊಂಡು ಹೋಗಲೇಬೇಕು ಎಂದು ಪ್ರತಿಕ್ರಿಯಿಸಿದರು.

### ಗ್ಯಾರಂಟಿಯಿಂದ ಆರ್ಥಿಕ ಶಿಸ್ತು ಕುಸಿತ

ವೇತನಕ್ಕೆ ಮಾನದಂಡವಿದೆ. ಆದರೆ, ಗ್ಯಾರಂಟಿಗೆ ಏನಿದೆ? ಸಿದ್ದರಾಮಯ್ಯ ಕೊಟ್ಟರು ಎಂದು ಪ್ರಚಾರ ಪಡೆಯುವ ಹುಚ್ಚೇ? ಎಂದು ಪ್ರಶ್ನಿಸಿದರು. ರಾಜ್ಯಕ್ಕೆ ಈಗ 7.50 ಲಕ್ಷ ಕೋಟಿ ಸಾಲ ಇದೆ. ಅದರಲ್ಲಿ 5 ಲಕ್ಷ ಕೋಟಿ ಸಾಲ ಮಾಡಿರುವವರು ಸಿದ್ದರಾಮಯ್ಯ. ಅವರಿಗಿಂತಲೂ ಉತ್ತಮ ಹಣಕಾಸು ಸಚಿವರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಅವರನ್ನೆಲ್ಲ ಇವರು ಯಾವ ರೀತಿಯಲ್ಲಿ ಮೀರಿಸಿದ್ದಾರೆ? ಸಾಲ ಮಾಡಿ ಉಚಿತವಾಗಿ ಕೊಡುವುದು ಎಷ್ಟು ಸರಿ? ಇದೇನಾ ಸಿದ್ದರಾಮಯ್ಯನವರ ಆರ್ಥಿಕ ತಜ್ಞತೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ 7 ಲಕ್ಷ ಕೋಟಿ ಸಾಲ ಇಟ್ಟುಕೊಂಡು 4 ಲಕ್ಷ ಕೋಟಿ ಬಜೆಟ್ ಕೊಡುವುದು ಯಾವ ಸೀಮೆಯ ಬಜೆಟ್ ಎಂದು ಅವರು ಪ್ರಶ್ನಿಸಿದರು. ಜನರಿಗೆ ಮದ್ಯ ಕುಡಿಸಿ ಆ ಪಾಪದ ಹಣ 45 ಸಾವಿರ ಕೋಟಿಯಲ್ಲಿ ಉಚಿತ ಕೊಡುಗೆ ಕೊಡುತ್ತಿದ್ದೀರಿ. ಪತಿಗೆ ಹೆಂಡ ಕುಡಿಸುವುದು, ಅದರಲ್ಲಿ ಬರುವ ಹಣವನ್ನೇ ಪತ್ನಿಗೆ ಕೊಡುವುದು ನಾಚಿಕೆಗೇಡಲ್ಲವೇ? ಎಂದು ಲೇವಡಿ ಮಾಡಿದರು.

# ದೂರು ಕೊಟ್ಟವನನ್ನೇ ಬಂಧಿಸಿದ ಸರ್ಕಾರ

## ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರ ವಕ್ತಾರ ಎಂ.ಮೋಹನ್ ಆರೋಪ




ಮೈಸೂರು: ನಟೇಶ್‌ಗೆ ಮುಂಬಡ್ತಿ ನೀಡುವ ವೇಳೆ ಲಂಚ ಸ್ವೀಕರಿಸಿದ್ದೀರಿ ಎಂದು ರಾಜ್ಯ ಮುಖ್ಯಕಾರ್ಯದರ್ಶಿಯವವರಿಗೆ ಪತ್ರ ಬರೆದು ದೂರು ಕೊಟ್ಟವನನ್ನೇ ಕಾನೂನು ಬಾಹಿರವಾಗಿ ಬಂಧಿಸಿ, ಆತನ ಮನೆ ಶೋಧ ನಡೆಸಿ ಆತನ ಬಳಿ ಇರುವ ಸಾಕ್ಷ್ಯಗಳ ನಾಶಕ್ಕೆ ಸರ್ಕಾರ ಮುಂದಾಗಿದೆ ಎಂದು ಬಿಜೆಪಿ ನಗರ ವಕ್ತಾರ ಎಂ.ಮೋಹನ್ ಆರೋಪಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸ್ನೇಹಮಯಿ ಕೃಷ್ಣ ಮುಡಾ ಹಗರಣವನ್ನು ಹೊರತೆಗೆದವರಲ್ಲಿ ಪ್ರಮುಖರಾಗಿದ್ದಾರೆ. ಹದಿನೈದು ದಿನಗಳ ಹಿಂದೆ ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಬರೆದಿದ್ದರು. ನಟೇಶ್ ಅವರಿಗೆ ಮುಂಬಡ್ತಿ ನೀಡುವಲ್ಲಿ ಲಂಚ ಸ್ವೀಕರಿಸಿದ್ದು, ಈ ಬಗ್ಗೆ ಯಾವ ದಿನ ವಾಹನದ ಮೂಲಕ ಹಣ ಪಡೆದಿದ್ದಿರಿ ಎಂಬ ಮಾಹಿತಿ ನನ್ನ ಬಳಿಯಿವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ನಾನು ಆ ಸಾಕ್ಷಿ ನಿಮಗೆ ಒದಗಿಸುತ್ತೇನೆಂದು ಪತ್ರ ಬರೆದಿದ್ದರು. ಆದರೆ, ಸದರಿ ಆರೋಪ ತಳ್ಳಿಹಾಕಿದ ಮುಖ್ಯಕಾರ್ಯದರ್ಶಿ ರಜನೀಶ್ ವಾರದಲ್ಲೇ ಉತ್ತರ ನೀಡಿದ್ದಾರೆ. ಮಾತ್ರವಲ್ಲದೆ, ಸರ್ಕಾರ ಸಿಸಿಬಿ ಪೊಲೀಸರ ಮೂಲಕ ಸ್ನೇಹಿಮಯಿ ಕೃಷ್ಣರನ್ನೇ ಬಂಧಿಸಿದ್ದಾರೆಂದರು.

ಮಾತ್ರವಲ್ಲದೆ ಆರೋಪಿತನಿಲ್ಲದ ಸ್ನೇಹಮಯಿ ಕೃಷ್ಣರನ್ನು ವಶಕ್ಕೆ ಪಡೆದಿರುವುದು ಕಾನೂನು ಬಾಹಿರ ನಿಯಮ ಅಧಿಕಾರಿ ಮೇಲೆ ಆರೋಪ ಕೇಳಿ ಬಂದಾಗ ಇಬ್ಬರನ್ನು ಕರೆಸಿ ಸಭೆ ನಡೆಸಿ ಅನಂತರ ಕಾನೂನು ಕ್ರಮ ಕೈಗೊಳ್ಳಬೇಕೆಂಬ ನಿಯಮವಿದೆ. ಆದರೆ, ಇವರ ಪ್ರಕರಣದಲ್ಲಿ ನಿಯಮ ಉಲ್ಲಂಘಿಸಿ ಬಂಧಿಸಲಾಗಿದೆ. ಆರೋಪಿತ ಇಲ್ಲದ ಸಮಯದಲ್ಲಿ ಆತನ ಮನೆ ಶೋಧ ಮಾಡುವಂತಿಲ್ಲ. ಆದರೆ, ಇಲ್ಲಿ ಅಧಿಕಾರಿಗಳು ಮನೆ ಶೋಧದ ನೆಪದಲ್ಲಿ ಆತನ ಬಳಿಯಿದ್ದ ಮುಂಬಡ್ತಿಗೆ ಸಂಬಂಧಿಸಿದ ಲಂಚಸ್ವೀಕಾರದ ಮಾಹಿತಿ ಸಾಕ್ಷ್ಯಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಸರ್ಕಾರದ ಕುಮ್ಮಕ್ಕಿನಿಂದಲೇ ಇದೆಲ್ಲವೂ ನಡೆದಿದೆ. ಹೀಗಾಗಿ ಈ ಕೂಡಲೇ ಮುಡಾ ಹಗರಣದಲ್ಲಿ ಸಮಾನ ಆರೋಪ ಎದುರಿಸುತ್ತಿರುವ ನಟೇಶ್ ಹಾಗೂ ಲಂಚ ಸ್ವೀಕಾರದ ಆರೋಪ ಹೊತ್ತಿರುವ ರಾಜ್ಯದ ಮುಖ್ಯಕಾರ್ಯದರ್ಶಿ ಶಾಲಿನ ರಜನೀಶ್ ರಾಜೀನಾಮೆ ಪಡೆಯೇಬೇಕೆಂದು ಆಗ್ರಹಿಸಿದರು.

> **ಸಿದ್ದರಾಮಯ್ಯನವರ ಟ್ವಿಟ್ ಅವರ ಸಹಾಯಕತೆಯನ್ನು ತೋರಿಸುತ್ತಿದೆ. ಜನರಿಗೆ ಆಕ್ರೋಶ ಇರುವುದು ಅವರ ಕುರ್ಚಿಯ ಮೇಲೆ ಅಲ್ಲ. ಸರ್ಕಾರದ ಮಿತಿ ಮೀರಿದ ಭ್ರಷ್ಟಚಾರ, ಬೆಲೆ ಏರಿಕೆ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಸ್ವತಃ ಭ್ರಷ್ಟಚಾರ ಆರೋಪ ಹೊತ್ತಿ ನಿವೇಶನ ನೀಡಿದ ನಿಮ್ಮ ನಡೆಗೆ ಜನ ಆಕ್ರೋಶ ಭರಿತರಾಗಿದ್ದಾರೆ.**
> – **ಎಲ್.ನಾಗೇಂದ್ರ** ಬಿಜೆಪಿ ನಗರಾಧ್ಯಕ್ಷ

ಸಿಎಂ ಸಿದ್ದರಾಮಯ್ಯ ಅಧಿಕಾರದ ಕೊನೆ ಘಳಿಗೆಯಲ್ಲಿ ಜಾತ್ಯಾತೀತ, ಸಮಾಜವಾದ ಎಲ್ಲವನ್ನೂ ಬಿಟ್ಟು ಕುರ್ಚಿಗಾಗಿ ಜಾತಿಯನ್ನು ಬಳಸಿಕೊಳ್ಳುತ್ತಿರುವುದು ದೊಡ್ಡ ದುರಂತವಾಗಿದೆ. ಬಿಜೆಪಿಯಿಂದ ಸಿದ್ದರಾಮಯ್ಯ ಕುರ್ಚಿಗೆ ಯಾವುದು ಅಪಯಾವಿಲ್ಲ. ಹಾಗೆನಾದರೂ ಇದ್ದರೆ ಅವರ ಪಕ್ಷದಿಂದಲೇ ಅವರ ಕುರ್ಚಿ ಅಲಗಾಡುತ್ತಿದೆ. ಕಳೆದ 30 ವರ್ಷದಿಂದ ಅಧಿಕಾರದಲ್ಲಿರುವ ನಿಮಗೆ ಈಗ ಜಾತಿ ವ್ಯಾಮೋಹದಲ್ಲಿ ಕುರ್ಚಿ ಭದ್ರ ಮಾಡಿಕೊಳ್ಳುತ್ತಿದಿರಿ ಎಂದರು. ಬಿಜೆಪಿ ನಗರಾಧ್ಯಕ್ಷ್ ಎಲ್. ನಾಗೇಂದ್ರ, ಬಿಜೆಪಿ ಮಾದ್ಯಮ ವಕ್ತಾರ ಮಹೇಶ್ ರಾಜೇ ಅರಸ್ ಇನ್ನಿತರರು ಉಪಸ್ಥಿತರಿದ್ದರು.

> **ಕೇಂದ್ರದ ಐತಿಹಾಸಿಕ ಎಐ ಶೃಂಗಸಭೆ ಸಮೀಪದಲ್ಲಿ ಕಾಂಗ್ರೆಸ್ ಅರೆಬೆತ್ತಲೇ ಧರಣಿ ನಡೆಸುವ ಮೂಲಕ ದೇಶಕ್ಕೆ ಅವಮಾನ ಮಾಡಿದೆ. ಇದನ್ನು ಖಂಡಿಸಿ ನಗರದಲ್ಲಿ ಬಿಜೆಪಿ ಯುವಮೋರ್ಚಾ ನಡೆಸುತ್ತಿದ್ದ ಪ್ರತಿಭಟನೆಯನ್ನು ಪೊಲೀಸರ ಮೂಲಕ ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ. ಸುಗಮ ಸಂಚಾರ ವ್ಯವಸ್ಥೆ ಮಾಡದ ಪೊಲೀಸರು ಕಾರ್ಯಕರ್ತರ ಪ್ರತಿಭಟನೆ ಹತ್ತಿಕ್ಕುತ್ತಿರುವುದು ಖಂಡನೀಯ. ದಂಡದ ಮೂಲಕ ವಸೂಲಿ ಮಾಡಿ ಸರ್ಕಾರಕ್ಕೆ ಕೊಡುವುದಕ್ಕೆ ಪೊಲೀಸ್ ಇಲಾಖೆ ಇರುವುದು ಎಂಬಂತಾಗಿದೆ.**
> – **ಎಲ್.ನಾಗೇಂದ್ರ** ಬಿಜೆಪಿ ನಗರಾಧ್ಯಕ್ಷ

**ಮೊದಲ ಪುಟದಿಂದ**

### ಸ್ಪೀಕರ್ ಖಾದರ್‌ಗೆ ಮಾಹಿತಿ

**ಲೋಕಾಯುಕ್ತಕ್ಕೆ ಲಭ್ಯವಾಗಿತ್ತು. ಚಂದ್ರು ಲಮಾಣಿ ಲಂಚ ಕೇಳಿರುವ ಆಡಿಯೋದಲ್ಲಿ ಸಿಕ್ಕಿಬಿದ್ದಿದ್ದರು. ಆಡಿಯೋ ಆಧರಿಸಿ ಎಫ್‌ಐಆರ್ ಕೂಡ ದಾಖಲಿಸಲಾಗಿತ್ತು. ಮುಂಗಡ ಹಣ ನೀಡುವಾಗ ಆಪ್ ಮಾಡಿ ಶಾಸಕರನ್ನ ಖೆಡ್ಡಕ್ಕೆ ಕೆಡವಲಾಗಿದೆ.**

### ಸಿಎಸ್ ಕ್ಷಮೆ ಕೇಳಿದ ಕೃಷ್ಣ

**ವಿಚಾರ ಸಂಬಂಧ ಶಾಲಿನಿ ರಜನೀಶ್ ಲಂಚ ಪಡೆದಿದ್ದಾರೆ ಎಂದು ವಿನೋದ್ ನನಗೆ ಸುಳ್ಳು ಮಾಹಿತಿ ನೀಡಿದ್ದ. ವಿಚಾರಣೆಯಲ್ಲಿ ಹಣವನ್ನು ಪ್ರಭಾವಿ ವ್ಯಕ್ತಿಗಳಿಗೆ ನೀಡಿರುವುದು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾನೆ. ಹೀಗಾಗಿ ಮುಖ್ಯ ಕಾರ್ಯದರ್ಶಿ ಅವರನ್ನು ನಾನು ಕ್ಷಮೆ ಕೇಳುತ್ತೇನೆ. ನಟೇಶ್ ಹಾಗೂ ವಿನೋದ್ ಮಧ್ಯೆ ಹಣಕಾಸಿನ ವಿಚಾರಕ್ಕೆ ಮನಸ್ತಾಪವಿತ್ತು. ನನ್ನನ್ನು ಸಂಪರ್ಕಿಸಿ ಶಾಲಿನಿ ರಜನೀಶ್ ಬಗ್ಗೆ ವಿನೋದ್ ಸುಳ್ಳು ಮಾಹಿತಿ ನೀಡಿದ್ದ. ಈ ಮೂಲಕ ದುರ್ಬಳಕೆ ಮಾಡಿಕೊಂಡಿದ್ದ ಎಂದು ತಿಳಿಸಿದರು.**

### ಮೋಸ್ಟ್ ವಾಂಟೆಡ್ ಶಂಕಿತ ಉಗ್ರ ಅರ್ಷದ್ ಖಾನ್ ಬಂಧನ

ಸದ್ಯ ಶಂಕಿತ ಉಗ್ರ ಅರ್ಷದ್‌ನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

### ಶಾಸಕ ಲಮಾಣಿ 'ಲೋಕಾ' ಬಲೆಗೆ

ರೂಪಾಯಿಯನ್ನು ಸಹ ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೆಚ್ಚಿನ ತನಿಖೆ ನಡೆಯುತ್ತಿದೆ.

# ಕಲೆ, ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಿ: ರಂಗೇಗೌಡ







ಮೈಸೂರು: ಕಲೆ ಎಲ್ಲರಿಗೂ ಒಲಿದು ಬರೋದಿಲ್ಲ ಕೆಲವರಿಗೆ ಮಾತ್ರ ಒಲಿದು ಬರುತ್ತದೆ. ಕಲೆ ಮತ್ತು ಸಂಸ್ಕೃತಿ ಮೈಗೂಡಿಸಿಕೊಂಡರೆ ತಮ್ಮ ಬದುಕನ್ನು ಸುಂದರವಾಗಿ ಕಟ್ಟಿಕೊಡುವ ಶಕ್ತಿ ಕಲೆಗೆ ಇದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಬಿ.ರಂಗೇಗೌಡ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮೈಸೂರು ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ವಿದ್ಯಾರ್ಥಿಗಳ ನಿಲಯಗಳ ವಿದ್ಯಾರ್ಥಿಗಳಿಗೆ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಕಲಾ ತರಬೇತಿ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸಂಗೀತ ನಾಟಕ, ಕ್ರೀಡೆ, ಇವುಗಳಿಗೆ ಯಾವುದೇ ಜಾತಿ ಬೇದ ಇಲ್ಲ. ಧರ್ಮತೀತವಾಗಿ ಎಲ್ಲವನ್ನು ಮೀರಿ ಬೆಳೆದು ಬಂದಿರುವಂತಹದ್ದು.ಈ ಕಲೆಯನ್ನು ಓದುವ ಜೊತೆಯಲ್ಲಿ ಕಲೆಯನ್ನು ಮೈಗೂಡಿಸಿಕೊಳ್ಳಿ. ಬಾಲ್ಯದಿಂದ ಪ್ರೌಢ ವ್ಯವಸ್ಥೆಗೆ ಬರುವ ಮಕ್ಕಳು ಮನಸ್ಸನ್ನು ಬೇರೆ ಕಡೆ ಚಂಚಲಗೊಳಿಸದೆ ಓದಿನ ಕಡೆ ಕೇಂದ್ರೀಕರಿಸಬೇಕು ಯಾವುದೇ ಆಕರ್ಷಣೆಗೆ ಒಳಗಾಗಬೇಡಿ. ಒಳ್ಳೆಯ ಸಂಸ್ಕಾರ, ಸಂಸ್ಕೃತಿಯನ್ನು ಪ್ರತಿಯೊಂದು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದು ಹೇಳಿದರು.

ತರಬೇತುದಾರ ದೇವನಂದ ವರಪ್ರಸಾದ್ ಮಾತನಾಡಿ, ಜಾನಪದ ಕಲೆಯು ಒಬ್ಬರಿಂದ ಒಬ್ಬರು ಕೇಳಿ ಹಾಡುವುದರ ಮೂಲಕ ಬೆಳೆದು ಬಂದಿದೆ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ತರಬೇತಿ ನೀಡಲು ಇಲಾಖೆ ಗಳು ಉತ್ತಮ ಕಾರ್ಯಕ್ರಮ ಆಯೋಜಿಸಿದ್ದು ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಹಾಸ್ಟಲ್ ವಿದ್ಯಾರ್ಥಿಗಳಿಗೆ ಸರಿಯಾದ ತರಬೇತಿ ಸಿಕ್ಕರೆ ಮಕ್ಕಳು ಮುಂದೆ ಬೆಳೆಯುತ್ತಾರೆ. ಕಲಾ ತರಬೇತಿಯಂತಹ ಕಾರ್ಯಕ್ರಮಗಳನ್ನು ಸದುಪಯೋಗ ಮಾಡಿಕೊಂಡರೆ ಜೀವನದಲ್ಲಿ ಮುಂದೆ ಬರಲು ಸಹಾಯಕ ಆಗಲಿದೆ ಕಲೆಗಳನ್ನು ಕಲಿತಾಗ ತನ್ನಲ್ಲಿನ ಚೈತನ್ಯ ಹೊರ ಬರುತ್ತದೆ ಎಂದು ಹೇಳಿದರು. ತರಬೇತಿ ಪಡೆದ ವಿದ್ಯಾರ್ಥಿನಿ ಸಾಕ್ಷಿ ಮಾತನಾಡಿ ಕಲೆ ಬಗ್ಗೆ ಹೆಚ್ಚಿನ ಮತ್ತು ಸಂಸ್ಕೃತಿ ಬಗ್ಗೆ ನಮಗೆ ಯಾವುದೇ ಜ್ಞಾನ ಇರಲಿಲ್ಲ ನೃತ್ಯ, ಸಂಗೀತ,ವೀರಗಾಸೆ ಬಗ್ಗೆ ತರಬೇತಿ ನೀಡಿದ್ದರೆ ಎಂದರು. ಸಮಾಜದಲ್ಲಿ ಶಿಸ್ತಿನಿಂದ ಹೇಗಿರಬೇಕು, ಹೇಗೆ ವರ್ತಿಸಬೇಕು ಎಂದು ತಿಳಿಸಿಕೊಟ್ಟಿದ್ದಾರೆ.

ಧೈರ್ಯ ತುಂಬಿ ವೇದಿಕೆಯ ಮೇಲೆ ಪ್ರದರ್ಶನ ನೀಡುವಂತೆ ತರಬೇತಿ ನೀಡಿದ್ದಾರೆ ಎಂದು ಹೇಳಿದರು. ಕಾರ್ಯ ಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನಿಲಯಪಾಲಕಿ ಕೆ.ಎಸ್.ಮೋಹನ ಕುಮಾರಿ ಇನ್ನಿತರರು ಉಪಸ್ಥಿತರಿದ್ದರು.

**ಮೊದಲ ಪುಟದಿಂದ**

### ವಿನೋದ್ ಬಂಧನ

ಬಂಧಿಸಿದ್ದರು. ಆಡಿಯೋ ಸೃಷ್ಟಿ ಮಾಡಿದ್ದ ಆರೋಪಿ ವಿನೋದ್‌ನನ್ನು ಕೋರ್ಟ್ಗೆ ಹಾಜರುಪಡಿಸಿ, ಪ್ರಕರಣ ಸಂಬಂಧ ಮತ್ತಷ್ಟು ವಿಚಾರಣೆ ಅವಶ್ಯಕತೆ ಇದೆ ಎಂದು ಕಸ್ಟಡಿಗೆ ಪಡೆಯಲು ಸೈಬರ್ ಕ್ರೈಂ ಪೊಲೀಸರು ಮುಂದಾಗಿದ್ದಾರೆ.

### ಒಂದು ಸಮುದಾಯಕ್ಕೆ ನೆಮ್ಮದಿ

ಸಿದ್ದರಾಮನಹುಂಡಿಯಲ್ಲಿ ಹುಟ್ಟಿದ್ದಾರೋ ಅಥವಾ ಯಾವುದೋ ಮೊಹಲ್ಲಾದಲ್ಲಿಯೋ ಗೊತ್ತಾಗುತ್ತಿಲ್ಲ. ಅವರು ಶಿವಾಜಿ ನಗರದವರಾ? ಎಂದು ವಾಗ್ದಾಳಿ ನಡೆಸಿದರು.

### ಮೈಸೂರು ನಗರದಿಂದ ಸ್ಪರ್ಧಿಸುವರೇ ಸಿದ್ದು?

ಅವರನ್ನು ಕೆಲಸ ಇಲ್ಲದವರು ಅಂತಿದ್ರಾ? ನನಗೆ ಟಿಕೆಟ್ ತಪ್ಪಿದೆ ಅಷ್ಟೆ ಎಂದು ವಾಗ್ದಾಳಿ ನಡೆಸಿದರು. ವಿಧಾನಸಭೆಗೆ ಮೈಸೂರಿನಿಂದಲೇ ಗೆದ್ದು ಬರ್ತೀನಿ. ಆಗ ನೀವು ಎಲ್ಲಿರುತ್ತೀರಾ ನೋಡ್ತಿನಿ. ನಿಮ್ಮಂತೆ ಈಗಿನಂತೆ ಹಿಂಬಾಗಿಲಿನಿಂದ ಬರುವ ಜಾಯಮಾನ ನನ್ನದಲ್ಲ. ಯತೀಂದ್ರ ಹೆಸರಿನ ಹಿಂದೆ ಸಿದ್ದರಾಮಯ್ಯ ಎಂದು ಇರದೇ ಇದ್ದಿದ್ದರೆ ನಿಮ್ಮನ್ನು ಯಾವ ಯಂಕಣ್ಣ, ಸೀನಣ್ಣನೂ ಕ್ಯಾರೆ ಎನ್ನುತ್ತಿರಲಿಲ್ಲ. ಅಪ್ಪನ ಹೆಸರಲ್ಲಿ ಅಸ್ತಿತ್ವ ಉಳಿಸಿಕೊಂಡ ನೀವು ನನಗೆ ಪಾಠ ಹೇಳಬೇಡಿ ಎಂದು ಲೇವಡಿ ಮಾಡಿದರು.

### ಜೈಲಿಗೆ ಶಾಸಕ ಬೈರತಿ ಬಸವರಾಜ್

ಅಂತಹ ಗಂಭೀರ ಸ್ವರೂಪದ ಸಮಸ್ಯೆ ಇಲ್ಲವೆಂದು ಇದೆ. ಹಾಗಾಗಿ ಜೈಲಿಗೆ ಕಳುಹಿಸಿ ಅಲ್ಲೇ ಅಗತ್ಯ ಚಿಕಿತ್ಸೆ ನೀಡಲಿ ಎಂದರು. ಫೆ.26ರ ತನಕ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿ ಅಲ್ಲಿಯ ಜಯದೇವ ಆಸ್ಪತ್ರೆ ಡಯಟ್‌ನ ಜೈಲಿನಲ್ಲಿ ಮುಂದುವರೆಸಲು ಕೋರ್ಟ್ ಸೂಚಿಸಿದೆ.

**ಸಂತ ಕವಿ ಕುಂಬಾರ ಅಭಿ ವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಗೋವಿಂದರಾಜು ಅಭಿಮತ**

# ಬದುಕಿನ ನೀತಿಗಳನ್ನು ತಿಳಿಸಿರುವ ಸರ್ವಜ್ಞ



ಎಚ್.ಡಿ.ಕೋಟೆ: ಆಡು ಮುಟ್ಟದ ಸೊಪ್ಪಿಲ್ಲ ಸರ್ವಜ್ಞ ಹೇಳದ ವಿಷಯವಿಲ್ಲ ಎಂಬ ಮಾತಿನಂತೆ ಮಾನ ವೀಯ ಮೌಲ್ಯಗಳು, ಕಾಯಕ, ಭಕ್ತಿ, ನೀತಿಗಳನ್ನು ತಮ್ಮ ವಚನಗಳ ಮೂಲಕ ಸರ್ವಜ್ಞ ಸುಲಭವಾಗಿ ವಿವರಿಸಿದ್ದಾರೆ ಎಂದು ಸಂತ ಕವಿ ಕುಂಬಾರ ಅಭಿ ವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಗೋವಿಂದರಾಜು ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ಆಡಳಿತದ ವತಿಯಿಂದ ಆಡಳಿತ ಭವನದಲ್ಲಿ ನಡೆದ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೂಢ ನಂಬಿಕೆ, ಕಂದಚಾರಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ 16–17ನೆ ಶತಮಾನದಲ್ಲಿಯೇ ಸರ್ವಜ್ಞ ಶ್ರಮಿಸಿದ್ದಾರೆ. ಮೂರು ಸಾಲುಗಳಲ್ಲಿ ಸರಳ ಪದ್ಯಗಳ ಮೂಲಕ ಹಾಸ್ಯ, ನೀತಿ, ಬದುಕಿನ ತತ್ವ, ಸಾಮಾಜಿಕ ಜಾಗೃತಿ ಮೂಡಿಸಿದ್ದಾರೆ. ಸರ್ವಜ್ಞನ ವಚನಗಳು ಇಂದಿಗೂ ಜೀವಂತವಾಗಿವೆ. ಅವುಗಳನ್ನು ಯುವ ಜನತೆ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಕೇವಲ ಸ್ಮರಣೆಗಾಗಿ ಒಂದು ದಿನದ ಕಾರ್ಯಕ್ರಮಕ್ಕೆ ಆಚರಣೆಗಳನ್ನು ಮಾಡಬಾರದು, ಮಹನೀಯರ ತತ್ವ ಆದರ್ಶಗಳನ್ನು ಯುವ ಜನತೆ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಕುಂಬಾರ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ನಾರಾಯಣಶೆಟ್ಟಿ, ಕಾರ್ಯದರ್ಶಿ ಧರ್ಮೇಂದ್ರ, ಸದಸ್ಯರಾದ ಸಣ್ಣರಾಮಶೆಟ್ಟಿ, ಸಂಜೀವ್ ಶೆಟ್ಟಿ, ಆನಂದ್, ರವಿಕುಮಾರ್, ರಮೇಶ್, ಹನುಮಂತ, ರಂಗಶೆಟ್ಟಿ, ವಿ. ಗೋವಿಂದ ಶೆಟ್ಟಿ, ಆರ್.ಜಿ.ಗೋಪಾಲರಾಜು, ರಾಮಚಂದ್ರ, ಸಿದ್ದರಾಜು, ಗೋಪಾಲಶೆಟ್ಟಿ, ಕೃಷ್ಣಶೆಟ್ಟಿ, ವೆಂಕಟಶೆಟ್ಟಿ, ಸಣ್ಣಪ್ಪ ಇದ್ದರು.

### ನಿವೇಶನ ಕೋರಿ ತಾಲೂಕು ಆಡಳಿತಕ್ಕೆ ಮನವಿ

**ಎಚ್.ಡಿ.ಕೋಟೆ ಟೌನ್, ಹೊಸತೊರವಳ್ಳಿ, ಅಂತರಸಂತೆ, ಮಾಚನಾಯಕನಹಳ್ಳಿ, ಕಟ್ಟೆಮನುಗನಹಳ್ಳಿ, ತೊರವಳ್ಳಿ,ಗುರುಕಾರಹುಂಡಿ, ಮಾರ್ಚಹಳ್ಳಿ, ಕಣಿಯನಹುಂಡಿ, ಹಂಪಾಪುರ, ಮಾದಾಪುರ, ಹೈರಿಗೆ, ಬೆಳತ್ತೂರು, ಗುರುಪುರ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಕುಂಬಾರ ಜನಾಂಗದವರಿದ್ದು, ನಾವು ಸಂಘಟಿತರಾಗಲು ಹಾಗೂ ಆರ್ಥಿಕವಾಗಿ ಸಬಲರಾಗಲು ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ನಮ್ಮ ಜನಾಂಗಕ್ಕೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮಾಡಬೇಕು. ತಾಲೂಕಿನ ಕೇಂದ್ರ ಸ್ಥಾನದಲ್ಲಿ ಸರ್ವಜ್ಞ ಭವನ ನಿರ್ಮಿಸಲು ನಿವೇಶನ ಮುಂಜೂರು ಮಾಡುವಂತೆ ಕೋರಿ ಸಂಘದವರು ತಹಸೀಲ್ದಾರ್ ಶ್ರೀನಿವಾಸ್ ಗೆ ಮನವಿ ಸಲ್ಲಿಸಿದರು.**

# ಚಂದಕವಾಡಿಯಲ್ಲಿ ವಿಜೃಂಭಣೆ ಲಕ್ಷ್ಮೀದೇವಿ ರಥೋತ್ಸವ

ಚಾಮರಾಜನಗರ: ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಲಕ್ಷ್ಮೀದೇವಿ ರಥೋತ್ಸವ ಶುಕ್ರವಾರ ಸಡಗರ, ಸಂಭ್ರಮದಿಂದ ನೆರವೇರಿತು. ಗ್ರಾಮದ ದೇವಸ್ಥಾನದ ಮುಂಭಾಗದಲ್ಲಿ ರಥವನ್ನು ತಳಿರು ತೋರಣ ಹಾಗೂ ಬಣ್ಣದ ಬಣ್ಣದ ಬಟ್ಟೆಗಳಿಂದ ಶೃಂಗರಿಸಲಾಯಿತು. ಬಾಳೆಗೊನೆ, ಎಳೆನೀರು, ಹೂವುಗಳನ್ನು ಕಟ್ಟಿದ ಸರ್ವಾಲಂಕೃತ ಲಕ್ಷ್ಮೀದೇವಿ ಉತ್ಸವ ಮೂರ್ತಿಯನ್ನು ರಥದಲ್ಲಿ ಕೂರಿಸಿ ಭಕ್ತಾಧಿಗಳ ಜಯಘೋಷಣೆಗಳೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

**16 ಹಳ್ಳಿಗಳಲ್ಲಿ ಸಂಭ್ರಮ**

ಚಂದಕವಾಡಿ ಗ್ರಾಮವೂ ಸೇರಿದಂತೆ ಕೋಡಿಮೋಳೆ, ದಡದಹಳ್ಳಿ, ಅರಳಿಪುರ, ಬಸವನಪುರ ಕರಿಯನಕಟ್ಟೆ, ಹಂಚಿತಾಳಪುರ, ಅಯ್ಯನಪುರ, ಸರಗೂರು, ಬಸಪ್ಪನಪಾಳ್ಯ ಸೇರಿದಂತೆ 16 ಹಳ್ಳಿಗಳ ಜನರು ಶ್ರದ್ಧಾಭಕ್ತಿ ಯಿಂದ ಲಕ್ಷ್ಮಿದೇವಿ ಜಾತ್ರೆ ಆಚರಿಸಿದರು. ಚಂದಕವಾಡಿ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಿಂದ ಭಕ್ತರು ಭಾಗವಹಿಸಿದ್ದರು. ರಥಕ್ಕೆ ನವದಂಪತಿಗಳು ಹಣ್ಣು, ಧವನ ಎಸೆದು ಇಷ್ಟಾರ್ಥ ಸಿದ್ದಗಾಗಿ ಪ್ರಾರ್ಥಿಸಿದರು. ರಥೋತ್ಸವಕ್ಕೂ ಮುನ್ನಾ ಸತ್ತಿಗೆ ಸೂರಪಾನಿ, ಬಿರುದುಗಳನ್ನು ತೆಗೆದುಕೊಂಡು ಮಂಟೇಸ್ವಾಮಿ ದೇವಸ್ಥಾನಕ್ಕೆ ತಂದು ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಹುಲಿವಾಹನ ಜತೆಗೂಡಿ ಬಿರುದುಗಳನ್ನು ರಥದ ಮುಂಭಾಗ ಬರುತ್ತಿದ್ದಂತೆ ರಥೋತ್ಸವ ಆರಂಭಗೊಂಡಿತು. ಗ್ರಾಮದ ಎತ್ತ ನೋಡಿದರೂ ಜನರ ಕಲರವ ಕಂಡು ಬಂತು. ಎಲ್ಲರ ಮನೆಯಲ್ಲೂ ನೆಂಟ ರಿಷ್ಟರು ಸಂಭ್ರಮದಿಂದ ಅಡ್ಡಾಡುತ್ತಿದ್ದರು. ಜಾತ್ರೆ ಹಿನ್ನೆಲೆಯಲ್ಲಿ ವ್ಯಾಪಾರ, ವಹಿವಾಟು ಜೋರಾಗಿತ್ತು.



**ಸಂಸದ ಭಾಗಿ**

**ಸಂಸದ ಸುನೀಲ್ ಬೋಸ್ ಅವರು ಶ್ರೀಲಕ್ಷ್ಮೀದೇವಿ ಅಮ್ಮನವರ ರಥೋತ್ಸವದಲ್ಲಿ ಭಾಗವಹಿಸಿ, ಲಕ್ಷ್ಮೀದೇವಿ ದರ್ಶನ ಪಡೆದು ಮಾತನಾಡಿ, ಶ್ರೀಲಕ್ಷ್ಮೀದೇವಿ ತಾಯಿಯು ಉತ್ತಮ ಮಳೆ ಬೆಳೆ ತಂದು ಎಲ್ಲರಿಗೂ ಒಳಿತು ಮಾಡಲಿ ಎಂದು ಪ್ರಾರ್ಥಿಸಿದರು.**

# ದ್ವಿತೀಯ ಪಿಯುಸಿ ಪರೀಕ್ಷೆ ವಿದ್ಯಾರ್ಥಿಗಳಿಗೆ ಸಹಾಯವಾಣಿ

**ಪ್ರಾಂಶುಪಾಲರು, ಉಪನ್ಯಾಸಕರಿಂದ ಮಾಹಿತಿ– ಸದುಪಯೋಗಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಮನವಿ**

ಚಾಮರಾಜನಗರ, ಜಿಲ್ಲಾಡಳಿತವು 2026ರ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗಾಗಿ ಸಹಾಯವಾಣಿ ತೆರೆದಿದ್ದು, ಮಾಹಿತಿ ನೀಡುವ ಉದ್ದೇಶದಿಂದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರನ್ನು ನಿಯೋಜಿಸಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಾಣಿಜ್ಯ, ವಿಜ್ಞಾನ ಮತ್ತು ಕಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ಸಹಾಯವಾಣಿ ಲಭ್ಯವಿದ್ದು, ನುರಿತ ಪ್ರಾಂಶುಪಾಲರು, ಉಪನ್ಯಾಸಕರನ್ನು ನಿಯೋಜಿಸಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಸಂದೇಹ ಸ್ಪಷ್ಟೀಕರಣಕ್ಕೆ ಸಂಬಂಧಿಸಿದ ವಿಷಯದ ಉಪನ್ಯಾಸಕರನ್ನು ಸಂಪರ್ಕಿಸಬಹುದು. ಉಪನ್ಯಾಸಕರು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ. ಪ್ರಾಂಶುಪಾಲರಾದ ಮಿನಿ ಜಾರ್ಜ್, ರಸಾಯನಶಾಸ್ತ್ರ (ಮೊ.ಸಂ 9449490034), ಉಪನ್ಯಾಸಕರಾದ ಜಿ. ಷಡಕ್ಷರಸ್ವಾಮಿ, ಭೌತಶಾಸ್ತ್ರ (ಮೊ.ಸಂ 9964797989), ಉಪನ್ಯಾಸಕರಾದ ಕೆ. ಪೂರ್ಣಿಮ, ಜೀವಶಾಸ್ತ್ರ (ಮೊ.ಸಂ 8217084174), ಉಪನ್ಯಾಸಕರಾದ ಪಿ. ನಟರಾಜು, ರಸಾಯನಶಾಸ್ತ್ರ (ಮೊ.ಸಂ 9886591048), ಉಪನ್ಯಾಸಕರಾದ ಎಸ್. ಪ್ರಭುಸ್ವಾಮಿ ಗಣಿತಶಾಸ್ತ್ರ (ಮೊ.ಸಂ 9448893161), ಉಪನ್ಯಾಸಕರಾದ ಪುಟ್ಟಸ್ವಾಮಿ, ಅರ್ಥಶಾಸ್ತ್ರ (ಮೊ.ಸಂ 9113599305), ಉಪನ್ಯಾಸಕರಾದ ಪ್ರಭುಸ್ವಾಮಿ ಆಂಗ್ಲಭಾಷಾ (ಮೊ.ಸಂ 83106 41652), ಉಪನ್ಯಾಸಕರಾದ ಪಿ. ಶಿವಸ್ವಾಮಿ ರಾಜಕೀಯ ವಿಜ್ಞಾನ (ಮೊ.ಸಂ 7892454589), ಉಪನ್ಯಾಸಕರಾದ ಎನ್. ಮಲ್ಲರಾಜು ಇತಿಹಾಸ (ಮೊ.ಸಂ 9743652370) ಅವರನ್ನು ಸಂಪರ್ಕಿಸಬಹುದು.

ವಿದ್ಯಾರ್ಥಿಗಳಿಗೆ ಮೇಲಿನ ಉಪನ್ಯಾಸಕರು ತಮಗೆ ಬೇಕಾದ ಮಾಹಿತಿಯನ್ನು ನೀಡಿ ಮಾರ್ಗದರ್ಶನ ಮಾಡಲಿದ್ದಾರೆ. ಮುಂಬರುವ ದ್ವಿತೀಯ ಪಿಯುಸಿ ಬರೆಯಲಿರುವ ಎಲ್ಲ ವಿದ್ಯಾರ್ಥಿಗಳಿಗೆ ಜಿಲ್ಲಾಡಳಿತ ವತಿಯಿಂದ ಹಾರ್ದಿಕ ಶುಭಾಶಯಗಳನ್ನು ಕೋರುವುದಾಗಿ ಜಿಲ್ಲಾಧಿಕಾರಿ ಶ್ರೀರೂಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಿಂಬಂ ಘಾಟ್ ತಿರುವಿನಲ್ಲಿ ಲಾರಿಗಳ ನಡುವೆ ಮುಖಾಮುಖಿ ಢಿಕ್ಕಿ

ಚಾಮರಾಜನಗರ, ಕರ್ನಾಟಕದ ಹಾಸನೂರು ಗಡಿಗೆ ಹೊಂದಿಕೊಂಡಿರುವ ತಮಿಳುನಾಡಿನ ದಿಂಬಂ ಘಾಟ್ ತಿರುವಿನಲ್ಲಿ ಎರಡು ಲಾರಿಗಳ ನಡುವೆ ಮುಖಾ ಮುಖಿ ಢಿಕ್ಕಿಯಾಗಿ ಕೆಲಕಾಲ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ಈರೋಡ್ ನಿಂದ ಚಾಮರಾಜನಗರದ ಕಡೆ ಬರುತ್ತಿದ್ದ ಲಾರಿ ಹಾಗೂ ಚಾಮರಾಜನಗರದ ಮಾರ್ಗವಾಗಿ ಕೊಯಮತ್ತೂರಿಗೆ ತೆರಳುತ್ತಿದ್ದ ಲಾರಿಯ ನಡುವೆ ದಿಂಬಂ ತಿರುವಿನಲ್ಲಿ ಮುಖಾ ಮುಖಿ ಢಿಕ್ಕಿ ಸಂಭವಿಸಿದೆ. ಅದೃಷ್ಟವ ಶಾತ್ ಚಾಲಕರು ಪ್ರಾಣಪಾಯದಿಂದ ಪಾರಾಗಿದ್ದಾರೆ. ಎರಡು ಲಾರಿಗಳ ನಡುವೆ ಅಪಘಾತ ಸಂಭವಿಸಿದ ಹಿನ್ನೆಲೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಎರಡು ಗಂಟೆಗಳ ಕಾಲ ಸಂಚಾರ ಸ್ಥಗಿತಗೊಂಡಿತ್ತು ವಿಷಯ ತಿಳಿದ ಹಾಸನೂರು ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ವಾಹನಗಳನ್ನು ತೆರವುಗೊಳಿಸಿದರು. ಬಳಿಕ ವಾಹನಗಳು ಸುಗಮವಾಗಿ ಸಂಚರಿಸಿದವು.

## ನಾಳೆ ಬೃಹತ್ ಉದ್ಯೋಗ ಮೇಳ

ಮೈಸೂರು: ಕರ್ನಾಟಕ ರಾಜ್ಯ ಭೀಮ್ ಸೇನೆ ಸಂಘಟನೆವತಿಯಿಂದ ರಾಜಷಿ ಕೃಷ್ಣರಾಜ ಒಡೆಯರ್ ನೆನಪಿನಲ್ಲಿ ಹಾಗೂ ವಾರ್ಷಿಕೋತ್ಸವ ಪ್ರಯುಕ್ತ ಫೆ.23ರ ಬೆಳಗ್ಗೆ 10.30ರಿಂದ ನಗರದ ಪುರಭವನದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿರುವುದಾಗಿ ರಾಜ್ಯಾಧ್ಯಕ್ಷ ಸರ್ವೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದರಲ್ಲಿ 50 ರಿಂದ 60 ಕಂಪನಿಗಳು ಪಾಲ್ಗೊಳ್ಳುತ್ತಿದ್ದು, ಮೂರರಿಂದ ನಾಲ್ಕು ಸಾವಿರ ಜನಕ್ಕೆ ಉದ್ಯೋಗ ದೊರೆಯುವ ನಿರೀಕ್ಷೆಯಿದೆ. ಎಸ್ಎಸ್ಎಲ್‌ಸಿ ಯಿಂದ ಆರಂಭವಾಗಿ ಇತರೆ ಯಾವುದೇ ಶಿಕ್ಷಣ ಪಡೆದವರು ಪಾಲ್ಗೊಳ್ಳಬಹುದಾಗಿದೆ. ಯಾವುದೇ ಶುಲ್ಕವಿಲ್ಲ. ನೇರವಾಗಿ ಸ್ಥಳಕ್ಕೇ ಆಗಮಿಸಿ ಪ್ರಯೋಜನ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸುವರು, ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮಾಜಿ ಶಾಸಕ ಎಲ್. ನಾಗೇಂದ್ರ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರಾದ ಡಿ.ಎಂ. ರಾಣಿ ಇನ್ನಿತರರು ಹಾಜರಿರುವರೆಂದರು. ಇನ್ನಿತರ ಪದಾಧಿಕಾರಿಗಳಾದ ಮೋಹನ್ ಕುಮಾರ್, ಬಸವಯ್ಯ, ಅಶೋಕ್, ಲಯನ್ ಕುಮಾರ್, ಮಾದೇಶ್, ಸಿದ್ದರಾಜು ಹಾಗೂ ಮಹೇಶ್ ಮೊದಲಾದವರು ಇದ್ದರು.




# ಅನ್ನ, ಬೆಲ್ಲದದೋಣಿ, ಕಬ್ಬಿಣದ ಕುದುರೆಗಳು ಕೃತಿ ಅದ್ಭುತವಾದವು

**ವಿ.ಮನೋಹರ್ ಹೇಳಿಕೆ | ಹನೂರು ಚನ್ನಪ್ಪ ಕಥೆ, ನಾಟಕ, ಕಾದಂಬರಿ ಕುರಿತು ವಿಚಾರ ಸಂಕಿರಣ, ಕವಿಗೋಷ್ಠಿ**

ಚಾಮರಾಜನಗರ, ಲೇಖಕ ಹನೂರು ಚನ್ನಪ್ಪ ಅವರ ಅನ್ನ, ಬೆಲ್ಲದದೋಣಿ, ಕಬ್ಬಿಣದ ಕುದುರೆಗಳು ಕೃತಿ ಅದ್ಭುತವಾಗಿದ್ದು, ಅವರ ಯೋಚನಾ ಲಹರಿ, ಚಿಂತನೆಗಳು ಅದ್ಭುತವಾಗಿದೆ ಎಂದು ಖ್ಯಾತ ಸಂಗೀತ ನಿರ್ದೇಶಕ ವಿ.ಮನೋಹರ್ ಹೇಳಿದರು.

ನಗರದ ವರನಟ ಡಾ.ರಾಜ್ ಕುಮಾರ್ ಕಲಾಮಂದಿರದಲ್ಲಿ ಚೇತನ ಕಲಾವಾಹಿನಿ, ನೆಲೆ ಹಿನ್ನಲೆ, ಜೋಳಿಗೆ ಪ್ರಕಾಶನ ಅವರ ಸಹಯೋಗದಲ್ಲಿ ನಡೆದ ಹನೂರು ಚನ್ನಪ್ಪ ಅವರ ಕಥೆ, ನಾಟಕ, ಕಾದಂಬರಿ ಕುರಿತ ವಿಚಾರಸಂಕಿರಣ ಹಾಗೂ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು. ಅತ್ಯುತ್ತಮ ಕವಿಯಾಗಬೇಕಾದರೆ ಪತ್ರಿಕೆಗಳು, ಪುಸ್ತಕಗಳನ್ನು ಓದಬೇಕು. ಏಕೆಂದರೆ ಹನೂರು ಚನ್ನಪ್ಪ ಅವರು ಚೆನ್ನಾಗಿ ಓದಿದ ಪರಿಣಾಮದಿಂದ ಅವರು ಒಬ್ಬ ಉತ್ತಮ ಕಥೆಗಾರರು, ನಾಟಕಕಾರರು, ಕಾದಂಬರಿಗಾರ ಹೊರಹೊಮ್ಮಿದ್ದಾರೆ. ಅವರಿಂದ ಮತ್ತಷ್ಟು ನಾಟಕಗಳು, ಕಾದಂಬರಿ ಬರಲಿ ಎಂದು ಆಶಿಸಿದರು.

ಮೈಸೂರಿನ ವಿಮರ್ಶಕಿ ಕುಸುಮ ಆಯರಹಳ್ಳಿ ಕಬ್ಬಿಣದ ಕುದುರೆಗಳು ನಾಟಕ ಕುರಿತು ಪ್ರತಿಕ್ರಿಯಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ.ರೇಣುಕಾದೇವಿ, ಜಿಲ್ಲಾ ವಕೀಲ ಸಂಘದ ಅಧ್ಯಕ್ಷ ಎಂ.ಪುಟ್ಟಸ್ವಾಮಿ, ಉದ್ಯಮಿ ಶ್ರೀನಿಧಿಕುದರ್, ಕವಿ ಹನೂರು ಚನ್ನಪ್ಪ, ಚೇತನ ಕಲಾವಾಹಿನಿ ಅಧ್ಯಕ್ಷ ಜಿ. ರಾಚಪ್ಪ, ಶಿಕ್ಷಕಿ ಲತಾಪುಟ್ಟಸ್ವಾಮಿ, ನೆಲೆ ಹಿನ್ನಲೆಯ ಕೆ.ಆರ್.ಗೋಪಾಲ್, ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ, ಸಾಹಿತಿಗಳಾದ ಎಂ.ಜವರಾಜು, ಬಸವಣ್ಣ ಮೂಕಳ್ಳಿ, ನಂಜನಹಳ್ಳಿ ಮಹದೇವಪ್ಪ, ಮೂಳ್ಳೂರು ಶಿವಮಲ್ಲು, ಸಿ.ಲಿಂಗಯ್ಯ, ಎಸ್.ಜಿ. ಮಹಾಲಿಂಗಸ್ವಾಮಿ ಇತರರು ಭಾಗವಹಿಸಿದ್ದರು.



**ಪ್ರಚಾರದ ಕೊರತೆ**

**ಹನೂರು ಚನ್ನಪ್ಪನವರ ಪುಸ್ತಕಗಳನ್ನು ಓದುತ್ತಾ ಅದ್ಭುತ ಕಾದಂಬರಿಕಾರರ, ಕವಿ, ನಾಟಕಾರರನ್ನು ಕಂಡೆ. ತುಂಬಾ ಖುಷಿಯಾಯಿತು. ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲ ತರದ ಸಾಹಿತಿಗಳು ಇದ್ದಾರೆ. ಆದರೆ ಇದು ರಾಜ್ಯ ಮಟ್ಟಕ್ಕೆ ತೆರೆದುಕೊಂಡಿಲ್ಲ. ಅದು ಪ್ರಚಾರದ ಕೊರತೆ ಎಂದು ಭಾವಿಸಿದ್ದೇನೆ. ಜಿಲ್ಲೆಯಲ್ಲಿ ಪ್ರತಿಭಾವಂತರು ಇದ್ದಾರೆ. ಚಾಮರಾಜನಗರ ಭಾಷೆಯ ಸೊಗಡು ಬಹಳ ಒಂದು ರೀತಿಯ ಗಟ್ಟಿಯಾದ ಭಾಷೆಯಾಗಿದೆ. ಹನೂರು ಚನ್ನಪ್ಪನವರ ಅನ್ನ, ಬೆಲ್ಲದದೋಣಿ, ಕಬ್ಬಿಣದ ಕುದುರೆಗಳು ಕೃತಿ ಅದ್ಭುತವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.**

**ನೈಜ ಘಟನೆ**

**ಮೈಸೂರು ಪತ್ರಕರ್ತ ಅಂಶಿಪ್ರಸನ್ನಕುಮಾರ್ ಬೆಲ್ಲ ದದೋಣಿ ಕುರಿತು ಮಾತನಾಡಿ ಬೆಲ್ಲದದೋಣಿ 9 ದೃಶ್ಯಗಳಿರುವ ನಾಟಕವಾಗಿದ್ದು, ದಲಿತ ಕುಟುಂಬ ವೊಂದರಲ್ಲಿ ನಡೆದಿರುವ ಒಂದು ನೈಜ ಘಟನೆಯಾ ಗಿದೆ. ಅದೊಂದು ಅದ್ಭುತ ಕೃತಿಯಾಗಿದ್ದು, ಚಾಮರಾಜನಗರ, ಕೊಳ್ಳೇಗಾಲ ಭಾಷೆಯನ್ನೊಳಗೊಂಡಿದೆ. ಹನೂರು ಚನ್ನಪ್ಪನವರು ಅದ್ಭುತ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ. ಅವರು ಮೂರು ಕೃತಿಗಳು ಅದ್ಭುತವಾಗಿದೆ. ಎಂದರು.**

## ಎರಡು ಹೆಸರಿನವನು ನಾನೇ

ಮೈಸೂರು ಸಿಟಿ, ವಿ ವಿ ಮೊಹಲ್ಲಾ, ಕಾಳಿದಾಸ ರಸ್ತೆ , ಎರಡನೇ ಕ್ರಾಸ್ ನಂ 2598/2 ಡಿ– 5 ರಲ್ಲಿ ವಾಸವಾಗಿರುವ ಲೇಟ್ ಬೋರೇಗೌಡರ ಮಗನಾದ ಗೌರೀಶ ಬಿ ಮತ್ತು ಬಿ ಹರೀಶ್ (47 ವರ್ಷ ) ಎರಡೂ ಹೆಸರಿನ ವ್ಯಕ್ತಿಯಾದ ನಾನು, ನನ್ನ ತಂದೆಯ ಹೆಸರು ಬೋರೇಗೌಡ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಕಛೇರಿಗೆ ಪ್ರಮಾಣ ಪತ್ರ ಸಲ್ಲಿಸಿ ನನ್ನ ಹೆಸರು ಗೌರೀಶ ಬಿ ಹಾಗೂ ನನ್ನ ತಂದೆಯ ಹೆಸರು ಬೋರೇಗೌಡ ಎಂದು ತಿದ್ದುಪಡಿ ಮಾಡುವಂತೆ ನೋಟರಿ ಸಿ. ಮಂಗಲ ಅವರ ಸಮ್ಮುಖದಲ್ಲಿ ಪ್ರಮಾಣೀಕರಿಸಿದ್ದೇನೆ.

ಸಹಿ
ಗೌರೀಶ ಬಿ

**ಉಪನಿರ್ದೇಶಕರ ಕಚೇರಿ**
**ಮೈಸೂರು ಅರಮನೆ ಮಂಡಳಿ, ಮೈಸೂರು**
Phone: 0821-2421051, e-mail: ddmysorepalace@gmail.com

ಸಂ.: EO/MPB/DD/AEE/ELEC/T.NO-19/2025-26 ದಿನಾಂಕ: 20.02.2026

**ಇ–ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ)**
**(ಕೆ.ಪಿ.ಪಿ.ಪೋರ್ಟಲ್ ಮೂಲಕ ಮಾತ್ರ)**

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರುರವರು, ಮೈಸೂರು ಅರಮನೆಯ ವಿದ್ಯುತ್ ಉಪ–ವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು ಮೊತ್ತ **ರೂ. 26.50 ಲಕ್ಷದ 01 ಸಂಖ್ಯೆ ಖರೀದಿ/02 ಸಂಖ್ಯೆ ದುರಸ್ಥಿ** ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು / ಏಜೆನ್ಸಿ /ತಯಾರಕರು / ಸಂಸ್ಥೆಯಿಂದ ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. 1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **06.03.2026 ಸಂಜೆ 5.30 ಗಂಟೆಯವರೆಗೆ.** 2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ : 07.03.2026 ಸಂಜೆ 5.30 ಗಂಟೆಯ** ನಂತರ 3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 09.03.2026 ಬೆಳಿಗ್ಗೆ 11.00 ಗಂಟೆಯ ನಂತರ** ಅಥವಾ ನಂತರ ದಿನಗಳಲ್ಲಿ ತೆರೆಯಲಾಗುವುದು. 4) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ. 10.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ. 6.50 ಲಕ್ಷಗಳು.** ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ **http://www.kppp.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– **ಉಪ ನಿರ್ದೇಶಕರು**
ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/MYS/1714/SA/2025-26

## ದೇವರ ಹೆಸರಲ್ಲಿ ಮೋಸ: ಆರೋಪ

ಮೈಸೂರು: ಕೆ.ಆರ್.ನಗರಕ್ಕೆ ಹೊಂದಿಕೊಂಡ ಮಧುವನಹಳ್ಳಿ ಬಡಾವಣೆಯಲ್ಲಿನ ಮಂಜುನಾಥ್ ಎಂಬಾತ ತನ್ನ ಮೈಮೇಲೆ ಶನಿದೇವರು ಬರುತ್ತಾನೆ, ನಿಮ್ಮ ಮನೆಯಲ್ಲಿ ದೋಷವಿದೆ, ಪರಿಹಾರ ಮಾಡುತ್ತೇನೆ ಎಂದು ನಂಬಿಸಿ, ಚಿನ್ನ ಹಾಗೂ ಹಣ ವಂಚಿಸಿದ್ದಾನೆ ಎಂದು ಹಲವಾರು ಸಂತ್ರಸ್ತರು ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಮೊದಲಿಗೆ ಜಯರಾಜ್ ಎಂಬುವವರು ಮಾತನಾಡಿ, ಬಡಾವಣೆಯಲ್ಲಿನ ಶನಿದೇವರ ದೇವಸ್ಥಾನಕ್ಕೆ ಹೋಗುವಾಗ ಅಥವಾ ಮನೆಯಲ್ಲಿ ಶನಿದೇವರ ಕಥೆ ಓದಿಸುವ ವೇಳೆ ಮಂಜುನಾಥ್ ಭಕ್ತರಿಗೆ ನಿಮ್ಮ ಸಮಸ್ಯೆಗೆ ದೋಷ ಕಾರಣ, ಪರಿಹರಿಸಬೇಕಾದಲ್ಲಿ ಪೂಜೆ ಮಾಡಿಸಬೇಕು ಎಂದು ಹೆದರಿಸುತ್ತಾನೆ. ನಂಬಿ ಪೂಜೆ ಮಾಡುತ್ತೇನೆಂದು ಪಡೆದ ಒಡವೆಗಳನ್ನು ವಿವಿಧೆಡೆ ಗಿರವಿ ಇರಿಸುತ್ತಾನೆ. ಓರ್ವರ ಮನೆಯಲ್ಲಿ ಪೂಜೆ ಮಾಡುತ್ತೇನೆಂದು ಒಡವೆ ಪಡೆದು, ಅದನ್ನು ಗೋಡೆಯಲ್ಲಿ ರಂಧ್ರ ಕೊರೆದು ಇರಿಸಿ, ಮೇಲೆ ಪ್ಲೈವುಡ್ ಪಟ್ಟಿ ಒಡೆದು, ನಾನು ತಿಳಿಸಿದಾಗ ತೆರೆಯಿರಿ ಎಂದು ಹೇಳಿ ಹೋಗುತ್ತಾನೆ. ಬಳಿಕ ಪರಿಶೀಲಿಸಿದಾಗ ಅಲ್ಲಿ ಒಡವೆ ಇರುವುದಿಲ್ಲ ಎಂದು ದೂರಿದರು.




ಇದೇ ರೀತಿ ಹಲವರಿಗೆ ಕೋಟೆಗಟ್ಟಲೆ ಮೌಲ್ಯದ ಒಡವೆ ವಂಚಿಸಿದ್ದಾನೆ. ತಮ್ಮೊಡನೆ ಬಂದಿರುವ ರೇಖಾ, ಲೀಲಾ, ಕುಮಾರ್, ಜಯರಾಂ, ಕಾರ್ತಿಕ್, ಸುರೇಶ್, ದ್ರಾಕ್ಷಾಯಿಣಿ ಸುರೇಶ್ ಮೊದಲಾದವರಿಗೂ ವಂಚಿಸಿದ್ದು, ದೂರು ನೀಡಲು ಹೋದರೆ ಸ್ಥಳೀಯ ಪೊಲೀಸರು ತಮ್ಮ ಮೇಲೆಯೇ ದಬ್ಬಾಳಿಕೆ ನಡೆಸುತ್ತಾರೆ. ಎಸ್‌ಪಿ ಮೊದಲಾದವರ ಗಮನಕ್ಕೆ ತಂದರು ಪ್ರಯೋಜನವಾಗಿಲ್ಲ. ಹೀಗಾಗಿ ಈಗಲಾದರೂ ಸಂಬಂಧಿಸಿದ ಹಿರಿಯ ಅಧಿಕಾರಿಗಳು ಗಮನ ಹರಿಸಿ ತಮಗೆ ನ್ಯಾಯ ದೊರೆಯಿಸಿ ಕೊಡಬೇಕೆಂದು ಮನವಿ ಮಾಡಿದರು. ಅನೇಕ ಸಂತ್ರಸ್ಥರು ಹಾಜರಿದ್ದು, ತಮಗೂ ಇದೇ ರೀತಿಯ ವಂಚನೆ ಆಗಿದೆ ಎಂದು ಅಳಲು ತೋಡಿಕೊಂಡರು.

## ಹಿಂದೂ ಮೌಲ್ಯ ಪಸರಿಸಿದ ಪರಮಹಂಸರು



ಮೈಸೂರು: ರಾಮಕೃಷ್ಣ ಪರಮಹಂಸರ 191ನೇ ಜಯಂತಿ ಅಂಗವಾಗಿ ಅಪೂರ್ವ ಸ್ನೇಹ ಬಳಗ ದವತಿಯಿಂದ ರಾಮಕೃಷ್ಣನಗರದ ವೃತ್ತದಲ್ಲಿರುವ ಪರಮಹಂಸರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು, ರಾಮಕೃಷ್ಣ ಪರಮಹಂಸರು ಭಾರತದ ಆಧ್ಯಾತ್ಮಿಕ ಚಿಂತನೆಯನ್ನು ಜಗತ್ತಿಗೆ ಪರಿಚಯಿಸಿದರು. ಇಸ್ಲಾಂ, ಕ್ರಿಶ್ಚಿಯನ್ ಸೇರಿ ಎಲ್ಲಾ ಧರ್ಮದ ಸಾರವು ಒಂದೇ, ಭಕ್ತಿಯಿಂದ ಆಧ್ಯಾತ್ಮಿಕದಿಂದ ಉನ್ನತಿಯನ್ನು ಸಾಧಿಸಬಹುದು ಎಂದು ಭೋದಿಸಿದರು. ಸ್ವಾಮಿ ವಿವೇಕಾನಂದರಂತಹ ಮಹಾನ್ ವ್ಯಕ್ತಿಯನ್ನು ಶಿಷ್ಯರನ್ನಾಗಿ ರೂಪಿಸಿ ಜಗತ್ತಿಗೆ ಹಿಂದೂ ಧರ್ಮದ ಮೌಲ್ಯವನ್ನು ಪಸರಿಸಿದರು. ರಾಮಕೃಷ್ಣ ಮಿಷನ್ ಇಂದಿಗೂ ಅವರ ಹಾದಿಯಲ್ಲೇ ನಡೆಯುತ್ತಿದೆ, ಅವರ ಕೊಡುಗೆ ಅಪಾರ ಎಂದು ಬಣ್ಣಿಸಿದರು

ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಜೋಗಿ ಮಂಜು, ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ಬಿಜೆಪಿ ಎಸ್.ಟಿ. ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ, ಅಪೂರ್ವ ಸುರೇಶ್, ದೂರ ರಾಜಣ್ಣ, ಎಸ್.ತ್ಯಾಗರಾಜ್, ಶಿವು ಪಟೇಲ್, ರಾಘವೇಂದ್ರ, ಎನ್.ಪ್ರತಾಪ್, ಚಂದನ್ ಗೌಡ, ಮಿರ್ಲೆ ಪನೀಶ್, ಧರ್ಮೇಂದ್ರ, ಆನಂದ, ಸುಚೇಂದ್ರ ಹಾಜರಿದ್ದರು.

## ಮನಗಳ್ಳಿ: ಸೆರೆ ಸಿಕ್ಕ ಚಿರತೆ

ಗುಂಡ್ಲುಪೇಟೆ: ಪಟ್ಟಣದ ಹೊರ ವಲಯದಲದ ಬಂಡೀಪುರ ರಸ್ತೆಯಲ್ಲಿರುವ ಮಣಗಳ್ಳಿಯ ರ?ತ ನಾಗರಾಜು ಎಂಬುವವರ ಜಮೀನಿನಲ್ಲಿ ಇರಿಸಿದ್ದ ಭೋನಿನಲ್ಲಿ ಚಿರತೆ ಸೆರೆಯಾಗಿದೆ

ಕೆಳೆದ ಗುರುವಾರ ರಾತ್ರಿ ಸಮಯದಲ್ಲಿ ಕರುವಿನ ಮೇಲೆ ಚಿರತೆ ದಾಳಿ ಮಾಡಿ ಕೂಂದು ಹಾಕಿತ್ತು ನಂತರ ರೈತರ ಒತ್ತಾಯದ ಮೇರೆಗೆ ಬಫರ್ ವಲಯದ ಅರಣ್ಯ ಇಲಾಖೆಯ ಸಿಬ್ಬಂದಿ ನಾಗರಾಜ್ ಎಂಬುವರ ಜಮೀನಿನಲ್ಲಿ ಭೋನಿನಲ್ಲಿ ಇರಿಸಿದ್ದರು ಬೇಟೆಯಾಸೆಗೆ ಬಂದ ಸುಮಾರು ಮೂರು ವರ್ಷದ ಹೆಣ್ಣು ಚಿರತೆ ಶನಿವಾರ ಬೆಳಗಿನ ಜಾವ ಭೋನಿಗೆ ಬಿದ್ದಿದೆ ಇದನ್ನು ಸ್ಥಳೀಯ ರೈತರು ಗಮನಿಸಿ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಬಫರ್ ಜೋನ್ ವಲಯ ಅರ್ ಎಫ್ ಓ ಶಿವಕುಮಾರ್ ನೇತೃತ್ವದ ತಂಡ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿ ನಂತರ ಚಿರತೆಯನ್ನು ಬೋನ್ನು ಸಮೇತ ಕೂಂಡುಯ್ದು ಮೂಲೆ ಹೂಳೆ ದಟ್ಟಾರಣ್ಯದ ಮದ್ಯ ಭಾಗದಲ್ಲಿ ಬೀಟ್ಟು ಬಂದಿದ್ದಾರೆ.



**ಜಿಲ್ಲಾ ಪಂಚಾಯತ್ ಸಿಇಒ ಮೋನಾ ರೋತ್ ಸೂಚನೆ**

# ಹಾಸ್ಟೆಲ್ ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗೆ ಕಾಳಜಿ ವಹಿಸಿ

ಚಾಮರಾಜನಗರ, ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸೇರಿದ ವಸತಿ ಶಾಲೆ, ಹಾಸ್ಟೆಲ್, ಆಶ್ರಮ ಶಾಲೆಗಳ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಸುಧಾರಣೆಗೆ ಸಂಬಂಧಪಟ್ಟ ಅಧಿಕಾರಿಗಳು, ವಾರ್ಡನ್‌ಗಳು, ವಿಶೇಷವಾಗಿ ಕಾಳಜಿವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿ ವಸತಿಶಾಲೆ, ವಿದ್ಯಾರ್ಥಿನಿಲಯ, ಅಶ್ರಮ ಶಾಲೆಗಳ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ, ದ್ವಿತೀಯ ಪಿಯುಸಿ ಫಲಿತಾಂಶ ಹಾಗೂ ಮೂಲ ಸೌಕರ್ಯಗಳ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇತ್ತೀಚೆಗೆ ನಡೆದ ಪೂರ್ವಭಾವಿ ಪರೀಕ್ಷೆಗಳಲ್ಲಿ ಹಾಸ್ಟೆಲ್, ವಸತಿ ಶಾಲೆಗಳು ಪಡೆದಿರುವ ಫಲಿತಾಂಶ ಪರಾಮರ್ಶೆ ನಡೆಸಿದ ಜಿಲ್ಲಾ ಪಂಚಾಯತ್ ಸಿಇಒ ಮೋನಾ ರೋತ್ ಅವರು ಫಲಿತಾಂಶದಲ್ಲಿ ಇನ್ನೂ ಸುಧಾರಣೆಯಾಗಬೇಕಿರುವ ಕೆಲವು ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಿ ಉತ್ತಮ ಸಾಧನೆ ಮಾಡಲು ವಾರ್ಡನ್‌ಗಳು, ಪ್ರಾಂಶುಪಾಲರು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದರು.



ವಸತಿ ಶಾಲೆ, ಹಾಸ್ಟೆಲ್ ಗಳಲ್ಲಿ ಸಾಕಷ್ಟು ಉತ್ತಮ ಸೌಲಭ್ಯಗಳನ್ನು ಒದಗಿಸಲಾಗಿದೆ. ಓದಿಗೆ ಪೂರಕವಾದ ಎಲ್ಲಾ ಅನುಕೂಲಗಳು ಇವೆ. ಹೀಗಿರುವಾಗ ಶೇ. 100ರಷ್ಟು ಫಲಿತಾಂಶ ಬರಬೇಕು. ಕಲಿಕೆಯಲ್ಲಿ ಹಿಂದೆ ಉಳಿದಿರುವ ಕೆಲವು ವಿದ್ಯಾರ್ಥಿಗಳ ಬಗ್ಗೆ ವಿಶೇಷವಾಗಿ ಕೇಂದ್ರಿಕರಿಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಲು ಮಾರ್ಗದರ್ಶನ ಮಾಡಬೇಕು. ವಿದ್ಯಾರ್ಥಿಗಳು ಓದುತ್ತಿರುವ ಶಾಲೆ, ಕಾಲೇಜಿಗೆ ವಾರ್ಡನ್ ಗಳು ಭೇಟಿ ನೀಡಿ ಫಲಿತಾಂಶ ಸುಧಾರಣೆಗೆ ಗಮನಹರಿಸಬೇಕು ಎಂದರು.

ಹಾಸ್ಟೆಲ್, ವಸತಿ ಶಾಲೆಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ತಾಜಾ ಸೊಪ್ಪು, ತರಕಾರಿ, ದಿನಸಿ ಪದಾರ್ಥಗಳನ್ನು ಬಳಸಬೇಕು. ಸಾಮಗ್ರಿಗಳ ದಾಸ್ತಾನು ವಹಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಎಲ್ಲಿಯೂ ಲೋಪಗಳಾಗಬಾರದು. ಮುಂದೆ ಏನಾದರೂ ವ್ಯತ್ಯಾಸಗಳಾದ್ದಲ್ಲಿ ಸಂಬಂಧಪಟ್ಟ ವಾರ್ಡನ್ ಗಳ ವಿರುದ್ಧ ಗಂಭೀರ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಸಿಇಒ ಎಚ್ಚರಿಕೆ ನೀಡಿದರು.

ಮೂಲ ಸೌಕರ್ಯಗಳ ನಿರ್ವಹಣೆ ಸಮರ್ಪಕವಾಗಿರಬೇಕು. ಸಂಬಂಧಪಟ್ಟ ಇಲಾಖೆಯ ತಾಲೂಕು ಅಧಿಕಾರಿಗಳು ಕಡ್ಡಾಯವಾಗಿ ಹಾಸ್ಟೆಲ್, ವಸತಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಸೌಲಭ್ಯಗಳು ಲಭ್ಯವಾಗುತ್ತಿರುವ ಬಗ್ಗೆ ವ್ಯಾಪಕವಾಗಿ ವೀಕ್ಷಣೆ ಮಾಡಬೇಕು. ಭೇಟಿ ಕುರಿತ ವರದಿಯನ್ನು ಸಲ್ಲಿಸಬೇಕು. ಜಿಲ್ಲಾಮಟ್ಟದ ಅಧಿಕಾರಿಗಳು ನಿರಂತರವಾಗಿ ನಿಗಾ ವಹಿಸಿ ಉಸ್ತುವಾರಿ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಾಕೀತು ಮಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಎನ್. ಮುನಿರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್, ಜಿಲ್ಲಾ ಅಲ್ಪಸಂಖ್ಯಾತರ ಇಲಾಖೆಯ ಕಲ್ಯಾಣಾಧಿಕಾರಿ ಗುಡ್ಡಪ್ಪ, ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಮಾ.1ಕ್ಕೆ 'ಸೇಫ್ ಮೈಸೂರು ಮ್ಯಾರಥಾನ್–2026'

ಮೈಸೂರು: ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸ್ ವತಿಯಿಂದ ಮಾ.1ರಂದು ನಮ್ಮ ಪೊಲೀಸ್, ನಮ್ಮ ಹೆಮ್ಮೆ ಶೀರ್ಷಿಕೆಯಲ್ಲಿ 'ಸೇಫ್ ಮೈಸೂರು ಮ್ಯಾರಥಾನ್–2026' 5 ಕಿಮೀ ಮತ್ತು 10 ಕಿಮೀ ಓಟ ಆಯೋಜಿಸಲಾಗಿದೆ.

ನಗರದ ಎಸ್ಪಿ ಕಚೇರಿಯಲ್ಲಿರುವ ಐಜಿಪಿ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸೇಫ್ ಮೈಸೂರು ಮ್ಯಾರಥಾನ್–2026 ಓಟದ ಪೋಸ್ಟರ್‌ಗಳನ್ನು ದಕ್ಷಿಣ ವಲಯ ಐಜಿಪಿ ಎಂ.ಬಿ. ಬೋರಲಿಂಗಯ್ಯ ಬಿಡುಗಡೆ ಮಾಡಿದರು. ನಗರ ಹಾಗೂ ಜಿಲ್ಲಾ ಪೊಲೀಸ್ ಸಹಯೋಗದಲ್ಲಿ ನಡೆಯುವ ಮ್ಯಾರಥಾನ್‌ಗೆ ಜೆಎಸ್‌ಎಸ್ ಸಮೂಹ ಸಂಸ್ಥೆ, ಪ್ರತಿನಿಧಿ ಫೌಂಡೇಶನ್, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಇನ್ನಿತರ ಸ್ವಯಂ ಸೇವಾ ಸಂಸ್ಥೆಗಳು ಕೈಜೋಡಿಸಿವೆ. ಈ ವೇಳೆ ಮಾತನಾಡಿದ ಐಜಿಪಿ ಎಂ.ಬಿ. ಬೋರಲಿಂಗಯ್ಯ, ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತಂತೆ ಜಾಗೃತಿ ಮೂಡಿಸುವುದು ಹಾಗೂ ಸೈಬರ್ ಅಪರಾಧ ತಡೆಗೆ ಸಾರ್ವಜನಿಕರ ಭಾಗವಹಿಸುವಿಕೆ ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಮ್ಯಾರಥಾನ್ ಓಟದಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದರು.



ಸೇಫ್ ರನ್ ಉಪಕ್ರಮದ ಮೂರನೇ ಆವೃತ್ತಿಯಾಗಿ ಸೇಫ್ ಮೈಸೂರು ಮ್ಯಾರಥಾನ್ ನಡೆಸಲಾಗುತ್ತಿದೆ. ಕಳೆದ ವರ್ಷದ ನಡೆದ ಎರಡನೇ ಆವೃತ್ತಿಯಲ್ಲಿ 9 ಸಾವಿರ ಜನರು ಭಾಗವಹಿಸಿದ್ದರು. ಇದು ಕರ್ನಾಟಕದಲ್ಲಿ ಈ ರೀತಿಯ ಓಟಕ್ಕೆ ದಾಖಲಾಗಿರುವ ಅತಿದೊಡ್ಡ ಭಾಗವಹಿಸುವಿಕೆಯಾಗಿದ್ದು, ಈ ಬಾರಿ ಕೂಡ 5,000ಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಹಿರಿಯ ನಾಗರಿಕರು ಸೇರಿದಂತೆ ಎಲ್ಲಾ ವಯೋಮಾನದವರು ಓಟದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು. ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ 5 ಕಿಮೀ ಹಾಗೂ 10 ಕಿಮೀ ಓಟಕ್ಕೆ ಪ್ರತ್ಯೇಕ ಮಾರ್ಗಗಳನ್ನು ರೂಪಿಸಲಾಗಿದ್ದು, ನಗರದ ಪ್ರಮುಖ ರಸ್ತೆಗಳಲ್ಲಿ ಸಾಗುವ ಮ್ಯಾರಥಾನ್ ಆರಂಭಿಕ ಸ್ಥಳದಲ್ಲೇ ಮುಕ್ತಾಯಗೊಳ್ಳಲಿದೆ. ಸೇಫ್ ಮೈಸೂರು ರನ್ ಸಾರ್ವಜನಿಕ–ಪೊಲೀಸ್ ಸಹಭಾಗಿತ್ವ ಬಲಪಡಿಸುವುದರ ಜತೆಗೆ ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುವ ಮತ್ತು ಮಾದಕ ವಸ್ತುಗಳ ದುರುಪಯೋಗ ತಡೆ, ಸೈಬರ್ ಭದ್ರತೆ ಕುರಿತು ಜಾಗೃತಿ, ಸಂದೇಶ ನೀಡುವ ಉದ್ದೇಶ ಹೊಂದಿದೆ ಎಂದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಉಪ ಪೊಲೀಸ್ ಆಯುಕ್ತ ಸುಂದರ್ ರಾಜ್, ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಯೋಗಾತ್ಮ ಶ್ರೀಹರಿ, ಚಿರಾಗ್ ಆಡ್ಸನ ವಿವೇಕ್ ಇತರರಿದ್ದರು.

# ಸಫಾರಿ ಆದೇಶ ಹಿಂಪಡೆಯಲು ಸೂಚನೆ

ಗುಂಡ್ಲುಪೇಟೆ: ಬಂಡೀಪುರದಲ್ಲಿ ಸಫಾರಿ ಆರಂಭಕ್ಕೆ ರೈತ ಮುಖಂಡರು ಪ್ರತಿಭಟನೆ ನಡೆಸಿದ್ದರು ಪ್ರತಿ ಗ್ರಾ.ಪಂ ವ್ಯಾಪ್ತಿಯಲ್ಲಿ ಪಿಡಿಓ ಗಳಿಗೆ ಮನವಿ ದಲ್ಲಿಸಿ ಸಫಾರಿ ಹಿಂಪಡೆಯುವಂತೆ ಗ್ರಾ.ಪಂ ಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಬಂಡೀಪುರ, ಬಿ ಆರ್ ಹಿಲ್ಸ್, ಎಂ ಎಂ ಹಿಲ್ಸ್, ನಾಗರಹೊಳೆ ಯಲ್ಲಿ ಸಫಾರಿ ನಡೆಸದಂತೆ ಮನವಿ ಸಲ್ಲಿಸಿದಾರು ಕಾರಣ ಸಫಾರಿಯಿಂದ ರೈತರಿಗೆ ಯಾವುದೇ ಉಪಯೋಗವಿಲ್ಲ, ಸಫಾರಿ ವೀಕ್ಷಿಸಲು ಬರುವವರು ಯಾವುದೇ ಕಾಡಂಚಿನ ಗ್ರಾಮದವರಲ್ಲ ಹೊರಗಿನಿಂದ ಬರುವವರೇ ಹೆಚ್ಚು, ಸಫಾರಿಯಿಂದ ತೊಂದರೆಯಾಗುವುದು ರೈತರಿಗೆ ಜಮೀನಿಗೆ ತೆರಳುವ ರೈತರಿಗೆ ಇನ್ನಿತರ ಕೆಲಸಗಳಿಗೆ ಪ್ರಾಣಿಗಳ ತೊಂದರೆ ಹೆಚ್ಚಾಗಿದೆ.


ಕಾಡಿನೊಳಗೆ ಬಸ್ ಹಾಗೂ ಜೀಪುಗಳ ಸಂಚಾರದಿಂದ ವಾಲು ಮಾಲಿನ್ಯ, ಶಬ್ದ ಮಾಲಿನ್ಯ ಜೊತೆಗೆ ಸ್ವಚ್ಛಂದವಾಗಿ ಆಟವಾಡುವ ಪ್ರಾಣಿಗಳಿಗೆ ತೊಂದರೆಯಾಗುತ್ತದೆ, ಕಾಡಿನ ಒಳಗೆ ಮಾನವನ ಹಸ್ತಕ್ಷೇಪ ಇರಬಾರದು, ಸಫಾರಿಯಿಂದ ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳು ಹಣ ಮಾಡುವುದರ ಜೊತೆಗೆ ಅಕ್ರಮ ರೆಸಾರ್ಟ್ ,ಬಾರ್ ಗಲನ್ನು ಮಾಡಿ



ಕಾಡನ್ನು ಒತ್ತುವರಿ ಮಾಡುತ್ತಾರೆ, ಕಾಡನ್ನು ಉಳಿಸುವವರು ರೈತರು ,ಗಿರಿಜನರೇ ಹೊರತು ಯಾವುದೇ ಅಧಿಕಾರಿಗಳಲ್ಲ, ಕಾಡಿನೊಳಗೆ ಅಕ್ರಮ ರೆಸಾರ್ಟ್, ಹೊಂ ಸ್ಟೇ ಗಳನ್ನು ಸರ್ಕಾರ ವಶಪಡಿಸಿಕೊಳ್ಳಬೇಕು.ಅರಣ್ಯ ಅಧಿಕಾರಿಗಳು ಹಿಂದಿನ ದಿನವೇ ಮದ್ಯಪಾನ ಮಾಡಿಸಿ ಹಣ ಕೊಟ್ಟು ಹೋರಾಟಗಾರರ ಮೇಲೆ ದಾಳಿ ನಡೆಸಿ, ಹೋರಾಟದ ಹಾದಿ ದಿಕ್ಕು ತಪ್ಪುಸಲು ಷಡ್ಯಂತ್ರ ಮಾಡಿದ್ದರು ಈ ಬಗ್ಗೆ ಕ್ರಮ ವಹಿಸುವಂತೆ ಮನವಿ ಸಲ್ಲಿಸಿದರು.

## ಎಚ್.ರಾಜಪ್ಪ ನಿಧನ

ಮೈಸೂರು: ಸಂಜೆವಾಣಿ, ಮೈಸೂರು ಮಿತ್ರ, ವಿಜಯವಾಣಿ ಪತ್ರಿಕೆಗಳ ಮಾಜಿ ಉಪಸಂಪಾದಕ ಎಚ್.ಆರ್.ಮಲ್ಲೇಶ್ ಅವರ ತಂದೆ, ನಿವೃತ್ತ



ಮುಖ್ಯ ಶಿಕ್ಷಕ ಎಚ್.ರಾಜಪ್ಪ(74) ಅವರು ವಯೋಸಹಜ ಅಸೌಖ್ಯದಿಂದ ಶುಕ್ರವಾರ ಬೆಳಗಿನ ಜಾವ ಮೈಸೂರಿನ ಇಲವಾಲದ ಅವರ ನಿವಾಸದಲ್ಲಿ ನಿಧನರಾದರು. ಮೃತರಿಗೆ ಪತ್ನಿ ಭಾಗ್ಯಮ್ಮ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಇದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಬಳಿಯ ಹರದೂರಿನ ಅವರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ವಿವಿಧ ಈಡೇರಿಕೆಗೆ ಆಗ್ರಹಿಸಿ ದಾಸೋಹ ಕಾರ್ಮಿಕರ ಪ್ರತಿಭಟನೆ




ಮೈಸೂರು: ರಾಜ್ಯ ಸರಕಾರ ಭರವಸೆ ನೀಡಿದಂತೆ ಈ ಬಾರಿಯ ಬಜೆಟ್‌ನಲ್ಲಿ ಗೌರವಧನ ಹೆಚ್ಚಿಸಬೇಕು, ಬಿಸಿಯೂಟ ಕಾರ್ಮಿಕರಿಗೂ ಕನಿಷ್ಠ ವೇತನ ಜಾರಿ ಮಾಡಬೇಕು, ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ವತಿಯಿಂದ ಜಿಲ್ಲಾ ಪಂಚಾಯತ್ ಮುಂಭಾಗ ಶನಿವಾರ ಪ್ರತಿಭಟನೆ ನಡೆಸಲಾಯಿತು.

ರಾಜ್ಯದಾದ್ಯಂತ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅಪೌಷ್ಟಿಕತೆ ನೀಗಿಸಲು, ಮಕ್ಕಳು ವಿದ್ಯಾಭ್ಯಾಸ ಹೊಂದಲು ಅವಕಾಶ ಮಾಡಿಕೊಟ್ಟಿರುವ ಅಕ್ಷರ ದಾಸೋಹ ಯೋಜನೆ ಯಶಸ್ಸಿಗೆ ಬಿಸಿಯೂಟ ಕಾರ್ಯಕರ್ತೆಯರು ಶ್ರಮಿಸುತ್ತಿದ್ದಾರೆ. ಆದರೆ, ಸರಕಾರಗಳು ನಮ್ಮ ಶ್ರಮವನ್ನು ಕಡೆಗಣಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪಾಲಿಸುತ್ತಿರುವ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳಿಂದಾಗಿ ಇಂತಹ ಮಹತ್ವಾಕಾಂಕ್ಷಿತ ಯೋಜನೆಯನ್ನು ದೊಡ್ಡ ಸರಕಾರೇತರ ಸಂಸ್ಥೆಗಳು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಸೇವೆಯ ಹೆಸರಿನಲ್ಲಿ ನೀಡುವ ಮೂಲಕ ಖಾಸಗೀಕರಣ ಮಾಡಿ ಮಕ್ಕಳ ಭವಿಷ್ಯ ರೂಪಿಸುತ್ತಿದ್ದ ಬಿಸಿಯೂಟ ಕಾರ್ಯಕರ್ತೆಯರ ಬದುಕನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಸಿಯೂಟ ಕಾರ್ಮಿಕರಿಗೆ 10 ತಿಂಗಳ ಬದಲಾಗಿ 12 ತಿಂಗಳು ಗೌರವಧನ ನೀಡಬೇಕು. ಬಿಸಿಯೂಟ ಕಾರ್ಮಿಕರನ್ನು ಖಾಯಂಗೊಳಿಸಿ, ಸೇವಾ ಭದ್ರತೆ ಒದಗಿಸಬೇಕು. ಬಿಸಿಯೂಟ ಕಾರ್ಮಿಕರಿಗೆ ಮೊಟ್ಟೆ ಕುದಿಸಿ, ಸಿಪ್ಪೆ ಸುಲಿದ ಹಣವನ್ನು ಪ್ರತಿ ತಿಂಗಳು ಅವರ ಖಾತೆಗೆ ಜಮಾ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು .

ರಾಜ್ಯದಲ್ಲಿ ಈಗಾಗಲೇ ವಿವಿಧ ಇಲಾಖೆಗಳಲ್ಲಿ ಅಡುಗೆಯವರಿಗೆ ಕನಿಷ್ಠ ವೇತನವಿದ್ದು ಅದರಂತೆ ಬಿಸಿ ಊಟ ಕಾರ್ಮಿಕರಿಗೂ ಕನಿಷ್ಠ ವೇತನ ಜಾರಿ ಮಾಡಬೇಕು. ಈ ಬಾರಿಯ ಬಜೆಟ್ನಲ್ಲಿ ಗೌರವ ಧನ ಹೆಚ್ಚಿಸಬೇಕು. ಮಾಸಿಕ ವೇತನವನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಾರ್ಮಿಕರ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು. ಸುರಕ್ಷಿತ ನಿವೃತ್ತಿ ಬದುಕು ಖಾತ್ರಿಪಡಿಸುವುದಕ್ಕಾಗಿ ನಿವೃತ್ತಿ ವೇತನಕ್ಕೆ ಒಳಪಡಿಸಿ, ಅಲ್ಲಿಯವರೆಗೆ 5 ಲಕ್ಷ ಇಡಿಗಂಟು ನೀಡಬೇಕು. ಜೀವ ವಿಮೆಗೆ ಒಳಪಡಿಸಿ ಇಲಾಖೆಯಿಂದ ಪ್ರೀಮಿಯಂ ಪಾವತಿಸಬೇಕು. ಹತ್ತಿ ಬಟ್ಟೆಯ ಸಮವಸ ಹಾಗೂ ಕೈ ಗವಸು, ತಲೆಯ ಸ್ಕಾರ್, ಏಪ್ರಾನ್‌ಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷೆ ರಾಜೇಶ್ವರಿ, ಕಾರ್ಯದರ್ಶಿ ಪಿ.ಎಸ್.ಸಂಧ್ಯಾ, ಕೆ.ವಿ.ಉಮಾ, ಮಹದೇವಮ್ಮ, ಮಾಲಮ್ಮ, ಸೌಮ್ಯ, ರಾಜಮ್ಮ ಮತ್ತಿತರರು ಪಾಲ್ಗೊಂಡಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಮಾದರಿ ಪಟ್ಟಣವನ್ನಾಗಿಸಲು ಕಾಳಜಿ

## ಶಾಸಕ ಎಂ ಆರ್ ಮಂಜುನಾಥ್ ಭರವಸೆ | ಬಜೆಟ್ ಪೂರ್ವಭಾವಿ ಸಭೆ

ಹನೂರು: ಪಟ್ಟಣವನ್ನು ಮಾದರಿ ಪಟ್ಟಣವನ್ನಾಗಿ ಮಾಡಲು ವಿಶೇಷವಾಗಿ ಕಾಳಜಿ ವಹಿಸಿದ್ದೇನೆ ಇದಕ್ಕೆ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ ಎಂದು ಶಾಸಕ ಎಂ ಆರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ಪಟ್ಟಣ ಪಂಚಾಯಿತಿ ಕಚೇರಿ ಆವರಣದಲ್ಲಿ ಕರೆಯಲಾಗಿದ್ದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಹನೂರು ಪಟ್ಟಣ ಪಂಚಾಯಿತಿಗೆ ಸರ್ಕಾರದಿಂದ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಬಾರದೆ ಇರುವುದರಿಂದ ಪಟ್ಟಣದ 13 ವಾರ್ಡ್ ಗಳಲ್ಲಿ ಮೂಲಭೂತ ಸೌಲಭ್ಯ ಇಲ್ಲದೆ ಜನರು ಪರಿತಪಿಸುತ್ತಿರುವುದು ಗಮನಕ್ಕೆ ಬಂದಿದೆ.

ಈಗಾಗಲೇ 7ನೇ ವಾರ್ಡಿನಲ್ಲಿ ಕನಿಷ್ಠ ಮೂಲಭೂತ ಸೌಲಭ್ಯವು ಇಲ್ಲದೆ ಇರುವುದರಿಂದ 50 ಲಕ್ಷ ವಿಶೇಷ ಅನುದಾನದಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗಿದೆ. ಯೋಜನೆ ನಿರ್ಮಾಣ ಮಾಡಲು 81 ಕೋಟಿ ವೆಚ್ಚದಲ್ಲಿ ಡಿಪಿಆರ್ ಮಾಡಲಾಗಿದೆ ಪಟ್ಟಣದ ಹದಿಮೂರು ವಾರ್ಡ್ ಗಳಿಗೂ ಸಮಗ್ರ ಕುಡಿಯುವ ನೀರು ಪೂರೈಕೆ ಮಾಡಲು 30 ಕೋಟಿ ಅನುದಾನಕ್ಕೆ ಕ್ರಿಯಾಯೋಜನೆ ಮಾಡಲಾಗಿದೆ ಈ ಸಾಲಿನ ಬಜೆಟ್ ನಲ್ಲಿ ಅನುದಾನ ನೀಡಿದರೆ ಪಟ್ಟಣವನ್ನು ಅಭಿವೃದ್ಧಿ ಮಾಡಲು ಕ್ರಮವಹಿಸಲಾಗುವುದು ಎಂದರು. ಇನ್ನು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಸ್ವತ್ತು ಸಮಸ್ಯೆ ಇರುವುದರಿಂದ ಅದನ್ನು ಬಗೆಹರಿಸುವ ನಿಟ್ಟಿನಲ್ಲಿ ಈಗಾಗಲೇ ಡ್ರೋನ್ ಸರ್ವೆ ನಡೆಸಲಾಗುತ್ತದೆ ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರ ಮನೆಗೂ ಈ ಸ್ವತ್ತು ವಿತರಣೆ ಮಾಡಲಾಗುವುದು ಸಾರ್ವಜನಿಕರು ಎಲ್ಲ ರೀತಿಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪಟ್ಟಣ ವ್ಯಾಪ್ತಿಯಲ್ಲಿ ಯುಜಿಡಿ ಹಾಗೂ ಅಮೃತ ಯೋಜನೆ ಅಡಿ ಮನೆಮನೆಗೂ ಕುಡಿಯುವ ನೀರಿನ ಸಂಪರ್ಕ ನೀಡಲು ರಸ್ತೆ ಹರಿಯುತ್ತಿರುವುದರಿಂದ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿಲ್ಲ ಸಂಪೂರ್ಣ ಕಾಮಗಾರಿ ಮುಗಿದ ನಂತರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗುವುದು



### ನಾಮಕರಣ ಪ್ರಕ್ರಿಯೆ ವಿಳಂಬ

ನಾಮನಿರ್ದೇಶಿತ ಸದಸ್ಯ ಮಹಾದೇಶ್ ಮಾತನಾಡಿ ಹನೂರು ಪಟ್ಟಣದ ಪೆಟ್ರೋಲ್ ಬಂಕ್ ಸಮೀಪದ ವೃತ್ತಕ್ಕೆ ನಾಡಪ್ರಭು ಕೆಂಪೇಗೌಡ ವೃತ ಎಂದು ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡಿದೆ. ಆದರೆ ಅಧಿಕಾರಿಗಳು ದಾಖಲಾತಿಗಳನ್ನು ಇನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಕಳುಹಿಸಿಕೊಡದೆ ಇರುವುದರಿಂದ ವೃತ್ತ ನಾಮಕರಣ ಪ್ರಕ್ರಿಯೆ ವಿಳಂಬವಾಗಿದೆ ಈ ಕೂಡಲೇ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ , ಪುತ್ಥಳಿ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬೇಕು, ಪತ್ರಕರ್ತರಿಗೆ ಪ್ರತಿ ವರ್ಷ ಬಜೆಟ್ ನಲ್ಲಿ 5 ಲಕ್ಷ ಮೀಸಲಿಡಲಾಗುತ್ತಿದೆ ಇದರ ಕಳೆದ ವರ್ಷ 10 ಸಾವಿರ ಮಾತ್ರ ಖರ್ಚಾಗಿದೆ, ಈ ನಿಟ್ಟಿನಲ್ಲಿ ಇನ್ನು ಮುಂದೆ ಪತ್ರಕರ್ತರಿಗೆ ಈ ಹಣದಲ್ಲಿ ಲ್ಯಾಪ್ಟಾಪ್ ವಿತರಣೆ ಮಾಡಬೇಕು ಎಂದು ಮನವಿ ಮಾಡಿದರು

### ಎಲ್ಲ ರೀತಿಯ ಸಹಕಾರ

ಶಾಸಕ ಎಂಆರ್ ಮಂಜುನಾಥ್ ಪ್ರತಿಕ್ರಿಯಿಸಿ ಈಗಾಗಲೇ ನಾಡಪ್ರಭು ಕೆಂಪೇಗೌಡ ವಿರುದ್ಧದ ಸಂಬಂಧ ಸಮುದಾಯದವರು ಹಲವಾರು ಬಾರಿ ಗಮನಕ್ಕೆ ತಂದಿದ್ದಾರೆ ಈ ಕೂಡಲೇ ಅಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿ ಕಳುಹಿಸಿ ಸರ್ಕಾರಕ್ಕೆ ವರದಿ ನೀಡಿ ನಾನು ಸಂಬಂಧ ಪಟ್ಟವರ ಜೊತೆ ಚರ್ಚಿಸಿ ವೃತ್ತ ನಾಮಕರಣಕ್ಕೆ ಎಲ್ಲ ರೀತಿಯ ಸಹ ಕಾರ ನೀಡುತ್ತೇನೆ, ಪತ್ರಕರ್ತರಿಗೆ ಲ್ಯಾಪ್ಟಾಪ್ ವಿತರಿ ಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

### ಶವ ಸಾಗಿಸುವ ವಾಹನ ಇಲ್ಲದೆ ತೊಂದರೆ

ಯುವ ಮುಖಂಡ ಪ್ರಸನ್ನ ಮಾತನಾಡಿ ಹನೂರು ಪಟ್ಟಣ ವ್ಯಾಪ್ತಿಯಲ್ಲಿ ಯಾರಾದರೂ ಮೃತಪಟ್ಟರೆ ಶವ ಸಂಸ್ಕಾರ ಮಾಡಲು ಶವ ಸಾಗಿಸುವ ಯಂತ್ರ ಇಲ್ಲದೆ ತೊಂದರೆಯಾಗುತ್ತಿದೆ ಶಾಸಕರ ಅನುದಾನದಲ್ಲಿ ಸಹ ಸಾಗಿಸುವ ವಾಹನ ನೀಡಬೇಕು ಎಂದು ಮನವಿ ಮಾಡಿದರು.

ಎಂದರು. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಅಂಗಡಿ ಮಳಿಗೆಗಳಿಂದ ಸಮರ್ಪಕವಾಗಿ ಬಾಡಿಗೆ ವಸೂಲಾತಿ ಮಾಡದೇ ಇರುವುದರಿಂದ ಅಭಿವೃದ್ಧಿಗೆ ಹಿನ್ನಡೆಯಾಗಿದೆ, ಮುಂದಿನ ದಿನಗಳಲ್ಲಿ ವಾಣಿಜ್ಯ ಮಳಿಗೆ ಮಾಲೀಕರಿಗೆ ನೋಟಿಸ್ ನೀಡಿ ವಸೂಲಾತಿ ಮಾಡಬೇಕು, ಏಕಾಏಕಿ ಬಾಗಿಲು ಮುಚ್ಚುವುದು ಬೇಡ ಅವರು ಸಹ ಬಾಡಿಗೆ ಕಟ್ಟಲು ಬದ್ಧರಾಗಿದ್ದಾರೆ ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದರು.

ಪಟ್ಟಣದ ದಲಿತ ಮುಖಂಡ ಕಿರಣ್ ಮಾತನಾಡಿ ಹನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಸ್ವಚ್ಛತೆ ಸಮರ್ಪಕವಾಗಿ ಆಗದೆ ಇರುವುದರಿಂದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು. ಗ್ರಾಮ ಠಾಣ ವ್ಯಾಪ್ತಿಯಲ್ಲಿರುವ ನಿವೇಶನಗಳಿಗೆ ಈ ಸ್ವತ್ತು ಮಾಡಿಕೊಡಬೇಕು ಎಂದು ಸಲಹೆ ನೀಡಿದರು. ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ಸಿದ್ದರಾಜು ಮಾತನಾಡಿ ಹನೂರು ಪಟ್ಟಣದ 1,2,4 ವಾರ್ಡ್ ಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯದವರು ಹೆಚ್ಚಾಗಿ ವಾಸಿಸುತ್ತಿದ್ದಾರೆ. ಈ ಪೈಕಿ ಕೆಲವರಿಗೆ ಸರ್ಕಾರದಿಂದಲೇ ನಿವೇಶನ ನೀಡಲಾಗಿದೆ ಹಾಗಿದ್ದರೂ ಪಟ್ಟಣ ಪಂಚಾಯಿತಿಯವರು ಈ ಸ್ವತ್ತು ಮಾಡಿಕೊಡದೆ ಕಚೇರಿಗೆ ಅಲೆದಾಟ ಮಾಡಿಸುತ್ತಿದ್ದಾರೆ. ನಿಮ್ಮ ಬಳಿಯೇ ದಾಖಲೆ ಇಲ್ಲದಿದ್ದ ಮೇಲೆ ಇನ್ನು ಸಾರ್ವಜನಿಕರ ಬಳಿ ಎಲ್ಲಿ ದಾಖಲಾತಿ ಸಿಗುತ್ತದೆ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು. ಪಟ್ಟಣ ಪಂಚಾಯಿತಿ ವತಿಯಿಂದ ಮಾಡಿರುವ ಕಾಮಗಾರಿಗಳೆಲ್ಲ ಕಳಪೆ ಕಾಮಗಾರಿಯಾಗಿರುವುದರಿಂದ ಚರಂಡಿ ರಸ್ತೆ ಆರು ತಿಂಗಳಿಗೆ ಕುಸಿಯುತ್ತಿದೆ. ಕೆಲವು ಅಧಿಕಾರಿಗಳು ಆಸ್ತಿಯ ಮಾಲೀಕರು ಹೆಸರನ್ನೇ ತಿದ್ದುಪಡಿ ಮಾಡಿದ್ದಾರೆ ಇದರಿಂದ ಬಡವರು ಕೋರ್ಟ್ ಸುತ್ತುತ್ತಿದ್ದಾರೆ ಇಂತಹ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ವಹಿಸಬೇಕು, ಕಳೆದ 35 ವರ್ಷಗಳಿಂದ ಬಡವರಿಗೆ ಯಾವುದೇ ನಿವೇಶನ ಹಂಚಿಕೆ ಮಾಡಿಲ್ಲ ಈ ಕೂಡಲೇ ಅಧಿಕಾರಿಗಳು ಸರ್ಕಾರಿ ನಿವೇಶನವನ್ನು ಗುರುತಿಸಿ ಪೌರಕಾರ್ಮಿಕರು ಹಾಗೂ ಬಡವರಿಗೆ ನಿವೇಶನ ನೀಡಬೇಕು ಎಂದರು. ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ ತಹಸಿಲ್ದಾರ್ ಚೈತ್ರ ಮುಖ್ಯಾಧಿಕಾರಿ ರೇಖಾ, ಸಮುದಾಯ ಸಂಘಟನಾಧಿಕಾರಿ ಚಂದ್ರಕುಮಾರ್, ಆರೋಗ್ಯ ನಿರೀಕ್ಷಕ ಪ್ರಕಾಶ್, ದ್ವಿತೀಯ ದರ್ಜೆ ಸಹಾಯಕರುಗಳಾದ ಮಾದೇಶ್, ಪ್ರತಾಪ್ ಮಾಜಿ ಅಧ್ಯಕ್ಷರಾದ ಮಮ್ತಾಜ್ ಬಾನು, ಬಾಲರಾಜ್ ನಾಯ್ಡು ಮಾಜಿ ಸದಸ್ಯೆ ಲತಾಮಣಿ ಮುಖಂಡರಾದ ಸಿದ್ದೇಗೌಡ, ಇನ್ನಿತರರು ಹಾಜರಿದ್ದರು.

## 24 ಸವಿತಾ ಸಮಾಜದ ಸಮುದಾಯ ಭವನ ಉದ್ಘಾಟನೆ



ಮೈಸೂರು: ಹುಣಸೂರು ತಾಲೂಕು ಬಿಳಿಕೆರೆಯಲ್ಲಿನ ನಯನಜ ಕ್ಷತ್ರಿಯ ಸವಿತಾ ಸಮಾಜದಿಂದ ಬಿಳಿಕೆರೆಯಲ್ಲಿ ನಿರ್ಮಿಸಿರುವ ಸಮುದಾಯ ಭವನ ಉದ್ಘಾಟನಾ ಸಮಾರಂಭ ಫೆ.24ರ ಬೆಳಗ್ಗೆ 11.30ಕ್ಕೆ ನಡೆಯಲಿದೆ ಎಂದು ಸವಿತಾ ಸಮಾಜದ ಜಿಲ್ಲಾ ಉಪಾಧ್ಯಕ್ಷ ಜಲೇಂದ್ರಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಡಾ. ವೀರೇಂದ್ರ ಹೆಗ್ಗಡೆ ಆಶೀರ್ವಚನ ನೀಡುವರು, ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಶಾಸಕ ಜಿ.ಡಿ. ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು, ಮಾಜಿ ಶಾಸಕ ಎಚ್.ಪಿ. ಮಂಜುನಾಥ್ ಉದ್ಘಾಟಿಸುವರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇನ್ನಿತರರು ಹಾಜರಿರುವರು. ಸುಮಾರು 40 ಲಕ್ಷ ವೆಚ್ಚದಲ್ಲಿ ಈ ಸಮುದಾಯ ಭವನ ನಿರ್ಮಿಸಿದ್ದು, ಸಣ್ಣಪುಟ್ಟ ಸಮಾರಂಭಗಳಿಗೆ ಎಲ್ಲ ಸಮುದಾಯದವರಿಗೆ ಬಾಡಿಗೆಗೆ ನೀಡಲಾಗುವುದೆಂದರು. ನಾಗರಾಜು, ರಾಜೇಶ್, ಮಾದಪ್ಪ, ಎನ್. ರಾಜು, ವಿ.ಎಸ್. ಮಹೇಶ್‌ಕುಮಾರ್ ಇದ್ದರು.

## ಟೀಕಿಸುವ ಮುನ್ನಾ ಎಚ್‌ಡಿಕೆ ಮೂಲಕ ಕೈಗಾರಿಕೆ ತರಲಿ

ಮೈಸೂರು: ಸಾರಾ ಮಹೇಶ್ ಸಿದ್ದರಾಮಯ್ಯರನ್ನು ಟೀಕಿಸುವ ಮುನ್ನ ತಮ್ಮ ಕೇಂದ್ರ ಸಚಿವರ ಮೂಲಕ ಮಂಡ್ಯ ಅಲ್ಲ, ರಾಜ್ಯಕ್ಕೆ ಒಂದಾದರೂ ಕೈಗಾರಿಕೆ ತರುವ ಪ್ರಯತ್ನ ಮಾಡಲಿ ಎಂದು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಸವಾಲು ಹಾಕಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಾ.ರಾ.ಮಹೇಶ್ ಸಿಎಂ ಸಿದ್ದರಾಮಯ್ಯರ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡಿರುವುದು ಖಂಡನೀಯ. ಅಷ್ಟಕ್ಕೂ ಕುಟುಂಬ ರಾಜಕಾರಣ ಇರುವುದು ಜೆಡಿಎಸ್‌ನಲ್ಲೇ ಆಗಿದೆ. ಅದನ್ನು ಪ್ರಶ್ನಿಸುವ ಕೆಲಸವನ್ನು ಸಾ.ರಾ.ಮಹೇಶ್ ಮಾಡಬೇಕಿದೆ. ಅದರಲ್ಲೂ ಕೇಂದ್ರ ಸಚಿವರಾಗಿ ಎಚ್.ಡಿ.ಕುಮಾರಸ್ವಾಮಿ ಎರಡು ವರ್ಷ ಮೀರುತ್ತಿದೆ. ರಾಜ್ಯ ಅಥವಾ ಮಂಡ್ಯಕ್ಕಾಗಲಿ ಒಂದೇ ಒಂದು ಕೈಗಾರಿಕೆ ತರುವ ಕೆಲಸ ಮಾಡಿಲ್ಲ. ಸಾ.ರಾ.ಮಹೇಶ್ ತಮ್ಮ ಎಚ್ ಡಿಕೆ ಮೂಲಕ ಮೊದಲು ಕೈಗಾರಿಕೆಗಳನ್ನು ತರುವ ಕೆಲಸ ಮಾಡಲಿ. ಲೋಕ



ಸಭಾ ಚುನಾವಣೆಗೂ ಮೊದಲು ಮೇಕೆದಾಟು ಯೋಜನೆ ಬಗ್ಗೆ ನೀಡಿದ್ದ ಭರವಸೆಯನ್ನು ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಾ.ರಾ. ಮಹೇಶ್ ನೆನಪಿಸುವುದು ಸೂಕ್ತ. ಭದ್ರಾ ಮೇಲ್ದಂಡೆ ಯೋಜನೆಗೆ ಇದುವರೆಗೂ ಹಣ ಬಿಡುಗಡೆಯಾಗಿಲ್ಲ. ಈ ಕುರಿತು ಎಚ್.ಡಿ. ಕುಮಾರಸ್ವಾಮಿ ಪ್ರಧಾನಿ ಬಳಿ ಮಾತನಾಡಲು ತಿಳಿಸುವುದು ಸೂಕ್ತ ಎಂದರು.

ಜೆಡಿಎಸ್ ನ ಎಚ್.ಡಿ.ದೇವೇಗೌಡರ ಕುಟುಂಬದಲ್ಲಿ ಎಚ್.ಡಿ. ಕುಮಾರಸ್ವಾಮಿ, ಎಚ್.ಡಿ.ರೇವಣ್ಣ, ಪ್ರಜ್ವಲ್, ಸೂರಜ್ ರೇವಣ್ಣ, ಭವಾನಿ ರೇವಣ್ಣ, ಅನಿತಾ ಕುಮಾರಸ್ವಾಮಿ ಇವರೆಲ್ಲ ಏನಾಗಿದ್ದಾರೆ, ಮೊದಲು ಏನಾಗಿದ್ದರು. ಅಲ್ಲಿ ಕಾರ್ಯಕರ್ತರಿಗೆ ಯಾವ ಅಧಿಕಾರ ಕೊಟ್ಟಿದ್ದಾರೆ. ಯತೀಂದ್ರ ಸಿದ್ದರಾಮಯ್ಯ ತಂದೆ ಮುಖ್ಯಮಂತ್ರಿಯಾಗಿಸಲು ಕ್ಷೇತ್ರ ತ್ಯಾಗ ಮಾಡಿದ್ದಾರೆ. ಕ್ಷೇತ್ರ ಹಾಗೂ ರಾಜ್ಯದಲ್ಲಿ ಸುತ್ತಾಡಿ ಜನರ ಸೇವೆ ಮಾಡಲು ಅವರಿಗೆ ಅವಕಾಶ ನೀಡಲಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಮುಖಂಡರಾದ ರಾಜಶೇಖರ್, ಲೋಕೇಶ್‌ಕುಮಾರ್ ಮಾದಾಪುರ, ಸೈಯ್ಯದ್ ಫಾರೂಕ್, ಮೈಸೂರು ಬಸವಣ್ಣ, ಎಸ್.ಎ.ರಹೀಂ, ಕುಕ್ಕರಹಳ್ಳಿ ನಂಜುಂಡಸ್ವಾಮಿ ಇನ್ನಿತರರು ಹಾಜರಿದ್ದರು.

## ಕಾಂಗ್ರೆಸ್ ಕಾರ್ಯಕರ್ತರ ನಡೆಗೆ ಖಂಡನೆ

ಚಾಮರಾಜನಗರ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಡೆದ ಶೃಂಗಸಭೆಗೆ ನುಗ್ಗಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರ ನಡೆಯನ್ನು ಖಂಡಿಸಿ ಭಾರತೀಯ ಜನತಾ ಪಕ್ಷದ ಯುವ ಮೋರ್ಚಾ ಕಾರ್ಯಕರ್ತರು ಸಂಜೆ ನಗರದ ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ಈ ಸಂದರ್ಭದಲ್ಲಿ ಬಿಜೆಪಿ ಯುವಮೋರ್ಚಾ ಮುಖಂಡರು ಮಾತನಾಡಿ ವಿದೇಶದ ಅತಿಥಿ ಗಣ್ಯರು ಮತ್ತು ಉದ್ಯಮಿಗಳು ಭಾಗವಹಿಸಿದ್ದ ಶೃಂಗಸಭೆಯಲ್ಲಿ ಗದ್ದಲ ಎಬ್ಬಿಸಿದ ಕಾಂಗ್ರೆಸ್ ಗೂಂಡಾ ಗಳನ್ನು ಗಡಿಪಾರು ಮಾಡುವಂತೆ ಒತ್ತಾಯಿಸಿದರು.

ನರೇಂದ್ರ ಮೋದಿ ಅವರ ಬೆಂಬಲಿಗರೆಂದು ನಾಟಕವಾಡಿ ಸಭೆಗೆ ನುಗ್ಗಿದ ಕಾಂಗ್ರೆಸ್ ನ ಚೇಳಾಗಳು ಅರೆಬೆತ್ತಲೆ ಪ್ರತಿಭಟನೆ ಮಾಡಿ ದೇಶಕ್ಕೆ ಮುಜುಗರ ಉಂಟುಮಾಡಿದ್ದಾರೆ ಎಂದು ಆರೋಪಿಸಿದರು. ವಿದೇಶಿ ಗಣ್ಯರ ಸಮ್ಮುಖದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ದೇಶಕ್ಕೆ ಕಳಂಕ ತರುವ ರೀತಿಯಲ್ಲಿ ವರ್ತಿಸಿರುವ ಈ ದುಷ್ಟರಿಗೆ ತಕ್ಕ ಶಾಸ್ತಿ ಮಾಡಬೇಕು ಎಂದು ಆಗ್ರಹಿಸಿದರು.

### ಬಂಧನ, ಬಿಡುಗಡೆ



ಪ್ರತಿಭಟನೆ ನಿರತ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಬಳಿಕ ಜಿಲ್ಲಾ ಕಾಂಗ್ರೆಸ್ ಕಾಂಗ್ರೆಸ್ ಕಾರ್ಯಾಲಯಕ್ಕೆ ಮುತ್ತಿಗೆಹಾಕಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಾ ನಿರತರನ್ನು ಬಂಧಿಸಲು ಮುಂದಾದರು. ನಂತರ ಬಿಡುಗಡೆ ಮಾಡಿದರು. ಈ ಹಂತದಲ್ಲಿ ಪೊಲೀಸರು ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ತಳ್ಳಾಟ, ನೂಕಾಟ, ಮಾತಿನ ಚಕಮಕಿ ನಡೆಯಿತು. ನಂತರ ಪೊಲೀಸರು ಪ್ರತಿಭಟನೆ ನಿರತರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್, ಪವನ್, ಮಂಜುನಾಥ್, ನಗರಸಭಾ ಮಾಜಿ ಸದಸ್ಯ ಶಿವಣ್ಣ ಎಸ್.ಬಾಲಸುಬ್ರಹ್ಮಣ್ಯಂ ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು.

### ಕುಲಪತಿ ಡಾ.ಕೆ.ಶಿವಚಿತ್ತಪ್ಪ ಅಭಿಮತ

## ಶಿಕ್ಷಣದಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ

ಚಾಮರಾಜನಗರ, ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದರೆ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿದೆ ಎಂದು ವಿಶ್ವವಿದ್ಯಾಲಯ ಕುಲಪತಿ ಡಾ.ಕೆ,ಶಿವಚಿತ್ತಪ್ಪ ಹೇಳಿದರು.

ನಗರದ ಜೆಎಸ್‌ಎಸ್ ಕಾಲೇಜಿನಲ್ಲಿ 2025–26ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಪ್ರಥಮ ವರ್ಷದ,ಬಿ.ಇಡಿ,ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಸಮಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ತಾವು ಈಗಾಗಲೇ ವಿವಿಧ ದೇಶಗಳ. 20 ವಿಶ್ವವಿದ್ಯಾಲಯಗಳಿಗೆ ಭೇಟಿಗಳು ನೀಡಿ ಅಧ್ಯಯನ ಮಾಡಿದ್ದು, ಭಾರತ ದೇಶದಲ್ಲಿರುವ ವಿಶ್ವ ವಿದ್ಯಾಲಯಗಳು ವಿಶ್ವಕ್ಕೆ ಶ್ರೇಷ್ಠವಾಗಿದೆ. ಇಲ್ಲಿನ ಭಾರತೀಯ ಸಂಸ್ಕೃತಿ ಇತರರಿಗೆ ಪ್ರೇರಣೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಮಾತೃಭಾಷೆ ಕನ್ನಡದ ಜೊತೆ ಇಂಗ್ಲಿಷ್ ಭಾಷೆಯನ್ನು ಮಾತನಾಡುವ ಅಭಿರುಚಿ ಬೆಳೆಸಿಕೊಳ್ಳಿ ನಿಮಗೆ ಸರ್ಕಾರಿ ಉದ್ಯೋಗ ಸಿಕ್ಕಿದಾಗ ಹೊರದೇಶದಲ್ಲಿ ಇಂಗ್ಲಿಷ್ ಇದ್ದರೆ ಮಾತ್ರ ಜೀವನ ಮಾಡಲು ಸಾಧ್ಯ ಎಂದು ಸಲಹೆ ನೀಡಿದರು.



ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯ ಪ್ರಾಂಶುಪಾಲ ಡಾ ಕೆ.ಸಿ.ಬಸವಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ. ಬಿಎಡ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಸಾವಿರಾರು ವಿದ್ಯಾರ್ಥಿಗಳು ಜಿಲ್ಲೆ ರಾಜ್ಯ ಹೊರ ರಾಜ್ಯಗಳಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸದ ಜೊತೆ ಭಾರತೀಯ ಸಂಸ್ಕೃತಿ ಬಿಂಬಿಸುವ ಕಾರ್ಯಕ್ರಮಗಳು, ಜೊತೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸಕ್ರಿಯವಾಗಿ ನಡೆಯುತ್ತಿರುವುದಾಗಿ ತಿಳಿಸಿದರು. ಮಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯ ಡಾಕೆ.ಸಿ. ಮಹದೇಶ ವಿಧವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು, ಕಾಲೇಜಿನ ಉಪನ್ಯಾಸಕ ಕೆಎಂ ಯೋಗೇಶ್. ಎಸ್ ಎನ್ ರಾಜು. ಡಿಎಸ್ ಸುರೇಶ, ಕೆಎಸ್ ಸಿದ್ದರಾಜು. ಬಿಎಸ್ ಶಿವಕುಮಾರ್ . ಎಜೆ ಸದಾನಂದ, ಎಂ ಶ್ರೀಧರ್, ಡಿ ಎನ್ ಶಿವಕುಮಾರ್. ಉಪನ್ಯಾಸಕಿ. ಲಕ್ಷ್ಮಿ ಹಾಜರಿದ್ದರು.

# ಎಸ್ ಎಸ್ ಎಲ್ಸಿಯಲ್ಲಿ ಕಡಿಮೆ ಫಲಿತಾಂಶ ಪಡೆದ ಶಾಲೆಗಳಿಗೆ ಜಿ.ಪಂ.ಸಿ.ಇ.ಓ ಭೇಟಿ





**ಮಂಡ್ಯ:** ಪಾಂಡವಪುರ ತಾಲ್ಲೂಕಿನ ಜಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆಗೆ ಭೇಟಿ ಕೊಟ್ಟ ಜಿ. ಪಂ. ಸಿ.ಇ.ಓ ನಂದಿನಿ ಕೆ.ಆರ್. ರವರು ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಜೊತೆ ಸಂವಾದ ನಡೆಸಿ, ವಿದ್ಯಾರ್ಥಿಗಳ ಕುಂದು ಕೊರತೆಗಳನ್ನುಆಲಿಸಿದರು.

ಕಳೆದ ಸಾಲಿನಲ್ಲಿ ಖಖಐಅ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದ ಪರಿಣಾಮ ಮತ್ತೆ ಈ ಮಟ್ಟದ ಫಲಿತಾಂಶ ಬರಬಾರದೆಂದು ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ಶಿಕ್ಷಕರ ಜೊತೆ ಕಲಿಕೆಯ ಹಾಗೂ ಬೋಧನೆಯ ವರದಿ ಪಡೆದರು.

ಶಾಲೆಯಲ್ಲಿ ಶಿಕ್ಷಕರ ಬೋಧನೆ ಹೇಗಿದೆ ಹಾಗೆಯೇ ಶಾಲೆಯಲ್ಲಿ ಸಂಜೆಯ ನಂತರ ವಿಶೇಷ ತರಗತಿಗಳು ನಡೆಯುತ್ತಿದೆಯೇ ಎಂದು ಮಕ್ಕಳೊಟ್ಟಿಗೆ ಮುಕ್ತಾವಾಗಿ ಚರ್ಚಿಸಿದರು.

ಹಾಗೆ "ಕಲಿಕಾಮಿತ್ರ" ಎಷ್ಟು ಮಕ್ಕಳಿಗೆ ಉಪಯುಕ್ತವಾಗಿದೆ ಎಂಬ ಮಾಹಿತಿ ಸಹ ಪಡೆದರು.

ವಿದ್ಯಾರ್ಥಿಗಳೊಡನೆ "ಕಲಿಕಾಮಿತ್ರ" ಕುರಿತು ಸಂವಾದ ನಡೆಸಿದ ಸಂದರ್ಭದಲ್ಲಿ ಇದಕ್ಕೆ ಉತ್ತರಿಸಿದ ವಿದ್ಯಾರ್ಥಿಗಳು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಉಪಯುಕ್ತವಾಗಿದೆ. ಕಾರಣ ಕಲಿಕಾಮಿತ್ರ ಪತ್ಯವು ಕನ್ನಡದಲ್ಲಿ ಇರುವುದರಿಂದ ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ಕೊಂಚ ಕಷ್ಟವಾಗಿದೆ, ಹಾಗಾಗಿ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಕಾಮಿತ್ರ ಅನುವಾದಗೊಂಡರೆ ನಮಗೆ ಸಹಾಯವಾಗಲಿದೆ ಎಂದು ತಿಳಿಸಿದರು.

ಜಕ್ಕನಹಳ್ಳಿ ಗ್ರಾಮ ಪಂಚಾಯಿತಿ ಗ್ರಂಥಾಲಯದ ವ್ಯವಸ್ಥೆ ಇಲ್ಲದ ಕಾರಣ ಪ್ರಾಥಮಿಕ ಶಾಲೆಯೊಂದರಲ್ಲಿ ಖಾಲಿ ಇರುವ ಕೊಠಡಿಯೊಂದನ್ನು ಆದಷ್ಟು ಬೇಗ ಗ್ರಂಥಾಲಯಕ್ಕೆ ನೀಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಸೂಚಿಸಿದರು.

ಶಾಲಾ ಮಕ್ಕಳಿಗೆ ಬಿಸಿಯೂಟದಡಿ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಬಿಸಿಯೂಟದ ವ್ಯವಸ್ಥೆ ಸಿಗುತ್ತಿದೆಯೇ ? ಎಂಬುದರ ಕುರಿತು ಪರಿಶೀಲಿಸಿದರು.

ಕನ್ನಡ ಮಾಧ್ಯಮದಲ್ಲಿ 98 ವಿದ್ಯಾರ್ಥಿಗಳಿದ್ದು, ಶಾಲಾ ಕೊಠಡಿಯು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿಲ್ಲದ ಕಾರಣ ಸ್ಥಳದಲ್ಲಿಯೇ ಶಾಲೆಯಲ್ಲಿನ ಮತ್ತೊಂದು ಬದಲಿ ಕೊಠಡಿಯನ್ನು ಸಿ.ಇ.ಓ ರವರು ಗುರುತಿಸಿ, ವಿದ್ಯಾರ್ಥಿಗಳನ್ನು ಕೂಡಲೇ ಸ್ಥಳಾಂತರಿಸುವ ವ್ಯವಸ್ಥೆ ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಹಾಗೂ ಮುಖ್ಯೋಪಾಧ್ಯಾಯರಿಗೆ ಸೂಚಿಸಿದರು.

ಶಾಲೆಯಲ್ಲಿ ಶಿಕ್ಷಕರ ಕೊರತೆಯಿದ್ದು, 6 ಜನ ಅತಿಥಿ ಶಿಕ್ಷಕರು ನೇಮಕಗೊಂಡಿದ್ದಾರೆ, ಅದರಲ್ಲಿ ಕೆಲವರು ಬಸ್ಸಿನ ಕೊರತೆಯಿಂದು ಬೇಗ ತೆರಳುವ ಶಿಕ್ಷಕರಿದ್ದಾರೆ ಎಂದು ಮುಖ್ಯೋಪಾಧ್ಯಾಯರು ಸಿ.ಇ.ಓ ರವರಿಗೆ ತಿಳಿಸಿದ ಕಾರಣ, ಅತಿಥಿ ಉಪನ್ಯಾಸಕರಿಗೆ ಮಕ್ಕಳ ವಿದ್ಯಾಭ್ಯಾಸದ ಕುರಿತು ಒಳಿತಾಗುವ ಹಾಗೆ ಸಹಕರಿಸಿ, ಸಾರಿಗೆ ವ್ಯವಸ್ಥೆ ಸಂಬಂಧಿಸಿದಂತೆ ಬದಲಿ ವ್ಯವಸ್ಥೆ ಮಾಡಿಕೊಂಡು ಶಾಲೆಯ ಅವಧಿಯ ಸಮಯ, ಶಿಸ್ತು ಪಾಲನೆ ಹಾಗೂ ಮಕ್ಕಳ ವಿಧ್ಯಾಭ್ಯಾಸ ಕುರಿತು ಗಮನ ಹರಿಸುವಂತೆ ಸಲಹೆ ನೀಡಿದರು.

ಶಾಲಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳಿಗೆ ಬೆಳಕಿನ ವ್ಯವಸ್ಥೆ ಇಲ್ಲದಿರುವುದನ್ನು ಗಮನಿಸಿದ ಸಿ.ಇ.ಓ ರವರು ತಕ್ಷಣ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕೂಡಲೇ ಬಲ್ಪ್ ಅಳವಡಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ವಿಶೇಷ ತರಗತಿಗಳು ನಡೆಯುತ್ತಿರುವುದರಿಂದ ಈಗಾಗಲೇ ಎರಡು ತಿಂಗಳ ಹಿಂದೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕೊಠಡಿಗಳಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆ ಕಲ್ಪಿಸಲಾಗಿದೆಯೇ? ಇಲ್ಲವೇ? ಎಂಬುವುದರ ಕುರಿತು ಖುದ್ದು ಪರಿಶೀಲಿಸಿ, ಸೂಕ್ತ ಬೆಳಕಿನ ವ್ಯವಸ್ಥೆಯಿಲ್ಲದ ಶಾಲಾ ಕೊಠಡಿಗಳಿಗೆ ಕಾಂಟಿಜೆಸ್ಸಿ ಅಥವಾ ಇತರೆ ಅನುದಾನದಡಿ ಬಲ್ಪ್ ಗಳನ್ನು ಅಳವಡಿಸಲು ತಿಳಿಸಲಾಗಿತ್ತು. ಅದರೂ ಸಹ ಶಾಲಾ ಕೊಠಡಿಯಲ್ಲಿ ಬೆಳಕಿನ ವ್ಯವಸ್ಥಗೆ ಬಲ್ಪ್ ಅಳವಡಿಸದ್ದಿದ್ದುರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಿ, ಜಿಲ್ಲೆಯ ಎಲ್ಲಾ ಶಾಲೆಯ ಮುಖ್ಯೋಪಾಧ್ಯಯರೊಂದಿಗೆ ಮತ್ತೊಮ್ಮೆ ವಿಡಿಯೋ ಸಂವಾದ ಕಾರ್ಯಕ್ರಮ ನಡೆಸಿ, ಸೂಕ್ತ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿ, ಮುಂದಿನ ದಿನಗಳಲ್ಲಿ ಯಾವುದೇ ಶಾಲೆಯ ಕೊಠಡಿಗಳಲ್ಲಿ ಬೆಳಕಿನ ವ್ಯವಸ್ಥೆಯಿಲ್ಲದಿರುವುದು ಕಂಡು ಬಂದಿಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾವುದು ಎಂದು ಎಚ್ಚರಿಕೆ ನೀಡಿದರು.

**ಶಾಲಾ ಮಕ್ಕಳ ಜೊತೆ ಬಿಸಿಯೂಟ ಸವಿದ ಸಿ.ಇ.ಓ:** ನಾಗಮಂಗಲ ತಾಲ್ಲೂಕಿನ ಚಿಣ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಕ್ಕಳ ಹಾಗೂ ಶಿಕ್ಷಕರ ನಡುವೆ ವಿಧ್ಯಾಭ್ಯಾಸದ ಕುರಿತು ಹಾಗೂ ಶಾಲೆಯ ಬಿಸಿಯೂಟದ ವ್ಯವಸ್ಥೆ ಕುರಿತು ಮಾಹಿತಿ ಪಡೆದರು.

ಶಾಲಾ ಮಕ್ಕಳ ಜೊತೆ ಕೂತು ಮಧ್ಯಾಹ್ನದ ಬಿಸಿಯೂಟ ಸವಿದು ಮಕ್ಕಳ ಖುಷಿಗೆ ಪಾತ್ರರಾದರು.

ಹಾಗೆ ಕಳೆದ ವರ್ಷಕ್ಕಿಂತ ಈ ವರ್ಷ ಎಷ್ಟು ಮಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದುಳಿದಿದ್ದಾರೆ ಎಂದು ಗಮನಿಸಿ ಮಕ್ಕಳ ಉನ್ನತ ಅಭಿವೃದ್ಧಿಗೆ ಶಿಕ್ಷಕರು ಪಾತ್ರರಾಗಬೇಕೆಂದು ತಿಳಿಸಿದರು. ಶಾಲೆಯಲ್ಲಿ ಹೆಣ್ಣು ಮಕ್ಕಳು ಫಲಿತಾಂಶ ಶೇಕಡಾ 92.6 ರಷ್ಟಿದ್ದು, ಗಂಡು ಮಕ್ಕಳು ಸಹ ಮುಂದಿನ ಒಂದು ತಿಂಗಳೊಳಗೆ ಧೀರ್ಘ ಅಭ್ಯಾಸ ನಡೆಸಿ, ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾಗಬೇಕೆಂದು ತಿಳಿಸಿದರು.

ಹಿಂದಿನ ವರ್ಷದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಯ ಪೋಟೋವನ್ನು ಶಾಲೆಯಲ್ಲಿದ್ದ ಫಲಕದಲ್ಲಿ ಅಳವಡಿಲಾಗಿತ್ತು, ಸದರಿ ಫಲಕದಲ್ಲಿ ಈ ವರ್ಷದಲ್ಲಿ ಯಾರು ತಮ್ಮ ಪೋಟೋವನ್ನು ಹಾಕಲು ಇಚ್ಚಿಸುತ್ತಿರಿ ಎಂದು ಪ್ರಶ್ನಿಸಿದ ಸಿ.ಇ.ಓ ರವರ ಪ್ರಶ್ನೆಗೆ ಎಲ್ಲಾ ವಿದ್ಯಾರ್ಥಿಗಳು ಕೈ ಎತ್ತುವುದರ ಮೂಲಕ ತಮ್ಮಲ್ಲಿರುವ ಉತ್ಸಾಹವನ್ನು ಪ್ರದರ್ಶಿಸಿ, ಸಿ.ಇ.ಓ ರವರ ಪ್ರಶಂಸೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಯವರಾದ ವೀಣಾ ರವರು, ರವಿಕುಮಾರ – ಶಿಕ್ಷಣಾಧಿಕಾರಿ ಅಕ್ಷರ ದಾಸೋಹ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುರೇಶ , ನಾಗೇಗೌಡಮುಖ್ಯೋಪಾಧ್ಯಾಯರು ಜಕ್ಕನಹಳ್ಳಿ, ಮಂಜೇಗೌಡ ಮುಖ್ಯೋಪಾಧ್ಯಾಯರು ಚೀಣ್ಯ, ಪಂಚಾಯಿತಿ ಕಾರ್ಯದರ್ಶಿ ರಕ್ಷಿತ್ ಹಾಗೂ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

### ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿ

**ಚಿಕ್ಕಬಳ್ಳಾಪುರ:** 2026–27ನೇ ಸಾಲಿನಲ್ಲಿ ಡಾ. ಬಾಬು ಜಗಜೀವನರಾಂ ರವರ 119ನೇ ಜನ್ಮ ದಿನಾಚರಣೆಯನ್ನು ದಿನಾಂಕ: 05/04/2026 ರಂದು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆಯನ್ನು ದಿನಾಂಕ:14/04/2026 ರಂದು ರಾಜ್ಯ ಮಟ್ಟದಲ್ಲಿ ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ 2026–27ನೇ ಸಾಲಿನಲ್ಲಿ ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ರವರ ಪ್ರಶಸ್ತಿಗಳನ್ನು ನೀಡಿ ಗೌರವಿಸಲು ಉದ್ದೇಶಿಸಿ ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗಳಿಗೆ ಕೆಲವು ಮಾರ್ಗಸೂಚಿಗಳನ್ವಯ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಒಬ್ಬ ವ್ಯಕ್ತಿ ಒಂದು ಪ್ರಶಸ್ತಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿದಾರರ ವಯಸ್ಸು ಕನಿಷ್ಠ 35 ವರ್ಷಗಳಾಗಿರತಕ್ಕದ್ದು. ಪ್ರಶಸ್ತಿಗೆ ಯಾವುದೇ ಜನಾಂಗದ ವ್ಯಕ್ತಿ ಅರ್ಜಿ ಸಲ್ಲಿಸಬಹುದು. ಪ್ರಶಸ್ತಿಯು ಪ್ರಶಂಸಾ ಪತ್ರ, ಶಾಲು, ಗಂಧದ ಹಾರ, ಫಲ–ಪುಷ್ಪ ಹಾಗೂ ರೂ.25000/–ಗಳ ಮೊತ್ತದ ನಗದನ್ನು ಒಳಗೊಂಡಿರುತ್ತದೆ. ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ವ್ಯಕ್ತಿಯು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರಬಾರದು.

ಈ ಸಂಬಂಧವಾಗಿ ಇಚ್ಚೆಯುಳ್ಳವರು ಅರ್ಜಿಗಳನ್ನು ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಂದ ಪಡೆದು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಚೇರಿ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ:ಎಸ್.ಬಿ–11, ಇಲ್ಲಿಗೆ ಮಾರ್ಚ್ 5ರ ಸಂಜೆ 5:30 ರ ಒಳಗಾಗಿ ಮುದ್ದಾಂ ಸಲ್ಲಿಸುವುದು ಹಾಗೂ ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರ ಕಚೇರಿ, ಸಮಾಜಕಲ್ಯಾಣ ಇಲಾಖೆ ರವರನ್ನು ಹಾಗೂ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಚಿಕ್ಕಬಳ್ಳಾಪುರ ಕಚೇರಿಯ ದೂರವಾಣಿ ಸಂಖ್ಯೆ:08156–277116 ರವರನ್ನು ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ತೇಜಾನಂದರೆಡ್ಡಿ ತಿಳಿಸಿದ್ದಾರೆ.

### ವಿಶ್ವ ಸಾಮಾಜಿಕ ನ್ಯಾಯ ಕಾರ್ಯಕ್ರಮ

**ಮೈಸೂರು:** ಕೆ.ಆರ್.ನಗರ ತಾಲ್ಲೂಕು ಅಬಕಾರಿ ಇಲಾಖೆ, ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ.ಆರ್.ನಗರ ಇವರುಗಳ ಸಹಯೋಗದಲ್ಲಿ ಗ್ರಾಮಾಂತರ ಜಿಲ್ಲೆಯ ಅಬಕಾರಿ ಉಪ ಆಯುಕ್ತರಾದ ಮಹದೇವಿ ಬಾಯಿ ಅವರ ಅಧ್ಯಕ್ಷತೆಯಲ್ಲಿ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕಾನೂನು ಅರಿವು ಹಾಗೂ ವಿಶ್ವ ಸಾಮಾಜಿಕ ನ್ಯಾಯ ಕಾರ್ಯಕ್ರಮವನ್ನು ಫೆಬ್ರವರಿ 20 ರಂದು ಕೆ.ಆರ್.ನಗರ ಟೌನ್ ನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಗೌರವಾನ್ವಿಯ ಕೆ.ಆರ್.ನಗರ ಜೆ.ಎಂ. ಎಫ್.ಸಿ ನ್ಯಾಯಾಲಯದ ಹಿರಿಯ ನ್ಯಾಯಾಧೀಶರಾದ ಅರವಿಂದ್ರ ಬಿ.ಸಿ, ಹುಣಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರಾದ ಮೋಹನ್‌ಕುಮಾರ್ ಎಂ.ಡಿ., ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಬಿ.ಎಸ್.ಜಯ, ಪ್ಯಾನಲ್ ವಕೀಲರಾದ ಎಂ.ಸಿ.ಶಶಿಕಾಂತ್, ಲೋಕೇಶ್ ವೈ.ಎಸ್ ಸಿಬ್ಬಂದಿಗಳು ಹಾಜರಿದ್ದರು ಎಂದು ಕೆ.ಆರ್.ನಗರ ವಲಯದ ಅಬಕಾರಿ ನಿರೀಕ್ಷಕರು ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

**ತುಮಕೂರು:** ಮೀನುಗಾರಿಕೆ ಇಲಾಖೆ ವತಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವ ಅರ್ಹ ಮೀನುಗಾರರು/ ಮೀನುಗಾರರ ಸಹಕಾರ ಸಂಘ/ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದ ಮೀನು ಶಿಕಾರಿದಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ 50 ಫಲಾನುಭವಿಗಳಿಗೆ ತಲಾ 10,000 ರೂ. ಮೌಲ್ಯದ ನೈಲಾನ್ ಬಲೆ, ತಕ್ಕಡಿ, ಪ್ಲಾಸ್ಟಿಕ್ ಕ್ರೇಟ್ಸ್, ಲೈಫ್ ಜಾಕೆಟ್ಸ್, ಫೈಬರ್ ಗ್ಲಾಸ್, ಹರಿಗೋಲು, ಇನ್ಸುಲೇಟೆಡ್ ಬಾಕ್ಸ್ ಇತ್ಯಾದಿಗಳ ಖರೀದಿ/ವಿತರಣೆ ಮಾಡಲಾಗುವುದು.

ಆಸಕ್ತರು ನಿಗದಿತ ಅರ್ಜಿ ನಮೂನೆಯನ್ನು ತಾಲ್ಲೂಕು/ ಜಿಲ್ಲಾ ಮೀನುಗಾರಿಕೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಫೆಬ್ರವರಿ 27ರೊಳಗಾಗಿ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಕಚೇರಿಗೆ ಸಲ್ಲಿಸಬಹುದು.


ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8277200300 ಅಥವಾ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಗುಬ್ಬಿ, ಕೊರಟಗೆರೆ–7349050051, ತುಮಕೂರು, ಪಾವಗಡ–9844665991, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು–9620512914, ಶಿರಾ–7406092921, ಕುಣಿಗಲ್–8971397718, ಮಧುಗಿರಿ–9740500837ನ್ನು ಸಂಪರ್ಕಿಸಬಹುದಾಗಿದೆ ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಾಲಕ ಕಾಣೆ




**ತುಮಕೂರು:** ಕ್ಯಾತ್ಸಂದ್ರ ಪೊಲೀಸ್ ಠಾಣೆ ವ್ಯಾಪ್ತಿ ಶ್ರೀ ಸಿದ್ಧಗಂಗಾ ಪ್ರೌಢಶಾಲೆ ಹಾಗೂ ವಸತಿ ಗೃಹದಲ್ಲಿ 9ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಬಸಾಪುರ ಗ್ರಾಮದ ಸುಮಾರು 14 ವರ್ಷದ ರಾಜ ಎಸ್. ಎಂಬ ಬಾಲಕನು ಕಾಣೆಯಾಗಿದ್ದು, ಈತನ ತಾಯಿ ಕವಿತಾ ಠಾಣೆಗೆ ದೂರು ನೀಡಿದ್ದಾರೆ. ಈತನು 5 ಅಡಿ ಎತ್ತರ, ಬಿಳಿ ಮೈಬಣ್ಣ, ಕೋಲು ಮುಖ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾನೆ. ಕಾಣೆಯಾದವನ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ವಾ.ಸಂ. 0816–2281124/ 2281120/ 2272451, ಮೊ.ಸಂ.9480802933–52–00ಯನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

## ಆರಣಿ ಗ್ರಾಮ ಪಂಚಾಯಿತಿಗೆ ಭೇಟಿ ಕೊಟ್ಟ ಜಿ.ಪಂ.ಸಿ.ಇ.ಓ



**ಮಂಡ್ಯ:** ನಾಗಮಂಗಲ ತಾಲ್ಲೂಕಿನ ಆರಣಿ ಗ್ರಾಮ ಪಂಚಾಯಿತಿಗೆ ಭೇಟಿ ಕೊಟ್ಟ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಾದ ನಂದಿನಿ ಕೆ.ಆರ್. ರವರು, ಗ್ರಾಮ ಪಂಚಾಯಿತಿಯನ್ನು ಸಂಪೂರ್ಣವಾಗಿ ವೀಕ್ಷಿಸಿ, ಗ್ರಾಮ ಪಂಚಾಯಿತಿಯಲ್ಲಿನ ಅಭಿಲೇಖಾಲಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಕೊಠಡಿ, ಕಂಪ್ಯೂಟರ್ ಆಪರೇಟರ್ ಕೊಠಡಿ ಹಾಗೂ ಮೀಟಿಂಗ್ ಹಾಲ್ ಗಳನ್ನು ಪರಿಶೀಲಿಸಿದರು.

ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳೊಡನೆ ಗ್ರಾಮದಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಕುಡಿಯುವ ನೀರಿನ ಪೂರೈಕೆ, ತೆರಿಗೆ ವಸೂಲಾತಿ, ಸಕಾಲ ಸೇವೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಜಲ ಜೀವನ್ ಮಿಷನ್ ಯೋಜನೆ ಮುಂತಾದ ಅಭಿವೃದ್ಧಿ ಯೋಜನೆಗಳ ಕುರಿತು ಮಾಹಿತಿ ಪಡೆದರು.

ಪ ಂ ಚಾ ಯಿ ತಿ ಯ ಲ್ಲಿ ನ ಕಾರ್ಯವೈಖರಿಗಳ ಕುರಿತು ಎಲ್ಲಾ ಸಿಬ್ಬಂದಿಗಳೊಡನೆ ಹಾಗೂ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರು ಹಾಗೂ ಟಿ.ಪಿ.ಓ ರವರೊಡನೆ ಚರ್ಚೆ ನಡೆಸಿ, ಸಿಬ್ಬಂದಿಗಳ ಕೊರತೆ ಹಾಗೂ ನೇಮಕಾತಿ ವಿಚಾರವಾಗಿ ಮಾಹಿತಿ ಪಡೆದರು. ಸಿಬ್ಬಂದಿಗಳ ಕೊರತೆ ಹಾಗೂ ಪಂಚಾಯಿತಿಯ ನೂತನ ಕಟ್ಟಡ ನಿರ್ಮಾಣದ ಕುರಿತು ಸಿ.ಇ.ಓ ರವರಿಗೆ ಪಂಚಾಯಿತಿ ಅಭಿವೃದ್ಧಿಅಧಿಕಾರಿಯವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕಿನ ಸಹಾಯಕ ನಿರ್ದೇಶಕರು ಹಾಗೂ ಟಿ.ಪಿ.ಓಸಂದೀಪ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹರೀಶ್, ಪಂಚಾಯಿತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



## ಫೆ.23ರಿಂದ ಎಲ್ಲರೊಳಗೊಂದಾಗು ಮಂಕುತಿಮ್ಮ ಬೀದಿ ನಾಟಕ ಪ್ರದರ್ಶನ

**ಮಂಡ್ಯ:** ಜನಪದ ಮತ್ತು ಬೀದಿನಾಟಕ ಕಲಾತಂಡಗಳ ಒಕ್ಕೂಟದ ವತಿಯಿಂದ ಎಲ್ಲರೊಳಗೊಂದಾಗು ವಿನಯ್ ಸ್ನೇಹ ಬಳಗದ ಸಹಯೋಗದೊಂದಿಗೆ ಫೆ.23ರಿಂದ 26ರವರೆಗೆ ಎಲ್ಲರೊಳಗೊಂದಾಗು ಮಂಕುತಿಮ್ಮ ಬೀದಿ ನಾಟಕ ಪ್ರದರ್ಶನ ಮಾಡಲಾಗುವುದು ಎಂದು ಒಕ್ಕೂಟದ ಅಧ್ಯಕ್ಷ ಎಸ್.ಬಸವರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್‌ನ ಅಧ್ಯಕ್ಷ ಎಂ.ವಿನಯ್‌ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಬೀದಿ ನಾಟಕದ ಮೂಲಕ ಸಮಾಜಮುಖಿ ಸಾಂಸ್ಕೃತಿಕ ಜಾಗೃತಿ ಕಾರ್‍ಯಕ್ರಮ ನಡೆಸಲಾಗುತ್ತಿದೆ ಎಂದರು.

ವಿಶ್ವಮಾನವ ಸಂದೇಶ ಸಾರುವ ಎಲ್ಲರೊಳಗೊಂದಾಗು ಮಂಕುತಿಮ್ಮ ನಾಟಕವನ್ನು ನಗರದ ಮಂಡ್ಯ ವಿಶ್ವವಿದ್ಯಾಲಯ, ಸರಕಾರಿ ಮಹಿಳಾ ಕಾಲೇಜು, ಡವರಿ ಸಮಾಜ ಕಾಲೋನಿ ಸೇರಿದಂತೆ ತಾಲೂಕಿನ 12 ಪ್ರಮುಖ ಸ್ಥಳಗಳಲ್ಲಿ ಪ್ರದರ್ಶನ ಮಾಡಲಾಗುವುದು. ಈ ಮೂಲಕ ನಾವೆಲ್ಲರೂ ಒಂದೇ, ನಾವೆಲ್ಲರೂ ಭಾರತೀಯರು, ನಾವೆಲ್ಲರೂ ವಿಶ್ವಮಾನವರು ನಾವು ಎಲ್ಲರೊಳಗೊಂದಾಗಬೇಕು ಎಂಬ ಸಂದೇಶ ಸಾರಲಾಗುವುದು ಎಂದು ಹೇಳಿದರು.

ಕಾರ್‍ಯಕ್ರಮವನ್ನು ರೈತ ಸಂಘದ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸುನಂದ ಜಯರಾಂ ಉದ್ಘಾಟಿಸುವರು. ನಾಟಕ ಪ್ರದರ್ಶನದ ಸಮಯದಲ್ಲಿ ಆಯಾ ಸ್ಥಳಗಳ ಸ್ಥಳೀಯ ಮುಖಂಡರಲು, ಸಂಘ ಸಂಸ್ಥೆಗಳ ಮುಖಂಡರು, ಹಾಗೂ ವಿದ್ಯಾರ್ಥಿಗಳು ಭಾಗವಹಿಸುವರು ಎಂದು ಮಾಹಿತಿ ನೀಡಿದರು. ಗೋಷ್ಠಿಯ್ಲಿ ಕಾರ್‍ಯದರ್ಶಿ ಟಿ.ನಾಗರಾಜು, ಖಜಾಂಚಿ ಎನ್.ಶೇಖರ್, ನಿರ್ದೇಶಕ ಹೊನ್ನೇಶ್, ಸದಸ್ಯ ದೇವರಾಜ್ ಕೊಪ್ಪ ಇದ್ದರು.

## ಫೆ.25ರಂದು ಮಂಡ್ಯ ನಗರದಲ್ಲಿ 'ಕನ್ನಡ ಮೊದಲು ಆಟೋ ರ್‍ಯಾಲಿ'

**ಮಂಡ್ಯ:** ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಯ ಉಳಿವಿಗಾಗಿ ಮತ್ತು ಕನ್ನಡ ಪರಂಪರೆಯ ಪೋಷಣೆಗಾಗಿ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್‌ನ ಸಹಯೋಗದೊಂದಿಗೆ ಕನ್ನಡಪರ ಸಂಘಟನೆಗಳ ವತಿಯಿಂದ ಫೆ.25ರಂದು ಮಂಡ್ಯ ನಗರದಲ್ಲಿ 'ಕನ್ನಡ ಮೊದಲು ಆಟೋ ರ್‍ಯಾಲಿ' ಆಯೋಜಿಸಲಾಗಿದೆ ಎಂದು ಕರುನಾಡ ಸೇವಕರು ಸಂಘಟನೆಯ ರಾಜ್ಯ ವಕ್ತಾರ ಎಂ.ಬಿ.ನಾಗಣ್ಣಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ರ್‍ಯಾಲಿಯಲ್ಲಿ 50 ಆಟೋ ಹಾಗೂ ಒಂದು ತೆರೆದ ಜೀಪ್ ಮೂಲಕ ನಗರದಾದ್ಯಂತ ಸಂಚರಿಸಿ ಸಾರ್ವಜನಿಕರಲ್ಲಿ ಕನ್ನಡ ಉಳಿವಿಗಾಗಿ ಅರಿವು ಮೂಡಲಾಗಿಸಲಾಗುವುದು ಎಂದರು.

ರಾಜ್ಯದ ಆಡಳಿತದಲ್ಲಿ ಕನ್ನಡ ತರುವುದಾಗಿ ಹೇಳಿ 50 ವರ್ಷ ಕಳೆದಿದೆ. ಆಡಳಿತದಲ್ಲಿ, ಜನ ಬಳಕೆಯಲ್ಲಿ, ನಾಮ ಫಲಕಗಳಲ್ಲಿ, ರಸ್ತೆಯ ಹೆಸರುಗಳಲ್ಲಿ ಕನ್ನಡ ಬಳಕೆಯಗುತ್ತಿಲ್ಲ. ಇದರ ವಿರುದ್ಧ ಮೊದಲ ಹಂತದಲ್ಲಿ ಸಾರ್ವಜನಿಕವಾಗಿ ಕನ್ನಡಿಕರೆಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅಂದು ಕಾಳಿಕಾಂಬ ದೇವಾಲಯದಿಂದ ರ್‍ಯಾಲಿ ಆರಂಭಿಸಿ, ಪೇಟೆ ಬೀದಿ, ಜೆ.ಸಿ ವೃತ್ತ, ಆರ್.ಪಿ.ರಸ್ತೆ, 100 ಅಡಿ ರಸ್ತೆ, ವಿವಿ ರಸ್ತೆಗಳಲ್ಲಿ ರ್‍ಯಾಲಿ ಮಾಡಿ ಕರಪತ್ರ, ಗುಲಾಭಿ ನೀಡಲಾಗುವುದು. ಕನ್ನಡಕ್ಕೆ ಪ್ರಾಧಾನ್ಯತೆ ನೀಡುವಂತೆ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

ಕಾರ್‍ಯಕ್ರಮಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ, ಶಾಸಕ ಪಿ.ರವಿಕುಮಾರ್ ಗೌಡ, ಕನ್ನಡ ಪರ ಚಳುವಳಿಯಲ್ಲಿ ಸಕ್ರಿಯರಾದ ಶ್ಯಾಂಪ್ರಸಾದ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಗೋಷ್ಠಿಯಲ್ಲಿಕರವೇಜಿಲ್ಲಾಧ್ಯಕ್ಷಎಚ್.ಡಿ.ಜಯರಾಮ್, ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ರಾಜೇಂದ್ರ ಬಾಬು, ಚಿತ್ರಕೂಟ ಸಾಂಸ್ಕೃತಿಕ ಸಂಸ್ಥೆಯ ಎಚ್.ಎಸ್.ಧನುಷ್‌ಗೌಡ, ಆಟೋ ಚಾಲಕ ಸಂಘದ ವೆಂಕಟೇಶ್, ಸೋಮಶೇಖರ್ ಇದ್ದರು.



## ಗಾರ್ಡನ್ ಸಿಟಿ ವಿವಿಗೆ ಶತಾವರಿ ಯೋಜನೆ ಮಂಜೂರು



**ಬೆಂಗಳೂರು:** ಬೆಂಗಳೂರಿನ ಗಾರ್ಡನ್ ಸಿಟಿ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಔಷಧೀಯ ಸಸ್ಯ ಮಂಡಳಿ, ಆಯುಷ್ ಸಚಿವಾಲಯ ಭಾರತ ಸರ್ಕಾರ, ನವದೆಹಲಿ ಇವರಿಂದ ?Species Specific Campaign on Shatavari ? For Better Health? ಅಭಿಯಾನದಡಿ ಪ್ರತಿಷ್ಠಿತ ಶತಾವರಿ ಯೋಜನೆ ಮಂಜೂರಾಗಿದೆ.

ಈ ಯೋಜನೆಗೆ ಬೆಂಗಳೂರಿನ Karnataka State Medicinal Plants Authority (KaMPA) ಬೆಂಬಲ ನೀಡುತ್ತಿದೆ. ಈ ಮಹತ್ವದ ಮಾನ್ಯತೆಯ ಭಾಗವಾಗಿ, ಶತಾವರಿ ಯೋಜನೆ ಉದ್ಘಾಟನಾ ಸಭೆ ಫೆಬ್ರವರಿ 20, 2026 ರಂದು ಜಿಸಿಯು ಆವರಣದಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ಏಚಿಓಕಂನ ಹಿರಿಯ ಸಲಹೆಗಾರರಾದ ಡಾ. ಎಂ. ಜೆ. ಪ್ರಭು ಗೌರವ ಅತಿಥಿಯಾಗಿ ಆಗಮಿಸಿದರು. ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳಾದ ಡಾ. ಎಂ. ರಾಮಚಂದ್ರ ಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಭೆಯನ್ನುಉದ್ದೇಶಿಸಿಮಾತನಾಡಿದ ಮಾನ್ಯ ಉಪಕುಲಪತಿಗಳಾದ ಡಾ. ರಾಮಚಂದ್ರ ಗೌಡ ಅವರು ಶತಾವರಿ ಅಭಿಯಾನದ ಉದ್ದೇಶಗಳು ಮತ್ತು ಗುರಿಗಳನ್ನು ವಿವರಿಸಿ, ವಿಶೇಷವಾಗಿ ಗ್ರಾಮೀಣ ಸಮುದಾಯಗಳಲ್ಲಿ ಔಷಧೀಯ ಸಸ್ಯಗಳ ಮಹತ್ವವನ್ನು ಒತ್ತಿಹೇಳಿದರು.

ಉದ್ಘಾಟನಾ ಸಮಾರಂಭದ ನಂತರ ಡಾ. ಎಂ. ಜೆ. ಪ್ರಭು ಅವರ ಸಂಚಾಲನೆಯಲ್ಲಿ ವಿಚಾರಗೋಷ್ಠಿ ನಡೆಯಿತು.

ಪ್ಯಾನೆಲ್‌ನಲ್ಲಿ ಡಾ. ಈರಣ್ಣ ಈಶ್ವರಪ್ಪ ಹುಗಾರ್ , ಶ್ರೀಮತಿ ಸೀಮಾ ಸುಭಾಷ್ ಮಾಳಿ, ಶ್ರೀಮತಿ ಆರತಿ ಬಿ.ವಿ., ಬೆಂಗಳೂರಿನ SDM Institute of Ayurveda and Hospitalನ ಡಾ. ಅಭಿಷೇಕ್ ಭರದ್ವಾಜ್ ಬಿ.ಯು. ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಇತರ ಹಿತಾಸಕ್ತರು ಭಾಗವಹಿಸಿದರು.

ಚರ್ಚೆಯಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ರೈತರು ಮತ್ತು ಸಮುದಾಯ ಕಾರ್ಯಕರ್ತರಿಗೆ ?ಔಷಧಿಗಳ ರಾಣಿ? ಎಂದು ಪ್ರಸಿದ್ಧಿ ಪಡೆದ ಶತಾವರಿಯ ಬೆಳೆ ವಿಧಾನಗಳು, ಅದರ ಮಹತ್ವ ಹಾಗೂ ಆರೋಗ್ಯ ಪ್ರಯೋಜನಗಳ ಕುರಿತು ಸಮಗ್ರ ಮಾಹಿತಿ ನೀಡಲಾಯಿತು.

ಡಾ. ಹುಗಾರ ಅವರು ಶತಾವರಿ ಕೃಷಿಯ ವಿಧಾನಗಳು ಹಾಗೂ ವೆಚ್ಚ–ಲಾಭ ಅನುಪಾತದ ಕುರಿತು ವಿವರಿಸಿದರು. ಡಾ. ಅಭಿಷೇಕ್ ಭರದ್ವಾಜ್ ಅವರು ಶತಾವರಿ ಸೇವನೆಯಲ್ಲಿ ಸರಿಯಾದ ಪ್ರಮಾಣದ ಅಗತ್ಯತೆಯನ್ನು ತಿಳಿಸಿದರು. ಶ್ರೀಮತಿ ಸೀಮಾ ಅವರು ಔಷಧೀಯ ಪ್ರಯೋಜನಗಳಿಗೆ ಮುಖ್ಯವಾಗಿ ಬೇರುಗಳನ್ನು ಬಳಸಲಾಗುತ್ತದೆ ಎಂದು ತಿಳಿಸಿದರು. ಶ್ರೀಮತಿ ಆರತಿ ಅವರು ಮಾರುಕಟ್ಟೆಯಲ್ಲಿ ಲಭ್ಯವಿರುವ ಶತಾವರಿಯ ವಿವಿಧ ತಳಿಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಸಮಾಪನದಲ್ಲಿ ಡಾ. ಪ್ರಭು ಅವರು ಶತಾವರಿಯನ್ನು ಅಂತರ ಬೆಳೆ (Intercrop) ರೂಪದಲ್ಲಿ, ವಿಶೇಷವಾಗಿ ಬರಭೂಮಿಗಳಲ್ಲಿ ಬೆಳೆಯಲು ರೈತರಿಗೆ ಲಭ್ಯವಿರುವ ಸರ್ಕಾರದ ಅನುದಾನಗಳ ಕುರಿತು ವಿವರಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ವಿಭಾಗದ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (CDPO) ಶ್ರೀಮತಿ ಆರತಿ ಬಿ.ವಿ., ಟಿಪ್ಟೂರಿನ BAIF Livelihoods ಸಂಸ್ಥೆಯ ಉಪ ಕಾರ್ಯಕ್ರಮ ಕಾರ್ಯನಿರ್ವಾಹಕರಾದ ಡಾ. ಈರಣ್ಣ ಈಶ್ವರಪ್ಪ ಹುಗಾರ್ ಹಾಗೂ ದೊಡ್ಡಬಳ್ಳಾಪುರದ Oikos Consultants ಸಂಸ್ಥೆಯ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ಸೀಮಾ ಸುಭಾಷ್ ಮಾಳಿ , ಜೀವ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಮಧು ಮಲ್ಲೇಶಪ್ಪ ಉಪಸ್ಥಿತರಿದ್ದರು

# ಬದುಕೆಂಬ ಜೋಳಿಗೆಗೆ ತುಂಬಿಸಿ ನೆಮ್ಮದಿಯ ಗಳಿಗೆ

ಮನದ ಮಾತು...



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಎಷ್ಟು ಸಂತಸ!! ಹೀಗೆ ಬ್ಯಾಗ್ ನೇತಾಡಿಸಿ ಶಾಪಿಂಗ್ ಹೋಗುವದು, ಕಂಡದ್ದು ಕೊಳ್ಳುವ, ಆ ಸೀರೆ ಚಂದ, ಈ ಟಾಪ್ ಚಂದ, ಹ್ಮಾಂ ಆ ಸ್ಯಾಂಡಲ್ ಎಷ್ಟು ಚಂದ, ಆ ಬ್ಯಾಗಗಳು , ಆ ಬ್ರ್ಯಾಂಡ್ಗಳು, ಲೇವಿಸ್,ಬ್ಯಾಗಿಟ್ಟಿ, ಬ್ಲೂಚಿ,ಗುಚ್ಚಿ,ಬೀಬಾ,ರಂಗಮಂಚ.....

ಅಬ್ಬಾ ತರಾವರಿ ಶೋಕಿ ಸಾಮಾನು, ಇವನೆಲ್ಲ ಬಳಸಿ ಕ್ಲಾಸ್ ಲೆವಲ್ ತೋರಿಸುತ್ತ ಮಾಲ್ ಗಳಲ್ಲಿ ಬದುಕುವ ಬದುಕು.

ಮುಂದಿನ ಬಾರಿಯಾದರೂ ಕೊಳ್ಳಲೇಬೇಕು. ಇದೊಂದು ಬಣ್ಣದ ಬದಕು, ಬೇಕು ಎಂಬುದನು ಬಾಚಿಕೊಂಡು ಹೇಗಲೇರಿಸಿ ಮೋಹದಗತ್ತು ಮುಗಿಲಿಗೇರಿದ ಕರಾಮತ್ತು.

ಇನ್ನು ಒಳಗಿನ ಭಾವಜಗತ್ತು. ಮೆದುಮನಸಿಗೆ ಮಾತಿನ ಪಾಷಾಣ ಎಸೆದೆಸೆದು ನೋಡುವರು.ಎಷ್ಟೇ ಮಾಡಿದರೂ ತಪ್ಪು ಹುಡುಕುವ ಜನ. ಕೊಟ್ಟ ಸೀರೆಗೆ ಹೆಸರಿಟ್ಟವಳು ನಾದಿನಿ, ಮೊಸರಲ್ಲಿ ಕಲ್ಲು ಹುಡುಕಿ ಕೊಂಕನಾಡುವ ಅತ್ತೆ, ಆಗಾಗ ಚುಚ್ಚಿ ಮಾತನಾಡುವ ಓರಿಗಿತ್ತಿ.ಹಿಂದೆ ಮಾಡಿದ್ದು ಮರೆತು ಈಗ ಹಗೆತನ ತೋರಿಸುವ ಬಂಧುಗಳು. ಎಷ್ಟು ತೀಕ್ಷ್ಣ ಮಾತನಾಡುತ್ತಾಳೆ ಅತ್ತಿಗೆ, ಅವಳಿಗೂ ತವರು ಮನೆಯಲ್ಲಿ ಹೀಗೆ ಮಾತನಾಡಿದರೆ ನೋವಾಗುವದಿಲ್ಲವೇ,ತವರಿನಲಿ ನಾಲ್ಕುದಿನ ನೆಮ್ಮದಿಯಾಗಿ ಇರಲು ಆಗುದಿಲ್ಲ.ಒಂದುದಿನ ಸುಸ್ತಾಗಿ ಮಲಗಿದರೂ ಏನಾಯಿತು ಎಂದು ಕೇಳದ ಮನೆಯವರು, ನನಗೂ ಒಂದು ಸಮಯ ಬರಲಿ ನೋಡುವಾ ಆಗ ಅಂದರಾಯಿತು, ಅವಳು ಅಂದಿದಕ್ಕೆ ನಾನೂ ಆಡಿದ್ದು... ಅವಳಿಗೂ ಹಾಗೇ ಮಾಡಿ ತೋರಿಸಿದರೆ.... ನಾನೂ ಬೇಕಂತಲೇ ಸುಮ್ಮನಿದ್ದೆ,ಅವಳೂ ಹಾಗೇ ಮಾಡಿದ್ದಳು. ನಾನು ಎಷ್ಟು ಮಾಡಿದ್ದೆ ಅವರಿಗೆ ಈಗೆಲ್ಲ ಮರೆತು ಹೋಯಿತು. ಯಾರೆಲ್ಲರ ಭಾವ ಜಗತ್ತಿಗೆ ಇಂತಹ ಪ್ರಶ್ನೆಗಳು ಕಟುಕಿ ಮನವನು ಗೀಚಿಕೊಂಡೆ ಹಸಿಗಾಯ ಉಸಿರಾಡುತಲೇ ಇರುತವೆ.

ಈ ಭಾವ ಜಗತ್ತಿನ ಹೊರಗೆ ಒಂದಿಷ್ಟು ಕಟು ವಾಸ್ತವಗಳಿವೆ.

ಆಸ್ಪತ್ರೆಯ ವಾರ್ಡಿನಲ್ಲಿ ತಾಯಿ ಮಲಗಿದ್ದಾಗ .. ಅವಳೊಟ್ಟಿಗೆ ನಾನೇ ಇದ್ದಿದ್ದು.

ರಾತ್ರಿ ನಿದ್ದೆ ಬಾರದೆ ಕಿಟಕಿಯ ಪರದೆ ಸರಿಸಿ ನೋಡಿದಾಗ ನೇರವಾಗಿ ಕಾಣುವ "ಕ್ಯಾಜುಲ್ಟಿ" ವಾರ್ಡ

ಅಂದರೆ ತುರ್ತು ಚಿಕಿತ್ಸೆ, ಇಲ್ಲಿಂದ ಸ್ಪಷ್ಟವಾಗಿ ಎಲ್ಲ ಕಾಣುವುದು. ಅಂಬ್ಯುಲೆನ್ಸ್ ಸೌಂಡ್ ಮಾಡುತ್ತಾ ಬಂತು.... ಗಡ.... ಗಡ...... ಶಬ್ದ ಮಾಡುತ್ತಾ ಸ್ಟ್ರೇಚರ ಎಳೆದು ತಂದ ನರ್ಸ್ಗಳು. ಅಮ್ಮಾ... ಅಮ್ಮಾ... ಎಂದು ನರಳಾಟದ ಧ್ವನಿ. ಕೈ ತುಂಡರಿಸಿ ರಕ್ತ ಒಸರುತಿದೆ, ಹಣೆ ಬಾಯಿಂದ ರಕ್ತ, ಮಾಂಸದ ಮುದ್ದೆ ಕೈಯಿಂದ ಕಾಣುತಿತ್ತು... ಹೀಗೇ ದಡದಡ ಸ್ಟ್ರೇಚರ ಒಳಗೆ ಹೋಯಿತು. ಮತ್ತೊಂದು ಆ?ಯಂಬುಲೆನ್ಸ್!ಅದರಲ್ಲಿ ಮಧ್ಯ ವಯಸ್ಸಿನ ಮಹಿಳೆ...

ಪರವೀನ.... ಪರವೀನ... ಎಂದು ಮನೆಯವರ ಕೂಗು. ಮತ್ತೆ ಬಂದ ಸ್ಟ್ರೇಚರ,ಹೊತ್ತುಕೊಂಡು ಒಳಹೋದಷ್ಟು ವೇಗವಾಗಿ ಮುಖಕ್ಕೆ ಬಟ್ಟೆ ಹೊದಿಸಿ ಹೊರತಂದರು. ಮುಗಿಲು ಮುಟ್ಟಿದ ಪರಿವಾರದ ಆಕ್ರಂದನ. ಮತ್ತೊಂದು ರಾತ್ರಿ ಹೀಗೆ ಬಂದ ಅಂಬ್ಯುಲೆನ್ಸ್... ಅಬ್ಬಾ!! ನುಜ್ಜುಗುಜ್ಜಾದ ಮುಖ ತಾಯಿಯ ಮುಖ, ಸಾಧ್ಯವಿಲ್ಲ ನೋಡಲು, ಪಾದದಬಳಿ ಮಗು ಅಳುತ್ತಿದೆ,ಸುಮಾರು 2 ವರ್ಷದಿರಬಹುದು ಸಣ್ಣಪುಟ್ಟ ಗಾಯಗಳು, ಪ್ರಜ್ಞೆ ತಪ್ಪಿ ಬಿದ್ದ ಅವಳ ಗಂಡ. ಅವನ ತೊಡೆ ಹರಿದು ಮಾಂಸದ ಮುದ್ದೆ ಹೊರ ಕಾಣುತಿತ್ತು. ಛೇ!!! ಇನ್ನೂ ನೋಡಲೇ ಬಾರದು.

ನಿಧಾನವಾಗಿ ರೂಮಬಾಗಿಲು ಎಳೆದು ಹೊರಬಂದು, ಹಾಗೇ ನಡೆಯುತ್ತಾ ಹೊರಟೆ, ಪಕ್ಕದ ವಾರ್ಡಿನಲ್ಲಿ ಮಲಗಿರುವ ಪೇಶಂಟಗಳ ಆರ್ತನಾದ, ಆತನಿಗೆ ಗ್ಯಾಂಗರೀನ, ಕಾಲು ಕತ್ತರಿಸಲು ಹೇಳಿದ್ದಾರೆ,



ಬಾತುಕೊಂಡ ಕಾಲಿನಿಂದ ಸೋರುವ ವ್ರಣ,ಹೊಟ್ಟೆ ಉಬ್ಬಳಿಸಿತು. ಮುಂದೆ ನೋಡಿದೆ, ಮತ್ತೊಬ್ಬನಿಗೆ ಪಾರ್ಶ್ವವಾಯು, ಮಾತನಾಡಲು ಕಷ್ಟ, ಚಿಕ್ಕ ವಯಸ್ಸಿನ ಹೆಂಡತಿ ಅಳುತಿದ್ದಳು. ಮುಂದೆ ಹೋದೆ, ಅವಳ ಗರ್ಭಕೋಶಕ್ಕೆ ಗಂಟು, ಒಬ್ಬಳು ಹೆರಿಗೆಯ ನಂತರ ಕೂಸು ಕಳೆದುಕೊಂಡಳು. ಇನ್ನು ಆರು ವರುಷದ ಹಾಲುಗೆನ್ನೆಯ ಮಗುವಿಗೆ ಕ್ಯಾನ್ಸರ್ ಅಂತೆ.... " ಅವ್ವಾ ನನ್ನ ಸೂಜಿ ತೆಗೆಸು...

ನಾವು ಮನಿಗೆ ಹೋಗೋಣ, ನಾನೂ ಎಲ್ಲಾರಗೂಡ ಆಡುವಂಗ ಯಾವಾಗ ಆಕ್ಕೆನಿ"

ಮುಖ ಹುದುಗಿಸಿ ಅಳುವ ತಾಯಿ. " ಅವ್ವಾ ತಡಕೋಳಾಕ ಆಗುದಿಲ್ಲಬೇ..... ನೋವು... "

ಎಂಥಾ ಬದಕು. ನಿಜವಾಗಿಯೂ ಕಣ್ಣೀರು ತಡೆಯಲು ಆಗಲಿಲ್ಲ.

ಮತ್ತೆ ಆ?ಯಂಬುಲೆನ್ಸ್ ಸದ್ದು, ದಡದಡ ಬಂದ ಸ್ಟ್ರೇಚರ, ಅದರ ಮೇಲೆ ವಯಸ್ಸಿನ ಯುವಕ. ಕೆಲ ನಿಮಿಷಗಳಲ್ಲಿ ಜೋರಾಗಿ ಅಳುವ ಸದ್ದು. ಕಾರ್ಡಿಯಾಕ್ ಅರೆಸ್ಟ್. ಎಂತಹ ಚೆಲುವೆ ಅವನ ಹೆಂಡತಿ. ನಕ್ಷತ್ರಗಳು ತಂದು ತೂಗಿ ಹಾಕಿದಂತಹ ಅವಳ ಕಣ್ಣು. ಅವನ ಮೇಲೆ ಬಿದ್ದು ಬಿದ್ದು ಅಳುತಿದ್ದಳು. ಕೆಲ ನಿಮಿಷಗಳಲ್ಲಿ ಪ್ರಜ್ಞೆ ತಪ್ಪಿದಳು,ಕಂಗೆಟ್ಟ ತಂದೆ ತಾಯಿ. ತೆಳ್ಳನೆಯ ಲಲನೆಯರು,ಯುನಿಫಾರ್ಮ್ ಧರಿಸಿದ ನರ್ಸಗಳು, ವಾರ್ಡಬಾಯಗಳು. ಆ ನರ್ಸಗಳಿಗೆ ಯಾವ ಅಲಂಕಾರವಿಲ್ಲ, ತುಟಿಗಳಿಗೆ ಬಣ್ಣ ಬಳದಿಲ್ಲ,ಸುಮ್ಮನೆ ಒಂದು ನಸುನಗು. ಕೈಯಲ್ಲಿ ಗಡಿಯಾರ,.. ಎಲ್ಲ ಕೋಣೆಗಳಿಗೂ ಓಡಾಡುತ್ತಾ, ಡ್ರಿಪ್ಸ ಏರಿಸುವುದು, ಇಂಜೆಕ್ಷನ್ ಕೊಡುವುದು, ಶುಗರ ಪರೀಕ್ಷಿಸುವದು, ರೋಗಿಯ ಏರುಪೇರು ಡಾಕ್ಟರ್ ಗೆ ಫೋನಮಾಡಿ ಹೇಳುವದು, ಸಮಾಧಾನ ಮಾಡುವದು. ಬೆಳಿಗ್ಗೆ ಏಗಿಲ್ಲದೆ ಪೇಶಂಟಗಳ ಮಲಮೂತ್ರಾದಿ ಕ್ಲೀನ್ ಮಾಡುವದು. ಅವರಿಗೆ ಸ್ಪಂಜ ಬಾತ್ ಮಾಡಿಸುವುದು.

ಸೋರುವ ರಕ್ತ, ಕೀವುಒರಿಸಿ ಡ್ರೆಸ್ಸಿಂಗ್ ಮಾಡುವದು. ಆ ನೋವು, ನರಳಾಟ,ಬರೀ ಅಮ್ಮಾ, ಅಮ್ಮಾ... ಅವ್ವಾ.. ಎನ್ನುವ ಧ್ವನಿಗಳು.

ಎಲ್ಲಿ ಹೋದವು ಆ ಬ್ರ್ಯಾಂಡ್ ಗಳು, ಲ್ಯಾಕಮೇ,ಬ್ಯಾಗಿಟ್ಟಿ, ಗುಚ್ಚಿ, ಬೀಬಾ, ಸಿನಿ ತಾರೆಯರ ಡೌಲು,ಹೋಗಲಿ ಸೌಂದರ್ಯದ ಅಹವಾಲು.. ಅದಬೇಡ ಕೊನೆಗೆ ಅವಳು ಹಾಗಂದಳು, ಇವನು ಹೀಗೆಂದನು,ನಮ್ಮ ದ್ವೇಷ, ಮಾನ ಇಲ್ಲ ಸ್ವಾಭಿಮಾನ ಅಲ್ಲಲ್ಲ ದುರಾಭಿಮಾನ, ಸಿಟ್ಟು, ಸೆಡವು , ಹತಾಶೆ, ಬಿಂಕ, ಬಿನ್ನಾಣ......

ಎಲ್ಲ ಆಸ್ಪತ್ರೆಯ ಬೆಡ್ ಮೇಲೆ ನರಳುತಿದ್ದವು. ಎಲ್ಲವೂ ಸುಳ್ಳು, ಯಾರು, ಯಾರಿಗೆ ಏನು ಅನ್ನುವದು, ನಾವು ಅವರಿಗೆ ಪಾಠಕಲಿಸುವದು. ಎಲ್ಲ ಶುದ್ಧ ಸುಳ್ಳು. ಬದಕು ಇಷ್ಟೇ.... ಆಸ್ಪತ್ರೆಯ ವಾರ್ಡುಗಳು ಕೆಲವೊಮ್ಮೆ ಸಾವಿರ ಪಾಠ ಕಲಿಸುತ್ತವೆ ಏನು ಇಲ್ಲದ ಏಕತಾನತೆಯ ವಿಷಾದಗಳು.

ಬದುಕಿನ ನಿಜವಾದ ಸಂಪತ್ತು ನಾವು ಕಳೆದ ಸುಂದರ ಕ್ಷಣಗಳು. ನಾವೂ ಎಷ್ಟೇ ಶ್ರೀಮಂತರಾದರೂ ಒಂದು ಹೊಟ್ಟೆ ಹಿಡಿಯುವಷ್ಟೇ ಉಣಬಹುದು. ನಮ್ಮ ಬಳಿ ನೂರಾರು ಬಟ್ಟೆ ಇವೆ ಹಾಗಂತ ಅವುಗಳನ ಒಂದರಮೇಲೊಂದರಂತೆ ಧರಿಸಬಹುದೇ? ಇಲ್ಲ, ಒಂದು ಬಾರಿ ಒಂದು ಜೊತೆ ಬಟ್ಟೆಮಾತ್ರ ಧರಿಸಬಹುದು. ಅಗತ್ಯಕ್ಕಿಂತ ಹೆಚ್ಚಿನ ಖರೀದ ನಿಜ ಅರ್ಥದಲಿ ಗುಜರಿ

ಸಂಗ್ರಹಿಸಬಹುದಾದ ಸಂಪತ್ತು ಒಳ್ಳೆಯ ನೆನಪುಗಳು.
ನೆಮ್ಮದಿ ಎಂಬುದು ಜೀವನದ ಅಮೂಲ್ಯ ಆಸ್ತಿ.
ಮಾನಸಿಕ ನೆಮ್ಮದಿಯ ಸೂತ್ರಗಳು.
ಮಾನಸಿಕ ನೆಮ್ಮದಿಗೆ ಏನು ಮಾಡಬೇಕು?

***ಹೋಲಿಕೆ ಬಿಡಿ**
ಅವಳಿಗೆ ಇದೆ, ನನಗೆ ಇಲ್ಲ ?
ಈ ಒಂದು ಚಿಂತನೆ ಸಾವಿರ ನೋವುಗಳ ತಾಯಿ.

***ಕ್ಷಮಿಸಲು ಕಲಿಯಿರಿ**
ಮಾತಿನ ಕಲ್ಲು ಎಸೆಯುವವರನ್ನು ಮನದಲ್ಲಿ ಹೊತ್ತುಕೊಂಡರೆ ಗಾಯ ನಮಗೇ ಆಳವಾಗುತ್ತದೆ.

***ಆರೋಗ್ಯಕ್ಕೆ ಆದ್ಯತೆ**
ಸಮಯಕ್ಕೆ ಊಟ, ನಿದ್ರೆ, ನಡೆಯುವ ಅಭ್ಯಾಸ.
ದೇಹ ಸುಸ್ಥಿತಿಯಲ್ಲಿದ್ದರೆ ಮನವೂ ತಗ್ಗುತ್ತದೆ.

*** ಕೃತಜ್ಞತೆ ಅಭ್ಯಾಸ**
ಪ್ರತಿದಿನ ರಾತ್ರಿ ಮೂರು ವಿಷಯಗಳಿಗೆ ?ಧನ್ಯವಾದ? ಹೇಳಿ.
ನಮ್ಮ ಬಳಿ ಎಷ್ಟಿದೆ ಎನ್ನುವುದು ನಿಧಾನವಾಗಿ ಗೊತ್ತಾಗುತ್ತದೆ.

*** ಆತ್ಮಸಂವಾದ**
?ನಾನು ಚೆನ್ನಾಗಿದ್ದೇನೆ??
ಎಂಬ ಮಾತುಗಳನ್ನು ಮನಸ್ಸಿಗೆ ಹೇಳಿಕೊಳ್ಳಿ.


*** ಮಾಡಿದ್ದನ್ನು ಮರೆತುಬಿಡಿ.**
ಯಾರಿಗೋ ಏನೋ ಮಾಡಿದ ಸಹಾಯ ನೆನಪಿನಲ್ಲಿ ಇಟ್ಟುಕೊಂಡು ಆಗಾಗ ಮೆಲಕುಹಾಕಿ... ಅದರ ಅರಿವು ಅವರಿಗಿಲ್ಲ ಎಂಬ ಎದೆಯ ಭಾರ ಬೇಡ. ದೇವರು ಆ ಕೆಲಸ ನಮ್ಮಿಂದ ಮಾಡಿಸಿದ ಎಂಬ ಲಘು ಭಾವನೆ ಇದ್ದರೆ ಸಾಕು. ಮಾಡಿದನ್ನು ಮರೆತುಬಿಡಿ.

*ಸಮಯಬಂದಾಗ ಸರಿಯಾಗಿ ಪಾಠ ಕಲಿಸುವೆ ಎಂಬ ಅಹಂ ಬೇಡ!!

ಯಾರನ್ನೂ ತಿದ್ದಲು ನಾವು ಭೂಮಿಗೆ ಬಂದಿಲ್ಲ. ಯಾರನ್ನು ಖುಷಿಪಡಿಸುವದು ಜೀವನ ಉದ್ದೇಶವಲ್ಲ.

*** ಸೇವೆ ಮತ್ತು ಸಹಾನುಭೂತಿ**
ಆಸ್ಪತ್ರೆಯ ವಾರ್ಡ್‌ಗಳು ಕಲಿಸುವ ಪಾಠ ?
ಇನ್ನೊಬ್ಬರ ನೋವು ನೋಡಿದಾಗ ನಮ್ಮ ಅಹಂಕಾರ ಕರಗುತ್ತದೆ.

ಕೊನೆ ಮಾತು
ಬದುಕು ಒಂದು ಕ್ಷಣದ ಉಸಿರು.
ನಮ್ಮ ದ್ವೇಷ, ಸಿಟ್ಟು, ಬ್ರ್ಯಾಂಡ್ ಅಹಂಕಾರ ?
ಎಲ್ಲವೂ ಆಸ್ಪತ್ರೆಯ ಬಾಗಿಲ ಹೊರಗೆ ನಿಂತು ಹೋಗುತ್ತವೆ.
ಹಾಸಿಗೆಯ ಮೇಲೆ ಮಲಗಿರುವಾಗ
ಒಂದು ನೆಮ್ಮದಿಯ ಉಸಿರು,
ಒಂದು ಕಾಳಜಿಯ ಸ್ಪರ್ಶ,
ಒಂದು ನಸುನಗು ?:
ಬಾರದು ಬಪ್ಪದು; ಬಪ್ಪದು ತಪ್ಪದು.
ಅಂಜಿದಡೆ ಮಾಣದು, ಅಳುಕಿದಡೆ ಮಾಣದು,
ವಜ್ರಪಂಜರದೊಳಗಿದ್ದಡೆ ಮಾಣದು, ತಪ್ಪದವೋ ಲಲಾಟಲಿಖಿತ.
ಕಕ್ಕುಲತೆಗೆ ಬಂದಡೆ ಆಗದು ನೋಡಾ.
ಧೃತಿಗೆಟ್ಟು, ಮನ ಧಾತುಗೆಟ್ಟಡೆ ಅಪ್ಪುದು(ಆಗುವುದು) ತಪ್ಪದು.
ಬಾರದು ಬಪ್ಪದು; ಬಪ್ಪದು ತಪ್ಪದು; ಕೂಡಲಸಂಗಮದೇವಾ.
ಬರಬೇಕಾದದ್ದು ಬರದೇ ಇರುವುದಿಲ್ಲ.
ತಪ್ಪಬೇಕಾದದ್ದು ತಪ್ಪದೇ ಇರುವುದಿಲ್ಲ.
ವಜ್ರದ ಪಂಜರದಲ್ಲಿಟ್ಟರೂ ವಿಧಿಯನ್ನು ಬಂಧಿಸಲು ಆಗುವುದಿಲ್ಲ.
ಅಂಜುವುದರಿಂದ ಜೀವ ಉಳಿಯುವುದಿಲ್ಲ.
ಅಳುಕುವುದರಿಂದ ನೋವು ಕಡಿಮೆಯಾಗುವುದಿಲ್ಲ.
ಧೈರ್ಯ ಕಳೆದುಕೊಂಡ ಮನಸ್ಸೇ ಹೆಚ್ಚು ಮುರಿಯುತ್ತದೆ.
ನಿಜವಾದ ಸಂಪತ್ತು ಹಣವಲ್ಲ,
ಮನಸ್ಸಿಗೆ ನೆಮ್ಮದಿ ಕೊಡುವ ಬದುಕು.



# ರಾಮ ರಾಜ್ಯದ ಕನಸು ನನಸಾಗುವುದೆಂದು??



ನಂದಿನಿ ವಿವೇಕ್.
ಹೊಸದುರ್ಗ.

ಮೊದಲಿನ ಕಾಲದಲ್ಲೆಲ್ಲ ಹೆಣ್ಣು ಮಕ್ಕಳಿಗೆ ತುಂಬಾ ರೀತಿಯ ನಿರ್ಬಂಧನೆಗಳು ಇರುತ್ತಿತ್ತು. ಅವರು ಒಬ್ಬರೇ ಎಲ್ಲಿಗೂ ಹೋಗುವ ಹಾಗೆ ಇರುತ್ತಿರಲಿಲ್ಲ ಯಾರದಾದರೂ ಒಬ್ಬರ ಸಹಾಯ ಬೇಕಾಗಿತ್ತು, ರಾತ್ರಿ ಸಮಯದಲ್ಲಂತೂ ಅಪ್ಪಿತಪ್ಪಿಯು ಕೂಡ ಹೋಗುವ ಆಗಿರಲಿಲ್ಲ. ಹಲವಾರು ಶಾಸ್ತ್ರ ಸಂಪ್ರದಾಯ ಅಥವಾ ಇನ್ನು ಅನೇಕ ಕಾರಣಗಳಿಂದ ಅವರನ್ನು ನಿರ್ಬಂಧಿಸಲಾಗುತ್ತಿತ್ತು,, ಅವರು ಹಾಗೆ ಇರಬೇಕು ಹೀಗೆ ಇರಬೇಕು ಎನ್ನುವ ಕಟ್ಟುಪಾಡುಗಳು ಕೂಡ ಇರುತ್ತಿದ್ದವು ಕಾರಣಗಳು ಅನೇಕ ಅವರನ್ನು ಅವರು ಕಾಪಾಡಿಕೊಳ್ಳಲು ಕಷ್ಟವಾಗಬಹುದು, ಅವರಿಗೆ ಯಾರಾದರೂ ಒಬ್ಬರ ಸಹಾಯ ಬೇಕಾಗುತ್ತದೆ ಹೆಣ್ಣು ಅಬಲೆ ಅಲ್ಲಾ ಸಬಲೇ ಹೀಗೆ ಅನೇಕ ವರ್ಷಗಳಿಂದ ಅನೇಕ ರೀತಿಯ ಅಭಿಪ್ರಾಯಗಳು ಇವೆ ಇತ್ತೀಚಿನ ದಿನಗಳಲ್ಲಿ ಕೆಲವು ಬದಲಾವಣೆಗಳು ಆಗುತ್ತಲೇ ಬಂದಿವೆ..

ಪುರಾಣ ಕಾಲದಿಂದಲೂ ಕೂಡ ಹೆಣ್ಣನ್ನು ಒಂದು ವಿಶೇಷ ರೀತಿಯಲ್ಲಿ ನೋಡುತ್ತಿದ್ದೇವೆ, ದುರ್ಗೆ,ಕಾಳಿ, ಪಾರ್ವತಿ,ಮಹಿಷಾಸುರ ಮರ್ದಿನೀ ಚಾಮುಂಡೇಶ್ವರಿ, ಇತ್ತೀಚಿನ ದಿನಗಳಲ್ಲೂ ಕೂಡ ಹೆಣ್ಣು ಮಕ್ಕಳು ಎಲ್ಲಾ ಸ್ಥಾನದಲ್ಲೂ, ಎಲ್ಲಾ ವಿಭಾಗದಲ್ಲೂ ಇದ್ದಾರೆ.. ಎಂದೆಂದಿಗೂ ಇವರು ಎಲ್ಲರಿಗೂ ಸ್ಫೂರ್ತಿಯೇ ..

ಆದರೆ ಇತ್ತೀಚಿನ ದಿನಗಳಲ್ಲಿ ನಾವು ಎಷ್ಟೇ ಬದಲಾವಣೆಗಳನ್ನು ಮಾಡಿಕೊಂಡು ನಾವು ಏನೆ ಆಧುನಿಕತೆಯನ್ನು ಅನುಸರಿಸಿದರು, ಎಷ್ಟೇ ಸ್ವಚ್ಛಂದವಾಗಿ, ಯಾರ ಹಂಗು ಇಲ್ಲದೆ ಇರಬೇಕೆಂದರು ಕೂಡ ಹಲವಾರು ರೀತಿಯಲ್ಲಿ ಹೆಣ್ಣು ಮಕ್ಕಳನ್ನು ಕೆಲವು ಕೈಗಳು ಕಟ್ಟಿಹಾಕುತ್ತಲೇ ಇವೆ ಎಂದರೆ ತಪ್ಪಾಗಲಾರದು..

ಇದಕ್ಕೆ ಇದೇ ನಿರ್ದಿಷ್ಟ ಕಾರಣಗಳು ಎಂದು ಹೇಳಲಾಗುತ್ತಿಲ್ಲ,, ಹುಟ್ಟಿದ ಮಗುವಿನಿಂದ ಹಿಡಿದು ವಯಸ್ಸಾದ ಹೆಣ್ಣು ಮಕ್ಕಳವರೆಗೂ ಯಾರನ್ನು ಈ ಸಮಸ್ಯೆ ಕಾಡದೇ ಬಿಡುತ್ತಿಲ್ಲ,, ಅತ್ಯಾಚಾರ ಅಥವಾ ಬೇರೆ ಯಾವುದೇ ಹೆಸರಿನಿಂದ ಕರೆದರೂ ಕೂಡ ಆ ಪದವನ್ನು ಕೇಳಿದರೆ ಒಂದು ರೀತಿ ಅಸಹ್ಯ ಬೇಸರ ಅನಿಸುತ್ತದೆ..

ಅಂದಿನಿಂದ ಇಂದಿನವರೆಗೆ ಪರಿಸ್ಥಿತಿ ಹೆಚ್ಚೇನು ಬದಲಾಗಿಲ್ಲ ಆಗ ಸಾಮಾಜಿಕ ಕಟ್ಟುಪಾಡು ಆದರೆ ಈಗಿನ ಕಾಲದ ಮಕ್ಕಳಿಗಾದರೂ ಇನ್ನೇನು?ಅವರನ್ನು ಕೂಡ ನಾವು ಎಲ್ಲಿಯೂ ಕಳಿಸುವಂತಿಲ್ಲ ಯಾರ ಜೊತೆಗೂ ಹೆಚ್ಚು ಬಿಡುವಂತಿಲ್ಲ ಅವರು



ಎಷ್ಟೇ ಪರಿಚಿತರಾದರು ಕೂಡ ತುಂಬಾ ಸಮಯದವರೆಗೆ ಅವರು ಹೋದರೆ ಆಗಲೇ ಒಂದು ರೀತಿಯ ಭಯ ಉಂಟಾಗುತ್ತದೆ.. ಹಾಗಂತ ಎಲ್ಲರೂ ಕೆಟ್ಟವರಲ್ಲ ಎಲ್ಲರನ್ನೂ ಅನುಮಾನದ ಭಾವದಿಂದ ನೋಡಬೇಕೆಂದಿಲ್ಲ ಆದರೆ ಪ್ರತಿನಿತ್ಯ ನ್ಯೂಸ್ ಪೇಪರ್ ನಲ್ಲಿ ಟಿವಿಯಲ್ಲಿ ಇನ್ಯಾವುದೋ ಸೋಶಿಯಲ್ ಮೀಡಿಯಾದಲ್ಲಿ ಬರುವ ವಿಷಯಗಳನ್ನೆಲ್ಲ ನೋಡಿದರೆ ಮೈ ಜುಮ್ ಎನ್ನುತ್ತದೆ,ಯಾರನ್ನು ನಂಬದಂತ ಸ್ಥಿತಿಗೆ ಬಂದು ತಲುಪಿದೆವಲ್ಲ ಎಂದು ಬೇಸರವಾಗುತ್ತದೆ.. ನಾವು ಭಾಷಣಗಳಲ್ಲಿ ಎಷ್ಟೆಲ್ಲಾ ಹೇಳಬಹುದು ಆದರೆ ವಾಸ್ತವಕ್ಕೆ ಬಂದರೆ ಎಲ್ಲವೂ ಅದೇ ರೀತಿ ಇರುವುದಿಲ್ಲ ಹಾಗಂತ ಹೆಣ್ಣು ಮಕ್ಕಳಿಗೆ ಇನ್ನೊಬ್ಬರ ರಕ್ಷಣೆಯು ಬೇಕೇ ಬೇಕು ಅವರಿಗೆ ಅವರನ್ನು ಕಾಪಾಡಿಕೊಳ್ಳಲು ಬರುವುದಿಲ್ಲ ಎಂದು ಹೇಳಲಾಗುವುದಿಲ್ಲ, ನೈಸರ್ಗಿಕವಾಗಿ ಹೆಣ್ಣು ಮಕ್ಕಳಿಗಿಂತ ಗಂಡಸರು ತುಂಬಾ ಬಲಶಾಲಿ ಆಗಿರುತ್ತಾರೆ, ಒಬ್ಬ ಹುಡುಗಿಯ ಮೇಲೆ ಮೂರು ನಾಲ್ಕು ಜನ ಗಂಡಸರು ಎರಗಿದಾಗ ಅವರು ಅವರು ಎಷ್ಟೇ ವಿರೋಧಿಸಿದರು ಕೂಡ ಅಂತಹ ದುಷ್ಟರ ಕೈಯಿಂದ ತಪ್ಪಿಸಿಕೊಳ್ಳಲು ಆಗಿರುವುದಿಲ್ಲ. ಮುಖ್ಯವಾಗಿ ಕಾರಣಕ್ಕಾಗಿ ಜೊತೆಯಲ್ಲಿ ಯಾರಾದರೂ ಇರಬೇಕು ಎನ್ನುತ್ತಾರೆ..

ಕೆಲವೊಬ್ಬರು ಈ ರೀತಿಯ ಮಾತುಗಳನ್ನು ಆಡಿದಾಗ ತುಂಬಾ ಸಿಡಿ ಮಿಡಿ ಮಾಡಿಕೊಳ್ಳುತ್ತಾರೆ ನೀವು ಹೆಣ್ಣಿನ ಬಗ್ಗೆ ಈ ರೀತಿ ಮಾತನಾಡುತ್ತೀರಿ ಅವಳು ಸ್ವತಂತ್ರಳು, ಅವಳ ಸ್ವತಂತ್ರವನ್ನು ಕಿತ್ತುಕೊಳ್ಳುತ್ತೀರಿ ಅವಳಿಗೆ ಅವಮಾನ ಮಾಡುವಂತ ಮಾತನಾಡುತ್ತೀರಿ ಎಂದು ಎಲ್ಲರೂ ಮಾತನಾಡುತ್ತಾರೆ ಆದರೆ ಅವರ ಮನೆಯ ಹೆಣ್ಣು ಮಕ್ಕಳ ವಿಷಯ ಬಂದಾಗ ಮಾತ್ರ ಎಲ್ಲರೂ ಅವರನ್ನು ಒಬ್ಬಳೇ ಹೋಗಬೇಡ ಜೊತೆಗೆ ಯಾರನ್ನಾದರೂ ಕರೆದುಕೊಂಡು ಹೋಗು ಎಂದು ಜೊತೆಗೆ ಯಾರನ್ನಾದರೂ ಕಳಿಸುತ್ತಾರೆ,

ಅದರಲ್ಲೂ ರಾತ್ರಿ ಒಬ್ಬರೇ ಹೋಗುವಂತಹ ಪರಿಸ್ಥಿತಿ ಇನ್ನೂ ಸಿಕ್ಕಿಲ್ಲ

ಇದಕ್ಕೆ ಯಾರೊಬ್ಬರನ್ನು ಹೊಣೆ ಮಾಡಲು ಆಗುವುದಿಲ್ಲ, ಕೆಲವೊಬ್ಬರು ಹೇಳುವುದನ್ನು ಕೇಳಿರಬಹುದು ಮನೆಯಲ್ಲಿ ಗಂಡು ಮಕ್ಕಳಿಗೆ ತಂದೆ ತಾಯಿಗಳು ಒಳ್ಳೆಯ ಸಂಸ್ಕಾರ ಕಲಿಸಿದರೆ ಯಾರು ತಪ್ಪನ್ನು ಮಾಡುವುದಿಲ್ಲ ಎಂದು ಆದರೆ ನನಗೆ ತಿಳಿದ ಮಟ್ಟಿಗೆ ಯಾವುದೇ ತಂದೆ ತಾಯಿಯಾದರೂ ಕೂಡ ಗಂಡು ಮಕ್ಕಳಿಗೂ ಕೂಡ ಒಳ್ಳೆಯ ಸಂಸ್ಕಾರವನ್ನೇ ಕೊಟ್ಟಿರುತ್ತಾರೆ, ಯಾರ ಜೊತೆಗೂ ಕೆಟ್ಟದಾಗಿ ನಡೆದುಕೊಳ್ಳದಂತೆ ಎಲ್ಲರನ್ನೂ ಒಳ್ಳೆಯ ದೃಷ್ಟಿಯಲ್ಲಿ ನೋಡುವಂತೆಯೇ ಹೇಳಿರುತ್ತಾರೆ ಆದರೆ ಅದೇನು ವಿಪರ್ಯಾಸವು ಗೊತ್ತಿಲ್ಲ ಅತ್ಯಾಚಾರದ ಸಂಖ್ಯೆಯಂತೂ ಕೇಳಿದರೆ ಗಾಬರಿಯಾಗುತ್ತದೆ ಅದರಲ್ಲೂ ಅತ್ಯಾಚಾರಕ್ಕೆ ಒಳಪಟ್ಟಿರುವ ಅಥವಾ ಆ ಕೆಲಸ ಮಾಡಲ್ಪಟ್ಟವರ ವಯಸ್ಸನ್ನು ಕೇಳಿದರೆ ಇನ್ನೂ ಗಾಬರಿಯಾಗುತ್ತದೆ ಅತಿ ಚಿಕ್ಕ ವಯಸ್ಸಿನವರು ಕೂಡ ಈ ರೀತಿಯ ತಪ್ಪುಗಳನ್ನು ಮಾಡುತ್ತಿರುವುದು ಭಯಪಡುವ ವಿಷಯ..

ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳ ತಂದೆ ತಾಯಿಗಳು ಎಷ್ಟೇ ಬುದ್ಧಿ ಹೇಳಿದರು ಸಹ ಈ ರೀತಿಯಾದ ಸಂದರ್ಭಗಳು ಬಂದಾಗ ಅವುಗಳನ್ನು ಎದುರಿಸುವುದು ತುಂಬಾ ಕಷ್ಟ ಹಾಗಾಗಿ ನನಗೆ ಅನ್ನಿಸಿದ ಮಟ್ಟಿಗೆ ಇವುಗಳಿಗೆ ಕಠಿಣ ಶಿಕ್ಷೆಯು ಒಂದು ದೊಡ್ಡ ಪರಿಹಾರವೇ ಎನ್ನಬಹುದು ಈ ರೀತಿಯಾದ ತಪ್ಪುಗಳನ್ನು ಯಾರೇ ಮಾಡಿದರು ಕೂಡ ಅವರಿಗೆ ತುಂಬಾ ದೊಡ್ಡ ಶಿಕ್ಷೆಗಳನ್ನೇ ಕೊಡಬೇಕು ಆಗ ಮುಂದೆ ಈ ರೀತಿಯ ಕೆಲಸಗಳಿಗೆ ಯಾರು ಮುಂದಾಗುವುದಿಲ್ಲ ಒಂದು ರೀತಿಯ ಭಯ ಇದ್ದೇ ಇರುತ್ತದೆ,, ಬಡವರು ಶ್ರೀಮಂತರು ಆಸ್ತಿ ಇದ್ದವರು ಇಲ್ಲದವರು ರಾಜಕಾರಣಿಗಳು ಸಿನಿಮಾದವರು ಯಾರೇ ಆಗಿದ್ದರೂ ಕೂಡ ಇದಕ್ಕೆ ಶಿಕ್ಷೆ ಸಿಗುವಂತೆ ಆಗಬೇಕು ಆಗ ಎಲ್ಲರಿಗೂ ಕಾನೂನಿನ ಕೈಯಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂದು ತಿಳಿದಾಗ ಕೆಲವು ವರ್ಷಗಳಲ್ಲಿ ನಿಯಂತ್ರಣಕ್ಕೆ ಬರಬಹುದು ಎಂದೆನಿಸುತ್ತದೆ.. ಹಾಗೂ ಅವರ ಶಿಕ್ಷೆಯು ಬೇರೆಯವರಿಗೆ ತಿಳಿಯುವಂತಾದಾಗ ಅವರಿಗೆ ಅವಮಾನವೂ ಆಗುತ್ತದೆ ಜೊತೆಗೆ ಉಳಿದವರಿಗೂ ಎಚ್ಚರ ಉಂಟಾಗುತ್ತದೆ, ತಪ್ಪಿತಸ್ತರಿಗೆ ಶಿಕ್ಷೆಯು ಬೇಗ ಸಿಗುವಂತಾಗಬೇಕು . ಹಾಗೂ ಕೆಲವರು ಕುಡಿದ ಮತ್ತಿನಲ್ಲೂ ಕೂಡ ಇಂತಹ ತಪ್ಪುಗಳನ್ನು ಮಾಡುತ್ತಾರೆ ಕುಡಿತವನ್ನು ನಿಲ್ಲಿಸುವುದು ಕೂಡ ತುಂಬಾನೇ ಅನಿವಾರ್ಯವಾಗಿದೆ.

ಕೆಲವು ದೇಶಗಳಲ್ಲಿ ಚಿಕ್ಕ ಪುಟ್ಟ ಕಳ್ಳತನಗಳು ಅಥವಾ ಏನಾದರೂ ಅಪರಾಧ ಮಾಡಿದವರಿಗೆ ಶಿಕ್ಷೆ ದೊರೆಯುತ್ತದೆ ಎಂಬ ಭಯದಿಂದ ಯಾರು ಕೂಡ ಅಂತಹ ತಪ್ಪುಗಳನ್ನು ಮಾಡುವುದಿಲ್ಲ ಅಂತಹದರಲ್ಲಿ ಇನ್ನೂ ಈ ರೀತಿಯಾದ ತುಂಬಾ ಕೆಟ್ಟದಾದ ಸಂದರ್ಭಗಳು ನಮ್ಮ ಸುತ್ತಮುತ್ತಲೇ ಕೇಳುತ್ತೇವೆ ಇದೆಲ್ಲವೂ ಖಂಡಿತವಾಗಿ ಬದಲಾಗಲೇಬೇಕು ಗಾಂಧೀಜಿಯ ರಾಮ ರಾಜ್ಯದ ಕನಸು ನನಸಾಗಲೇಬೇಕು ಆಗ ಎಲ್ಲಾ ವಯಸ್ಸಿನ ಹೆಣ್ಣು ಮಕ್ಕಳು ಕೂಡ ಯಾವುದೇ ಭಯವಿಲ್ಲದೆ ಸುಖ ಸಂತೋಷದಿಂದ ನೆಮ್ಮದಿಯಾಗಿ ಓಡಾಡಬಹುದು ಅವರ ತಂದೆ ತಾಯಿಗಳು ಕೂಡ ಅವರನ್ನು ಎಲ್ಲಿಗೆ ಬೇಕಾದರೂ ಯಾವುದೇ ಅಂಜಿಕೆ ಇಲ್ಲದೆ ಕಳಿಸಬಹುದು.

# ಮತ್ತದೇ ಹೊಂದಾಣಿಕೆ

ಸ್ನೇಹ ಲೋಕ



ಸ್ನೇಹಾ ಆನಂದ್

ಮಾಯಾ ಎರಡು ತಿಂಗಳಿಂದ ತುಂಬಾ ಲೆಕ್ಕಾಚಾರದಿಂದ ದುಡ್ಡು ಖರ್ಚು ಮಾಡುತಿದ್ದಳು, ಗಂಡನ ಕಂಪನಿಯು ಅನಿರೀಕ್ಷಿತವಾಗಿ ಮುಚ್ಚಿ ಹೋಗಿತ್ತು, ಆದರೆ ಆ ಕಂಪನಿಯವರು ಮಾನವೀಯ ದೃಷ್ಟಿಯಿಂದ ಬೇರೆ ಕಂಪನಿಯಲ್ಲಿ ತಮ್ಮ ನಿಷ್ಠಾವಂತ ವ್ಯಕ್ತಿಗಳಿಗೆ ಪ್ರಯತ್ನ ಪಟ್ಟು ಕೆಲಸ ಕೊಡಿಸಿದ್ದರು!

ಆದರೆ ಸಂಬಳ ಮಾತ್ರ ಅರ್ಧದಷ್ಟು , ಹೀಗಾಗಿ ತಿಂಗಳ ಲೆಕ್ಕಾಚಾರ ಮೇಲು ಕೆಳಗಾಗಿತ್ತು!

ಒಂದಕ್ಕಿದ್ದರೆ ಇನ್ನೊಂದಿಕ್ಕಿಲ್ಲ ಎನ್ನುವ ಪರಿಸ್ಥಿತಿ ಏರ್ಪಟ್ಟಿತ್ತು!

ಮಾಯಾ ತನ್ನ ಮನೆ, ಮಕ್ಕಳ ಜವಾಬ್ದಾರಿಗೆ ದುಡ್ಡು ಕೂಡಿಡುತ್ತಿದ್ದಳೇ ಹೊರತು ಒಂದು ದಿನವೂ ತನಗಾಗಿ ಖರ್ಚು ಮಾಡದ ಮಾಯಾ ಈ ನಡುವೆ ಸ್ವಲ್ಪ ಮಕ್ಕಳ ಜವಾಬ್ದಾರಿ ಕಳೆದು ತನಗಾಗಿ ಜೀವಿಸುವ ಹಂಬಲ ಹಾಗು ಒಂದಿಷ್ಟು ಏನಾದರೂ ಒಡವೆ, ಸೀರೆಗಳನ್ನು ತೆಗೆದುಕೊಳ್ಳುವ ಆಸೆಯನ್ನು ಗಂಡನ ಹತ್ತಿರ ವ್ಯಕ್ತ ಪಡಿಸಿದ್ದಳು!

ಅಷ್ಟರಲ್ಲೇ ಅವರ ಜೀವನದ ದಾರಿಯಲ್ಲಿ ಅಚಾನಕ್ಕಾಗಿ ಕಷ್ಟದ ದಿನಗಳ ಸೇರ್ಪಡೆಯಾಗಿತ್ತು!

ಅನಿವಾರ್ಯತೆ ಈಗ ಅವಳ ಕೈ ಕಟ್ಟಿಹಾಕಿ ಹಾಕಿತ್ತು, ಆದರೆ ಮನಸ್ಸಿಗೆ ಒಂದು ಸಮಾಧಾನ ಏನೇ ಊಟ ಮಾಡಿದರೂ ಸಾಲ ಮಾಡದೇ ಎರಡು ಹೊತ್ತು ಊಟ ಮಾಡುವಷ್ಟು ದೇವರು ಕೊಟ್ಟಿದ್ದಾನೆ ಅಷ್ಟು ಸಾಕು, ಬಟ್ಟೆಬರೆ, ಚಿನ್ನ ಅವುಗಳೇ ಜೀವನವಲ್ಲ, ಯಾವಾಗಲಾದರೂ ಖರೀದಿಸಿದರಾಯಿತು, ನೆಮ್ಮದಿಯ ಎರಡು ಹೊತ್ತಿನ ಊಟ, ದೈಹಿಕ ಆರೋಗ್ಯ, ಜೀವನಕ್ಕೆ ಮುಖ್ಯ ಎಂದೆನಿಸಿ, ಗಂಡನಿಗೆ ಧೈರ್ಯ ತುಂಬಿದಳು!

ಒಂದು ದಿನವೂ ಯಾರ ಮುಂದೆಯೂ ತನ್ನ ಕಷ್ಟಗಳನ್ನು ಹೇಳಿಕೊಳ್ಳದ ಮಾಯಾ

ಒಂದಲ್ಲ ಒಂದು ದಿನ ನಮ್ಮ ಜೀವನ ಸರಿ ಹೋಗುತ್ತದೆ ಎಂದುಕೊಂಡು, ನಂಬಿದ ದೇವರು ಎಂದೂ ನಮ್ಮ ಕೈ ಬಿಡನು ಎನ್ನುವ ಭರವಸೆಯಲ್ಲಿ ಜೀವನದ ಹಾದಿಯಲ್ಲಿ ಧೈರ್ಯದಿಂದ ಇಬ್ಬರೂ ಮುಂದೆ ಸಾಗಲು ನಿರ್ಧರಿಸಿದರು!

ಮಾಯಾ ಮನದಲ್ಲೇ ನಕ್ಕು ಇಂತಹ ದಿನಗಳು ನನಗೇನು ಹೊಸತಲ್ಲವಲ್ಲ ಎಂದುಕೊಂಡು ಎಷ್ಟೋ ದಿನಗಳಿಂದ ಮುಚ್ಚಿಟ್ಟಿದ್ದ ಲೆಕ್ಕಾಚಾರದ ಪುಸ್ತಕ ಮತ್ತೇ ಹೊರ ತೆಗೆದಳು!

ದೂರದೆಲೆಲ್ಲೋ ಒಂದು ಹಾಡು ಕೇಳಿ ಬರುತ್ತಿತ್ತು, ನಾನು ಬಡವಿ ಆತ ಬಡವ ಒಲವೇ ನಮ್ಮ ಬದುಕು!



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,